ಇನ್ನೂ 16,400 ಉಪಾಧ್ಯಾಯರುಗಳು ಬೇಕೆಂದು ಹೇಳುತ್ತಿದ್ದಾರೆ. ಅವರನ್ನು ತಯಾರುಮಾಡುವ ಕಾರ್ಖಾನೆ ಯಾವುದೋ ಗೊತ್ತಿಲ್ಲ. ಎಷ್ಟೋ ಶಾಲೆಗಳಲ್ಲಿ ಉಪಾಧ್ಯಾಯರೇ ಇಲ್ಲ. ಆರೆಂಟು ತಿಂಗಳುಗಳಿಂದ ಮುಚ್ಚಿರುವ ಶಾಲೆಗಳು ನಮ್ಮ ಕಡೆ ಇವೆ. ಹೀಗಾದರೆ ವಿದ್ಯಾಭ್ಯಾಸ ಹೇಗೆ ಮುಂದುವರಿದೀತು? ನಮ್ಮ ಮೈಸೂರು ಸಂಸ್ಥಾನದಲ್ಲಿ ಟ್ರೈನ್ಡ್ ಟೀಚರ್ಸ್ ಸಾಕಾದಷ್ಟಿಲ್ಲ. ನಮ್ಮ ಅಣ್ಣಾರಾಯರು ಬೇರೆ ಸ್ಥಳದಲ್ಲಿ Women's ಟ್ರೈನಿಂಗ್ ಕಾಲೇಜ್ ತೆರೆಯ ಅನುಕೂಲ ಮಾಡುವುದಾಗಿ ಹೇಳಿದ್ದರು. ಆದರೆ ಎಕ್ವಿಪ್‌ಮೆಂಟ್ ಕೊಟ್ಟರೆ ಆ ಪ್ಯಾಕನ್ನೇ ಬಿಚ್ಚಿಲ್ಲ; ಆದನ್ನಿಡುವುದಕ್ಕೆ ಸ್ಥಳವೇ ಇಲ್ಲ.

ಮಿಡ್ಲ್ ಸ್ಕೂಲು ಮತ್ತು ಹೈಸ್ಕೂಲು ಒಂದು ಕಡೆ ಇವೆ. ಕಾಂಪೌಂಡಿನಲ್ಲಿ ಕಾಲೇಜಿಗೆ ಸ್ಥಳಕೊಟ್ಟು ತೊಂದರೆಯಾಗಿದೆ, ದಯವಿಟ್ಟು ಅದನ್ನು ನೋಡಿ Women's Training Collegeಗೆ ಬೇರೆ ಜಾಗ ಕೊಡಿ, ಜಲದರ್ಶಿನಿಯ ಬಳಿ ಬೇಕಾದಷ್ಟು ಜಾಗವಿದೆ ಎಂದು ಬೇಕಾದಷ್ಟು ಹೇಳಿದ್ದಾಯಿತು. ಕಾಲೇಜು ಈಗಿರುವ ಸ್ಥಳದಲ್ಲಿದ್ದರೆ ಸರಿಯಾದ ಮರ್ಯಾದೆ ಬರುವುದಿಲ್ಲ, ಬೇರೆ ಅವಕಾಶ ಮಾಡಿಕೊಡಿ ಎಂದು ಹೇಳಲಾಗುತ್ತಿದೆ. ಈ ಕಡೆ ಗಮನಕೊಡಬೇಕು. ಗುಂಡ್ಲುಪೇಟೆ ತಾಲ್ಲೂಕಿನ ಹೈಸ್ಕೂಲು ಕಟ್ಟಡ ಬೀಳುವ ಸ್ಥಿತಿಯಲ್ಲಿದೆ. ಅದನ್ನು ಕಟ್ಟಿರುವ ಕಂಟ್ರಾಕ್ಟರು ಹಳೇ ಪಬ್ಲಿಕ್ ವರ್ಕ್ಸ್ ಇಲಾಖಾ ಮಂತ್ರಿಗಳ ಭಕ್ತ. ಆದ್ದರಿಂದ ಅವನನ್ನು ಉದ್ಧಾರಮಾಡಬೇಕೆಂದು ಆ ಕಂಟ್ರಾಕ್ಟರಿಗೆ ಏನು ಶಿಕ್ಷೆಯನ್ನೂ ಕೊಟ್ಟಿಲ್ಲ. ಮದ್ದೂರು ಕಾಲೋನಿಯಲ್ಲಿನ ವ್ಯವಹಾರ ಹೀಗಿದೆ. ಹೈಸ್ಕೂಲು ಬೀಳುವ ಪರಿಸ್ಥಿತಿಯಿದೆ. ಹಾಗೆ ಕಟ್ಟಲು ಏಕೆ ಅವಕಾಶಕೊಡಬೇಕು? ಈ ಕಷ್ಟದಿಂದ ಪಾರಾಗಲು ಮಾರ್ಗ ಕೋರಿಸಿ. ನಮ್ಮ ಕಡೆ ಒಂದು ಕಾಸು ಕೊಡುವವರೂ ಇಲ್ಲ. ಹೇಗಾದರೂ ಈ ಹೈಸ್ಕೂಲ್‌ನ್ನು ಉದ್ಧಾರಮಾಡಬೇಕು.

ಇನ್ನು ಯೂನಿವರ್ಸಿಟಿಯ ವಿದ್ಯಾಭ್ಯಾಸದ ವಿಚಾರ. ಸ್ಕಾಲರ್‌ಷಿಪ್ ಕಮಿಟಿಯಲ್ಲಿ ನಾನೂ ಒಬ್ಬ ಮೆಂಬರು. ಮಹಾರಾಣಿ ಕಾಲೇಜಿನಲ್ಲಿ ನವೆಂಬರ್ ಅಥವಾ ಡಿಸೆಂಬರಿನಲ್ಲಿ ಮೀಟಿಂಗ್ ಕರೆಯುತ್ತಾರೆ. ಸ್ಕಾಲರ್‌ಷಿಪ್, ಫ್ರೀಷಿಪ್‌ಕೊಡುವುದು ಜನವರಿಯಲ್ಲಿ. ಆಗ ಎಗ್ಸಾಮಿನೇಷನ್ ಫೀಜು ಬೇರೆ ಕಟ್ಟಬೇಕು. ಫೀಜು ಮಾಫಿ ಆಗದಿದ್ದರೆ ಅದನ್ನೂ ಒದಗಿಸಿಕೊಳ್ಳಬೇಕು. ಆಗ ಮಕ್ಕಳ ಸಂಕಟ ಹೇಳುವುದಕ್ಕೆ ಸಾಧ್ಯವಿಲ್ಲ. ನಿನ್ನೆ ತಾನೆ ಸೇಕಡ 30 ರಷ್ಟು ವಿದ್ಯಾರ್ಥಿವೇತನ ಕೊಡುತ್ತೇವೆಂದು ವಿದ್ಯಾಸಚಿವರು ಹೇಳಿದರು. ಇದು ಯಾವ ಮೂಲೆಗೆ ಸಾಕು? ಹೆಣ್ಣುಮಕ್ಕಳಿಗೆ ಉಚಿತವಾಗಿ ವಿದ್ಯಾಭ್ಯಾಸ ಒದಗಿಸಬೇಕು. ಅದನ್ನು ಬಿಟ್ಟು ನೀವು 30 per cent ಹುಡುಗರಿಗೆ ಕೊಡುತ್ತೇವೆಂದರೆ ಯಾವ ನ್ಯಾಯ? ಆದ್ದರಿಂದ ಈ ಸ್ಕಾಲರ್‌ಷಿಪ್ ಫ್ರೀಷಿಪ್‌ಗಳನ್ನೇನಿದ್ದರೂ ಸೆಪ್ಟೆಂಬರಿನಲ್ಲಿಯೇ ಏಕೆ ಮಾಡಿ ಮುಗಿಸಕೂಡದು?

ಆ ಮೇಲೆ ಹೆಂಗಸರಿಗೆ ಪಾಲಿಟೆಕ್ನಿಕ್ ಎಂಬುದು ಮೈಸೂರಿನಲ್ಲಿ ತೆಗೆಯುವುದನ್ನು ಬಿಟ್ಟು ಈಗ ಬೆಂಗಳೂರಿನಲ್ಲಿ ಏರ್ಪಡಿಸಿದ್ದಾರೆ. ನಾನು ಇದೇ ವಿಷಯವನ್ನು ಶ್ರೀಮಾನ್ ಅಣ್ಣಾರಾಯರಿಗೂ ಹೇಳಿದ್ದೆ. ಸಾಧ್ಯವಾದರೆ ಮಾಡುತ್ತೇವೆಂದಿದ್ದರು. ಅದನ್ನು ಮಾಡಲಿಲ್ಲ.

ಇನ್ನು ಮೆಡಿಕಲ್ ವಿಚಾರ ಸ್ವಲ್ಪ ಹೇಳಬೇಕೆಂದರೆ ನಮ್ಮ ಚೆಲುವಾಂಬಾ ಆಸ್ಪತ್ರೆಯ ವಿಚಾರ. ನಾವೆಲ್ಲಾ ದೇಶಭಕ್ತರಾಗಿರಬೇಕೆಂಬುದೇನೋ ಸರಿಯೇ. ಆದರೂ ಈ ಆಸ್ಪತ್ರೆಗೆ ಅದೇ ದೇಶಭಕ್ತಿಯಿಂದ ಬರೀ ಖಾದಿಯ ಬಟ್ಟೆಯನ್ನು ಸಪ್ಲೈ ಮಾಡಿಬಿಟ್ಟಿದ್ದಾರೆ. ಈ ಬಟ್ಟೆಗಳೋ ಎರಡು ಸಲ ಅಗಸನಿಗೆ ಹೋಗಿಬಂತೆಂದರೆ ಹತ್ತಿ ಹತ್ತಿಯಾಗಿ ಕಿತ್ತುಬರುತ್ತದೆ. ದಯವಿಟ್ಟು ಇದನ್ನು ಅಲ್ಲಿಗೆ ಕೊಡಬೇಡಿ. ಇದರ ಕಷ್ಟದ ಅನುಭವ ನಿಮಗಿದೆಯೋ ಇಲ್ಲವೋ ಗೊತ್ತಿಲ್ಲ. ದಯವಿಟ್ಟು ಇದಕ್ಕೆ ಬದಲು ಬೇರೆ ಬಟ್ಟೆಯನ್ನು ಕೊಡಬೇಕೆಂದು ಹೇಳುತ್ತೇನೆ.

M.S. ಮತ್ತು M.D. ಕೋರ್ಸ್‌ಗಳನ್ನು ತೆರೆಯಬೇಕೆಂದು ಕೋರಿದ ಶ್ರೀಮಾನ್ ಸೂರ್ಯನಾರಾಯಣ ರಾಯರ ಹೇಳಿಕೆಯನ್ನು ನಾನು ಸಂಪೂರ್ಣವಾಗಿ ಪುಷ್ಟೀಕರಿಸುತ್ತೇನೆ. ಆದರೆ ಅದೇನೋ ಇಲ್ಲಿಂದ ದೊಡ್ಡ ದೊಡ್ಡ ಡಾಕ್ಟರುಗಳು ಬೇರೆ ಕಡೆಗೆ ಹೋಗುವುದಿಲ್ಲವೆಂದು ಗರಂಟಿ ಮಾಡುತ್ತಿದ್ದಾರೆಂದು ಕೇಳಿದೆ. ಇದು ಸರಿಯಲ್ಲ. ಆ ರೀತಿ ಇಲ್ಲಿಯೇ ಇಟ್ಟುಕೊಳ್ಳುತ್ತೇವೆಂದು ಯಾವ ಡಾಕ್ಟರಿಗೂ ಸರ್ಕಾರ ಬರೆದು ಕೊಟ್ಟಿಲ್ಲ. ಎಷ್ಟೋ ಜನ ಡಾಕ್ಟರುಗಳು ಮೈಸೂರು ಬೆಂಗಳೂರನ್ನು ಬಿಟ್ಟು ಹೊರಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲವಂತೆ. ಏಕೆ ಅವರು ಹೋಗಬಾರದು? ಒಂದು ಆಸ್ಪತ್ರೆಯಿಂದ ಇನ್ನೊಂದು ಆಸ್ಪತ್ರೆಗೆ ಏಕೆ ಹೋಗಕೂಡದು? ದಯವಿಟ್ಟು ಈ ಡಾಕ್ಟರುಗಳನ್ನು ಮೈಸೂರಿಗೋ ಅಥವಾ ಎಲ್ಲಿಗೆ ಬೇಕೋ ಅಲ್ಲಿಗೆ ವರ್ಗಾಯಿಸಿ M.D. ಮತ್ತು M.S. ಕೋರ್ಸ್‌ಗಳನ್ನು ಷುರುಮಾಡಬೇಕೆಂದು ಹೇಳುತ್ತೇನೆ.

ಆ ಮೇಲೆ ಹಳ್ಳಿಗಳ ಆಸ್ಪತ್ರೆಗಳಿಗೆ ಸರಿಯಾಗಿ ಔಷಧಿಗಳು ಸರಬರಾಯಾಗದಿರುವುದು. ಈ ಕಡೆಗೆ ಗಮನಕೊಡಬೇಕೆಂದು ಆರೋಗ್ಯ ಮಂತ್ರಿಗಳಿಗೆ ಹೇಳುತ್ತೇನೆ.

ಮೈಸೂರು ಜನರಲ್ ಆಸ್ಪತ್ರೆಗೆ ಯೂನಿಟ್ ಸಿಸ್ಟಮನ್ನು ತಂದಿರುವುದೇನೋ ಸರಿ. ಎಲ್ಲಾ ದೇಶಗಳಲ್ಲೂ ಇದು ಚೆನ್ನಾಗಿ ನಡೆಯುತ್ತಿದೆ. ನಾನು ಪರದೇಶಗಳಲ್ಲೂ ನೋಡಿದ್ದೇನೆ. ಆದರೆ ಮೈಸೂರು ದೇಶದಲ್ಲೇಕೋ ಇದು ಸರಿಯಾಗಿ ನಡೆಯುತ್ತಿಲ್ಲ. ಸಮಯದಲ್ಲಿ ಅಸಿಸ್ಟೆಂಟ್ ಡಾಕ್ಟರುಗಳು ಎಷ್ಟು ಹೊತ್ತು ದೊಡ್ಡ ಡಾಕ್ಟರುಗಳನ್ನು ಹುಡುಕಿಕೊಂಡು ಹೊರಟರೂ ಅವರು ಎಲ್ಲಿ ಹೋಗಿರುತ್ತಾರೋ ಸಿಕ್ಕುವುದೇ ಇಲ್ಲ. ಬೇರೆ ದೇಶಗಳಲ್ಲಿ ಹಾಗಲ್ಲ. ದೊಡ್ಡ ಡಾಕ್ಟರನ್ನು ನೋಡಬೇಕೆಂದರೆ ಬಣ್ಣದ ದೀಪವನ್ನು ಹಾಕುತ್ತಾರೆ. ಅದು ಡಾಕ್ಟರು ಬರುವವರೆಗೂ ಮಿಣಕ್ ಮಿಣಕ್ ಅನ್ನುತ್ತಿರುತ್ತದೆ. ಒಡನೆಯೇ ಡಾಕ್ಟರು ಬಂದು ನೋಡುತ್ತಾರೆ. ಆದರೆ

ನಮ್ಮಲ್ಲಾದರೋ ಈ ದೊಡ್ಡ ಡಾಕ್ಟರುಗಳು ಆಸ್ಪತ್ರೆಯಲ್ಲೇ ಇರುವುದಿಲ್ಲ. ಎಲ್ಲೋ ಪ್ರೈವೇಟ್ ಪ್ರಾಕ್ಟೀಸಿಗೆ ಹೋಗಿರುತ್ತಾರೆ. ಹೆಸರಿಗೆ ಮಾತ್ರ ಅ್ಯಲೋಪತಿ, ಹೋಮಿಯೋಪತಿ—ಏನೋನೋ ಅವರು ಮಾಡಿಕೊಂಡಿರುತ್ತಾರೆ. ಆದರೆ 'ಸಿಂಪತಿ' (Sympathy) ಮಾತ್ರ ಇವರಿಗಿರುವುದಿಲ್ಲ. ಹೀಗಾಗಿ ಎಷ್ಟೋ ಕೇಸುಗಳು ಸತ್ತೇ ಹೋಗಿರುವುದೂ ಉಂಟು. ತಾವಾದರೂ ಈ ವಿಷಯದಲ್ಲಿ 'ಸಿಂಪತಿ' ವಹಿಸಿ ಸೂಕ್ತ ವ್ಯವಸ್ಥೆ ಮಾಡುತ್ತೀರೆಂದು ನಂಬಿದ್ದೇನೆ.

ಮೈಸೂರ್ ಸ್ಟೇಟ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಇಂದು ಪ್ರಶ್ನೋತ್ತರಗಳ ಕಾಲದಲ್ಲಿ ಒಂದು ಉತ್ತರ ಬಂತು. ನಮ್ಮ ಊರಿನ ಹತ್ತಿರವೇ ಮೈಲಿ ಕಲ್ಲಿದೆ. ಹತ್ತಿರ ನಾಲ್ಕು ಫರ್ಲಾಂಗ್ ಕೂಡ ಸ್ಟಾಂಡಿನಿಂದಾಗುವುದಿಲ್ಲ. ಅಂಥಾದರಲ್ಲಿ ನಮ್ಮ ಊರನ್ನು ಒಂದು Sub Stage Point ಎಂದು ಪರಿಗಣಿಸಿ ಚಾರ್ಜು ಮಾಡುವುದು ಸರಿಯಲ್ಲ. ಪ್ರೈವೇಟ್ ಬಸ್ ಮಾಲೀಕರನ್ನು ತಪ್ಪಿಸಿ ಸರ್ಕಾರದವರು ತೆಗೆದುಕೊಂಡಿದ್ದರ ಉದ್ದೇಶವೇನು ? Minimum charge—Maximum Comfort ಅಲ್ಲವೇ ? ಆದ್ದರಿಂದ ಸಾಧ್ಯವಾದಷ್ಟು ಅನುಕೂಲತೆಯನ್ನು ಮಾಡಿಕೊಟ್ಟು ಬಸ್ಸುಗಳನ್ನು ಸರಿಯಾಗಿ ನಡೆಸಬೇಕೆಂದು ಹೇಳುತ್ತೇನೆ.

ಆ ಮೇಲೆ ಕಂಡಕ್ಟರುಗಳು ಒಂದೊಂದು ರೀತಿಯಲ್ಲಿ ಹಣ ತೆಗೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ prescribed ನಿಬಂಧನೆಗಳಿಲ್ಲವೆಂದು ಹೇಳಿದರು. ಇದನ್ನು ಸರಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಪೋಲೀಸ್ ವಿಚಾರದಲ್ಲಿ ಒಂದು ಮಾತು. ಪೋಲೀಸ್ ಸ್ಟೇಷನ್‌ಗಳನ್ನು Re-arrange ಮಾಡಬೇಕೆನ್ನುತ್ತೇನೆ. ಇಷ್ಟು ಮಾತ್ರ ಹೇಳಿ ಮುಂದೆ ಈ ವಿಷಯದ ಮೇಲೆ Demand ಬಂದಾಗ ನನಗೆ ಹೆಚ್ಚಿಗೆ ಕಾಲಾವಕಾಶವನ್ನು ದಯವಿಟ್ಟು ಕೊಡಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಶಿಮಠ್ ಸಿದ್ದಯ್ಯ ವೀರಯ್ಯ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಈ ಆಯವ್ಯಯ ಅಂದಾಜದ ವಿಚಾರವಿನಿಮಯ ಮಾಡುವಾಗ ಕನಿಷ್ಠಪಕ್ಷ ಒಂದು ವರ್ಷದ ಹಿಂದಿನ ಆಯವ್ಯಯದ ಅಂದಾಜಿನ ಪಟ್ಟಿಯೊಡನೆ ಸರಿತೂಗಿ ನೋಡಬೇಕೆಂದು ಹೇಳಿ ನಾನು ನೋಟೀಸ್ ಆಫೀಸಿಗೆ ಹೋಗಿ ಅಲ್ಲಿ ಅದನ್ನು ಕೇಳಿದರೆ 1961-62 ನೆಯ ಅಂದಾಜಿನ ಪಟ್ಟಿ ಸಿಕ್ಕದಿರುವಂಥ ಪರಿಸ್ಥಿತಿ ಹೊರಪಟ್ಟಿತು. ಅದೇ ರೀತಿ ಅನೇಕ ಆಕ್ಟುಗಳೂ ಕೂಡ ಅಲ್ಲಿ ಸಿಕ್ಕುವುದಿಲ್ಲ. ಈ ಶಾಸನಸಭೆಗೆ ಹೊಸದಾಗಿ ಬಂದವರು ಅಂಥ ಸಂದರ್ಭದಲ್ಲಿ ಏನು ಮಾಡಬೇಕು ? ಈ ವರ್ಷದ ಆಯವ್ಯಯ ಪಟ್ಟಿಯಾದರೋ ಏಪ್ರಿಲ್ ತಿಂಗಳನಲ್ಲಿಯೇ ಮುಗಿಯಬೇಕಾಗಿತ್ತು. ಅದಾಗದೆ ಈಗ ಐದಾರು ತಿಂಗಳುಗಳು ಕಳೆದುಹೋಗಿದೆ. ಇನ್ನು ಈ ಬಜೆಟ್ ಪಾಸಾಗಿ, ಇಲ್ಲಿರುವ ಯೋಜನೆಗಳಿಗನುಗುಣವಾಗಿ ಟೆಂಡರುಗಳನ್ನು ಕರೆದು, ಕೆಲಸ ಪ್ರಾರಂಭಿಸಿ, ಮಿಕ್ಕ ನಾಲ್ಕು ತಿಂಗಳಲ್ಲಿ ಎಲ್ಲಾ ಕೆಲಸಗಳನ್ನು ಮುಗಿಸುವುದಕ್ಕೆ ಸಾಧ್ಯವೇ ?

Mr. SPEAKER.—The Hon'ble Members will please know that a copy of the 1960-61 Budget is available in the library and the current year's Budget is under discussion now. Any other books the Hon'ble Members might wish to refer, they can do so, in the library.

ಶ್ರೀ ಕಾಶಿಮಠ್ ಸಿದ್ದಯ್ಯ ವೀರಯ್ಯ.—ಮಾರ್ಚಿ ತಿಂಗಳಿಗೇ ಮುಗಿಯಬೇಕಾಗಿತ್ತು. ಇಲ್ಲವೆಂದರೆ, ಏಪ್ರಿಲ್ ತಿಂಗಳಿಗಾದರೂ ಮುಗಿಸಿದರೆ ಮುಂದಿನ ವರ್ಷದ ಕೆಲಸ ನಡೆಸುವುದಕ್ಕೆ ಅನುಕೂಲವಾಗುತ್ತದೆ.

ಹಿಂದಿನ ಮಂತ್ರಿಗಳು ನೆರೆಯ ಹಾವಳಿಯಲ್ಲಿ ಸಂತ್ರಸ್ತರಿಗೆ ನೀಡಿರುವ ಸಹಾಯದ ವಿಚಾರ ಸ್ವಲ್ಪ ಹೇಳಬಯಸುತ್ತೇನೆ. ನಮ್ಮ ಹಾವೇರಿ ತಾಲ್ಲೂಕಿನಲ್ಲಿ ಅವರು ಈ ಜನರಿಗೆ ಕಟ್ಟಿಕೊಟ್ಟಿರುವ ಮನೆಗಳ ವಿಷಯ ಏನು ಹೇಳಲಿ ! ಅವೊಂದರಲ್ಲೂ ವಾಸ ಮಾಡುವುದಕ್ಕೇ ಸಾಧ್ಯವಿಲ್ಲ. ಎಲ್ಲಾ ಕೋಳಿಯ ಗೂಡಿನ ಹಾಗಿವೆ. ಅಲ್ಲಿನ ಜನರು ಮೊದಲೇ ಇಂಥ ಮನೆಗಳು ತಮಗೆ ಬೇಡವೆಂದು ಪ್ರತಿಭಟಿಸಿದರೂ ಸರ್ಕಾರದವರು ಬಲಾತ್ಕಾರವಾಗಿ ಅವರನ್ನು ಈ ಮನೆಗಳಿಗೆ ತಂದು ನೂಕಿದರು. ತಮಗೆ ಒಂದಿಷ್ಟು ದುಡ್ಡು ಕೊಟ್ಟರೇ ಸಾಕು, ತಾವು ಸರಿಯಾದ ಏರ್ಪಾಡು ಮಾಡಿಕೊಳ್ಳುತ್ತೇವೆಂದು ಎಷ್ಟು ಹೇಳಿದರೂ ಸರ್ಕಾರದವರು ಅದಕ್ಕೆ ಗಮನ ಕೊಡದೆ ಅವರನ್ನು ಬಲಾತ್ಕಾರಮಾಡಿ ಅಲ್ಲಿಗೆ ದೂಡಿದರು. ಈಗ ಏನಾಗಿದೆ ! ಕಿತ್ತೂರು, ಚೆನ್ನೂರು ಮುಂತಾದ ಕಡೆ ಹೋಗಿ ನೋಡಿ. ನೀವು ಕೊಟ್ಟಿರತಕ್ಕ ಸೌಲಭ್ಯವೇನು ಎಂಬುದು ವೇದ್ಯವಾಗುತ್ತದೆ. ಇದರಿಂದ ಏನು ಪ್ರಯೋಜನವಾಗಿದೆಯೆಂಬುದು ತಮಗೇ ಮನವರಿಕೆಯಾಗುತ್ತಿದೆ. ನಾನಾ ರೀತಿಯಲ್ಲಿ ಸರ್ಕಾರದವರು ಸಾಲ ಕೊಡುತ್ತಿರುವಾಗ, ಈ ಒಂದು ಕಷ್ಟ ಪರಿಹಾರ ವ್ಯವಸ್ಥೆಗೆ ಕೇವಲ 50–100 ರೂಪಾಯಿಗಳ ಸಹಾಯಮಾಡಿದ್ದರೂ ಎಷ್ಟೋ ಜನರು ಅನುಕೂಲ ಮಾಡಿಕೊಳ್ಳುತ್ತಿದ್ದರು. ಮುಂದಾದರೂ ಏನು ಬೇಕೆಂದು ಅವರನ್ನು ಕೇಳಿ ಸಹಾಯಮಾಡಬೇಕೆಂದು ಹೇಳುತ್ತೇನೆ. ಅಷ್ಟೇ ಅಲ್ಲ ಇಲ್ಲಿ ಹೌಸಿಂಗ್ ಬೋರ್ಡಿನವರು ಯಾವ ರೀತಿ ಮನೆಗಳನ್ನು ಕಟ್ಟಿಸಿಕೊಟ್ಟು ಸಹಾಯಮಾಡಿದ್ದಾರೋ ಅದೇರೀತಿ ಕಡಮೆ ಕಂತುಗಳಲ್ಲಿ ಅಲ್ಲಿನವರಿಗೂ ಸಹಾಯಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

4 P.M.

ಇನ್ನು ಪಾನನಿರೋಧದ ಬಗ್ಗೆ ಕೆಲವು ವಿಷಯಗಳನ್ನು ಮಾತನಾಡುತ್ತೇನೆ. ಸರ್ಕಾರದವರು ಈಗ 19 ಜಿಲ್ಲೆಗಳ ಪೈಕಿ ಹದಿನಾರು ಜಿಲ್ಲೆಗಳಲ್ಲಿ ಪಾನನಿರೋಧ ಶಾಸನವನ್ನು ಜಾರಿಗೆ ತಂದಿದ್ದೇವೆಂದು ಹೇಳುತ್ತಾರೆ. ಅದು ಯಾವ ರೀತಿ ನಡೆದಿದೆಯೋ ನನಗೆ ಗೊತ್ತಾಗಲಿಲ್ಲ. ಏಕೆಂದರೆ ಕೆಲವು ದಿವಸಗಳ ಹಿಂದೆಯೇ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಪೋಲೀಸಿನವರೇ ಯಾವುದೋ ಒಂದು ಹಳ್ಳಿಯಲ್ಲಿ 150 ಕೊಡ ಸೆರೆ ಹಾಗೂ 2 ಡ್ರಾಂ ತುಂಬಿದ್ದ ಅಕ್ರಮ ಸೆರೆಯೊಳಗೊಂಡು ತೆಗೆಸಿಕೊಂಡ ಫೋಟೋ ವೃತ್ತ ಪತ್ರಿಕೆಯಲ್ಲಿಯೇ ಬಂದಿತ್ತು. ಅದು ಹೇಗೆ ಸಂಭವಿಸಿತು, ಯಾವ ರೀತಿ ಆ ಕೆಲಸ ನಡೆಯಿತು ಎಂಬುದನ್ನು ಸರ್ಕಾರದವರು ವಿಚಾರ ಮಾಡಬೇಕು. ಇದರಿಂದ ಹಿಂದೆ ಶೇಕಡ 5 ರಷ್ಟು ಕೆಡುತ್ತಿದ್ದುದು ಇತ್ತೀಚೆಗೆ ಶೇಕಡ 55 ರಷ್ಟು ಜನ ಕೆಡುತ್ತಿರುವ ಪರಿಸ್ಥಿತಿ ಒದಗಿದೆ. ಆದ್ದರಿಂದ ಇವರು ಮಾಡಿರತಕ್ಕ ಶಾಸನದಿಂದ ಏನೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಈ ಪಾನನಿರೋಧ ಶಾಸನವನ್ನು ದೇಶದಾದ್ಯಂತ ಕೂಡಲೇ ಜಾರಿಗೆತರುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳುತ್ತೇನೆ. ನಮ್ಮ ಭಾಗದಲ್ಲಿ ಇತ್ತೀಚೆಗೆ ಇದನ್ನು ತಯಾರು

(ಶ್ರೀ ಕಾಶಿಮಠ್ ಸಿದ್ದಯ್ಯ ವೀರಯ್ಯ)

ಮಾಡುವವರು ಲಂಬಾಣಿಯವರು ಮತ್ತು ಇತರ ಜನರು ಈ ಉದ್ಯಮವನ್ನು ಕೈಗೊಂಡು ತಜ್ಞರಾಗಿದ್ದಾರೆ. ನಮ್ಮ ಭಾಗದಲ್ಲಿ ಈ ಪಾನನಿರೋಧ ಶಾಸನವನ್ನು ಜಾಗ್ರತ ಜಾರಿ ಮಾಡದೇ ಇದ್ದರೆ ಜನರಿಗೆ ಬಹಳ ಕಷ್ಟವಾಗುತ್ತದೆಂಬ ಭಯ ನನಗಿದೆ.

ಇನ್ನೊಂದು ವಿಷಯ, ಪ್ರತಿಯೊಂದು ಜಿಲ್ಲೆಯೊಳಗೆ ಇತ್ತೀಚೆಗೆ ಟೂರಿಸ್ಟ್ಸ್ ಸೆಂಟರ್ ಏನಿವೆಯೋ ಅಲ್ಲಿ ಇಂತಹ ಮದ್ಯಪಾನಕ್ಕೆ ಪರ್ಮಿಟ್ ಮುಖಾಂತರ ಕೆಲವು ಕಡೆ ಅಂಗಡಿಗಳನ್ನು ತೆರೆಯಬೇಕೆಂದು ಸರ್ಕಾರ ಯೋಚಿಸಿದೆ. ಅದನ್ನೇನಾದರೂ ಮಾಡಿದರೆ ಖಂಡಿತವಾಗಿ ಬ್ಲಾಕ್‌ಮಾರ್ಕೆಟ್ಟಿಗೆ ಸರ್ಕಾರದವರೇ ಅನ್ವದ ಕೊಟ್ಟಹಾಗೆ ಆಗುತ್ತದೆ.

ಇನ್ನು ರಾಷ್ಟ್ರೀಯ ವಿಸ್ತರಣ ಯೋಜನೆಗಳ ಬಗ್ಗೆ ಮಾತನಾಡುವುದಾದರೆ ನಮ್ಮ ಭಾಗಕ್ಕೆ ಈಬಾಬಿಗೆ ಬಡ್ಜೆಟ್ಟಿನಲ್ಲಿ 12 ಲಕ್ಷರೂಪಾಯಿಗಳನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದಾರೆ. ಇದರ ಅರ್ಧದಷ್ಟು ಎಸ್ಟಾಬ್ಲಿಷ್‌ಮೆಂಟ್ ಖರ್ಚಿಗೇ ಹೋಗುತ್ತದೆ. ಉಳಿದ ದುಡ್ಡಿನಲ್ಲಿ ನಮ್ಮ ಭಾಗಕ್ಕೆ ಯಾವ ತರಹ ಪ್ರಯೋಜನವೂ ಇಲ್ಲ, ಏಕೆಂದರೆ ಈಗ ಕಂಟ್ರಿಬ್ಯೂಷನ್ ವಗೈರೆ ಕೊಡಬೇಕಾಗುತ್ತದೆ. ನಮ್ಮ ಕಡೆ ಮೂರು ವರ್ಷಗಳಿಂದಲೂ ಒಂದೇ ಸಮನೆ ಬರಗಾಲ ಪರಿಸ್ಥಿತಿ ಇರುವುದರಿಂದ ಜನಗಳಿಗೆ ಜೀವನವೇ ಬಹು ಕಷ್ಟವಾಗಿದೆ. ಈ ಬ್ಲಾಕುಗಳನ್ನು ಕಟ್ಟಿಸುವುದಕ್ಕಾಗಿ ತರತಕ್ಕ ಬಿಲ್ಡಿಂಗ್ ಮೆಟೀರಿಯಲ್ಸ್ ಸಾಕಷ್ಟು ಕಾಲಕ್ಕೆ ತಕ್ಕಹಾಗೆ ಬರದೆ ಕೆಲಸಗಳು ಅರ್ಧಮರ್ಧವಾಗಿ ನಿಂತುಹೋಗಿವೆ. ಅದಕ್ಕಾಗಿ ಉಪಯೋಗಿಸಿರುವ ಸಾಮಾನುಗಳು ಅಷ್ಟಾಗಿ ಬೆಲೆ ಬಾಳತಕ್ಕವಲ್ಲ. ಈಗಾಗಲೇ 2-3 ಸ್ಥಳಗಳಲ್ಲಿ ಅಲ್ಲಿನ ಗೋಡೆಗಳೆಲ್ಲಾ ಅಪಾಯಸ್ಥಿತಿಯುಂಟಾಗಿ ಬೀಳುವ ಪರಿಸ್ಥಿತಿ ಬಂದಿದೆ. ಒಂದೇ ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. 19 6ನೇ ಇಸವಿಯಲ್ಲಿ ಕಟ್ಟಿದ ತಾಲ್ಲೂಕ್ ಆಫೀಸು ಮತ್ತು 1957ನೇ ಇಸವಿಯಲ್ಲಿ ಕಟ್ಟಿದ ಬ್ಲಾಕ್‌ಡೆವಲಪ್‌ಮೆಂಟ್ ಆಫೀಸುಗಳ ಗೋಡೆಗಳು ಬಿರುಕುಬಿಟ್ಟು ಬಿದ್ದುಹೋಗುವ ಪರಿಸ್ಥಿತಿ ಬಂದಿದೆ. ಇದಲ್ಲದೆ ಬ್ಲಾಕ್‌ಡೆವಲಪ್‌ಮೆಂಟ್ ಆಫೀಸಿನಲ್ಲಿ ಮಾಡಿರತಕ್ಕ ಕೆಲಸ ಕಾರ್ಯಗಳು ಏನಿವೆಯೋ ಅವು ಅಷ್ಟು ಸಮರ್ಪಕವಾಗಿಲ್ಲ. ಆದರೆ ಅಲ್ಲಿನ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಒಂದೊಂದು ಉದ್ಯಾನವನಗಳನ್ನು ಕಟ್ಟಿಸುವಷ್ಟರ ಮಟ್ಟಿಗೆ ಕೆಲಸ ಮಾಡುತ್ತಾನೆ. ಆದರೆ ಅದನ್ನು ಯಾರುನೋಡಿಕೊಳ್ಳಬೇಕೆಂಬ ವಿಚಾರವನ್ನು ಸರ್ಕಾರದವರು ಇದುವರೆಗೂ ಪರಿಶೀಲಿಸದೆಯೇ ಇರುವುದರಿಂದ ಕೇವಲ ಇನ್ನೆರಡು ಮೂರುವರ್ಷಗಳಲ್ಲಿ ಆ ಆಫೀಸುಗಳೆಲ್ಲಾ ನಾಶವಾಗತಕ್ಕ ಪರಿಸ್ಥಿತಿ ಒಂದೊದಗಿದೆ. ಆದ್ದರಿಂದ ಸರ್ಕಾರದವರು ಈಗಲಾದರೂ ಈ ವಿಷಯದ ಕಡೆ ಹೆಚ್ಚಿನ ಗಮನಕೊಟ್ಟು ನಮ್ಮ ಭಾಗದಲ್ಲಿ ಹೆಚ್ಚಿಗೆ ಎ. ಇ. ಎಸ್. ಸ್ಕೀಮುಗಳನ್ನು ಮಾಡಬೇಕೆಂದು ನಾನು ಕೇಳುತ್ತೇನೆ. ಇನ್ನು ಬ್ಲಾಕುಗಳಲ್ಲಿ ಸುಧಾರಿಸಿದ ಬೀಜಗಳನ್ನು ಕೊಡುವ ವಿಷಯದಲ್ಲಿ ಹೇಳುವುದಾದರೆ ನಮ್ಮ ಭಾಗದಲ್ಲಿ ಜೋಳದ ಕೆಟ್ಟ ಬೀಜಗಳನ್ನು ಕೊಡುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರೆಗೂ ದೂರುಗಳು ಬಂದಿದ್ದುವು. ಈ ರೀತಿಯಾಗಿ ಕೆಟ್ಟ ಬೀಜಗಳನ್ನು ಸುಧಾರಿಸಿದ ಬೀಜಗಳೆಂದು ನಮ್ಮ ಭಾಗದ ರೈತರಿಗೆ ಸಪ್ಲೈಮಾಡಿದರೆ ಹೆಚ್ಚು ಆಹಾರೋತ್ಪಾದನೆ ಮಾಡುವುದು ಹೇಗೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಆದ್ದರಿಂದ ಮಂತ್ರಿಗಳು ಬ್ಲಾಕುಗಳಲ್ಲಿ ಭೇಟಿ ಮಾಡಿದಾಗ ಅದರಲ್ಲಿ ಶಂಕುಸ್ಥಾಪನೆ ಮತ್ತು ಸತ್ಕಾರ ಕೂಟ ಸಮಾರಂಭಗಳಲ್ಲಿ ಭಾಗವಹಿಸಿದಾಗ ಆ ಸಮಾರಂಭಗಳನ್ನೇ ಹೆಚ್ಚೆಂದು ಭಾವಿಸದೆ ಅಲ್ಲಿನ ಜನರ ಕಷ್ಟಸುಖಗಳೇನು, ಆ ಭಾಗದಲ್ಲಿ ಏನೇನು ಸೌಕರ್ಯಗಳನ್ನು ಒದಗಿಸಿಕೊಡಬೇಕು, ಅಲ್ಲಿನ ಪರಿಸ್ಥಿತಿ ಹೇಗಿದೆ ಎಂಬ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡುವುದಾದರೆ ಆಗ ಇಂತಹ ಅನ್ಯಾಯಗಳೆಲ್ಲವೂ ನಿವಾರಣೆಯಾಗಬಹುದು ಎಂದು ನನಗನ್ನಿಸುತ್ತದೆ. ಇಲ್ಲಿಯವರೆಗೂ ಯಾವ ಮಂತ್ರಿಗಳೂ ಆ ರೀತಿ ಮಾಡಿಲ್ಲವೆಂದು ನಾನು ಧೈರ್ಯವಾಗಿ ಹೇಳುತ್ತೇನೆ.

ಇನ್ನು ಪಿ. ಡಬ್ಲ್ಯು. ಡಿ. ವರ್ಕ್ಸ್ ಬಗ್ಗೆ ಹೇಳುವುದಾದರೆ ನಮ್ಮ ಭಾಗದಲ್ಲಿ ಕೆಲವು ಸೇತುವೆಗಳು 3-4 ವರ್ಷಗಳ ಹಿಂದೆಯೇ ಮಂಜೂರು ಮಾಡಿದ್ದರು. ಅದರ ಶಂಕುಸ್ಥಾಪನೆಯೂ ಆಯಿತು. ಅದಾದನಂತರ ಟೆಂಡರ್‌ಕರೆದು ಕೇವಲ 2-3 ತಿಂಗಳುಗಳಲ್ಲಿಯೇ ಆ ಟೆಂಡರನ್ನು ವಜಾ ಮಾಡಿ ಟೆಂಡರುದಾರರಿಗೆ ಕೆಲಸವೇನೂ ಇಲ್ಲವೆಂದು ತಿಳಿಸಿದ್ದಾರೆ. ಇಂತಹ ಎಷ್ಟೋ ಉದಾಹರಣೆಗಳನ್ನು ಬೇಕಾದರೆ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಸಿಗಲಿ ನಾಲೆಗೆ ಮೂರು ನಾಲ್ಕು ತಿಂಗಳುಗಳ ಹಿಂದೆ ಸುಮಾರು ನವೆಂಬರ್ ತಿಂಗಳಲ್ಲಿ ಅಸ್ತಿಭಾರ ಶಿಲೆಯನ್ನು ಉಪಮಂತ್ರಿಗಳು ಹಾಕಿದರು. ಟೆಂಡರ್ ಸಹ ಕರೆದರು. ಟೆಂಡರುದಾರ ಕೆಲಸ ಷುರು ಮಾಡುವ ಹೊತ್ತಿಗೆ ಅವನಿಗೆ ಈ ಕೆಲಸವನ್ನು ವಜಾ ಮಾಡಿದ್ದೇವೆಂದು ಉತ್ತರಕೊಟ್ಟರು. ಈ ರೀತಿ ಟೆಂಡರ್ ಕರೆಯುವುದಕ್ಕೂ ಈ ಬಗ್ಗೆ ಅಡ್ವರ್ಟೈಜ್, ಇತ್ಯಾದಿ ಖರ್ಚುಗಳನ್ನು ಮಾಡುವುದಕ್ಕೆ ಸಂಬಂಧಪಟ್ಟ ಇಲಾಖೆಗೆ ಎಷ್ಟೋ ಹಣ ವ್ಯಯವಾಗಿರುತ್ತದೆಂದು ನಾನು ತಿಳಿಯುತ್ತೇನೆ ಈ ರೀತಿ ಅನ್ಯಾಯವಾಗಿ ಸರ್ಕಾರದ ಹಣ ಖರ್ಚಾಗದಂತೆ ನೋಡಿಕೊಳ್ಳತಕ್ಕದ್ದು ನ್ಯಾಯವಾದುದೆಂದು ನಾನು ಹೇಳುತ್ತೇನೆ.

ಇನ್ನು ಮೆಡಿಕಲ್ ಬಗ್ಗೆ ಹೇಳುವುದಾದರೆ ನಮ್ಮ ಭಾಗದಲ್ಲಿ ಪ್ರೈಮರಿ ಹೆಲ್ತ್ ಯೂನಿಟುಗಳನ್ನು ಸರ್ಕಾರದವರು ಮೊದಲು ಮಂಜೂರುಮಾಡುತ್ತಾರೆ. ಆದರೆ ಆ ಹೆಲ್ತ್ ಯೂನಿಟ್ಟುಗಳಲ್ಲಿ ಡಾಕ್ಟರುಗಳೇ ಇಲ್ಲ. ಡಾಕ್ಟರುಗಳು ಇದ್ದರೆ ಸಿಬ್ಬಂದಿಯೇ ಇರುವುದಿಲ್ಲ. ಕೆಲವು ಕಡೆಗಳಲ್ಲಿ ಔಷಧಿಗಳೂ ಸಹ ಇರುವುದಿಲ್ಲ. ಇದರಿಂದ ಜನಗಳಿಗೆ ಖಂಡಿತ ಆರೋಗ್ಯ ಸೌಕರ್ಯ ಅಷ್ಟಾಗಿ ಸಮರ್ಪಕವಾಗಿ ಸಿಕ್ಕಲಾರದೆಂದು ನಾನು ಹೇಳುತ್ತೇನೆ. ಎ. ಇ. ಎಸ್. ಬ್ಲಾಕುಗಳಲ್ಲಿ ಈ ಔಷಧಿಗಳನ್ನು ಕೊಂಡುಕೊಳ್ಳುವುದಕ್ಕಾಗಿ ಸ್ವಲ್ಪ ಹಣವನ್ನು ಮಂಜೂರು ಮಾಡಬೇಕು. ಪ್ರೈಮರಿ ಹೆಲ್ತ್ ಯೂನಿಟ್ಟುಗಳಲ್ಲಿ ಡಾಕ್ಟರುಗಳಿಗೆ ಜೀಪ್‌ಗಳನ್ನೂ ಸಹ ಕೊಡಬೇಕು. ಈಗ ಈ ಬ್ಲಾಕುಗಳಿಗೆ ಆರೋಗ್ಯದ ಬಗ್ಗೆ ಔಷಧಿಗಳಿಗಾಗಿ ಒದಗಿಸಿರುವ ಹಣ ಏನೇನೂ ಸಾಲದು. ಆದ್ದರಿಂದ ಮೆಡಿಕಲ್ ಸ್ಟೋರ್ಸುಗಳಿಂದ ಔಷಧಿಗಳನ್ನು ಯಥೇಚ್ಛವಾಗಿ ತೆಗೆದುಕೊಳ್ಳಬೇಕು. ಈಗಾಗಲೇ ಎಷ್ಟೋ ಹಣ ಲ್ಯಾಪ್ಸ್ ಆಗಿದೆ. ನಮ್ಮ ಭಾಗದಲ್ಲಿರತಕ್ಕ ಮೆಡಿಕಲ್ ಹೆಲ್ತ್ ಯೂನಿಟ್ಟುಗಳಲ್ಲಿ ಸಾಕಷ್ಟು ಔಷಧಿಗಳು ಇಲ್ಲದೆ ಅನೇಕರಿಗೆ ತೊಂದರೆಯಾಗಿದೆ. ಡಾಕ್ಟರುಗಳು ಕೆಲವೊಂದು ಔಷಧಿಗಳನ್ನು ಬರೆದುಕಳುಹಿಸಿದರೂ ಅವುಗಳು ಕಾಲಕ್ಕೆ ಸರಿಯಾಗಿ ಒದಗುತ್ತಾ ಇಲ್ಲದೇ ಇರುವ ಕಾರಣ ಅನೇಕ ಕೆಲಸ ಕಾರ್ಯಗಳೂ ಸಹ ಲ್ಯಾಪ್ಸ್ ಆಗಿವೆ. ಆಯಾ ರೋಗಗಳಿಗೆ ಬೇಕಾದ ಔಷಧಿಗಳನ್ನು ಜಾಗ್ರತೆಯಾಗಿ ಅಲ್ಲಿಗೆ ಸರಬರಾಜು ಮಾಡಿದರೆ ಅದರಿಂದ ಅನೇಕ ಬಡ ಜನರಿಗೆ ಅನುಕೂಲ

ಾಗುತ್ತದೆ. ನಮ್ಮ ಭಾಗಕ್ಕೆ ಕೇವಲ ಒಂದೇ
ಂದು ಜೀಪನ್ನು ಒದಗಿಸಿರುತ್ತಾರೆ. ರೂರಲ್
ರಿಯಾಗಳಲ್ಲಿ ಆರೋಗ್ಯ ಸೌಕರ್ಯಗಳನ್ನು ಕೊಡುವು
ಕ್ಕೆ ಬಹಳ ಕಷ್ಟ. ಕೆಲವು ಡಾಕ್ಟರುಗಳು ಪ್ರೈವೇಟ್
ಾಕ್ಟೀಷನರಾಗಿ ಕೆಲಸ ಮಾಡುತ್ತಾ ಇದ್ದಾರೆ.
ಂತಹವರನ್ನು ಸರ್ಕಾರದವರು ಕೂಡಲೇ ನೇಮಿಸಿ
ೊಂಡು ರೂರಲ್ ಪ್ರದೇಶಗಳಿಗೆ ಕಳುಹಿಸಿಕೊಟ್ಟರೆ
ವರಿಂದ ಆದಷ್ಟುಮಟ್ಟಿಗೆ ಜನಗಳಿಗೆ ಅನುಕೂಲ
ಾಗುತ್ತದೆ.

ಇನ್ನು ವಿದ್ಯಾಭ್ಯಾಸದ ವಿಷಯವಾಗಿ ಹೇಳುವು
ಾದರೆ ನಮ್ಮ ಭಾಗದಲ್ಲಿ, ಸ್ಕೂಲುಗಳ ಕಟ್ಟಡ
ಳನ್ನು ನೋಡಿದರೆ ಅವು ಬಹಳ ಶಿಥಿಲವಾಗಿವೆ. ಶಾಲೆ
ಳಲ್ಲಿ ಮಳೆಗಾಲದಲ್ಲಂತೂ ನೀರು ಸೋರಿ ಹೋಗಿ
ಗ ಕಟ್ಟಡ ಬೀಳುವ ಪರಿಸ್ಥಿತಿ ಇದೆ. ಕಾನ್ಸ್ಟಿಟ್ಯೂ
ನ್ನಿನಲ್ಲಿರುವಂತೆ ಹುಡುಗರಿಗೆ ಶಾಲೆಗಳು ಇಲ್ಲ.
ಡುಗರನ್ನು ಶಾಲೆಗಳಿಂದ ಹೊರಗೆ ಕುಳ್ಳಿರಿಸಿ ಪಾಠ
ೇಳುವ ಸ್ಥಿತಿ ಒದಗಿದೆ. ಇಂಜಿನಿಯರು ಇವೊತ್ತು
ಕಟ್ಟಡವನ್ನು ರಿಪೇರಿ ಮಾಡುವುದಕ್ಕೇನಾದರೂ
ೋದರೆ ಶಾಲಾ ಕಟ್ಟಡವನ್ನು ಕಟ್ಟುವುದಕ್ಕೆ ಎಷ್ಟು
ರ್ಚು ಮಾಡಬೇಕಾಗುತ್ತದೋ ಅದರ ಡಬ್ಬಲ್
ರ್ಚು ರಿಪೇರಿಗೆ ಬೇಕಾಗುತ್ತದೆ. ಸುಮಾರು 13-14
ರ್ಷಗಳಿಂದಲೂ ಯಾವ ಶಾಲಾ ಕಟ್ಟಡವೂ ರಿಪೇರಿ
ಾಗಿಲ್ಲ. ಶಾಲೆಗಳಲ್ಲಿ ಹುಡುಗರು ಕುಳಿತುಕೊಳ್ಳು
ದಕ್ಕೆ ಸಾಕಷ್ಟು ಸ್ಥಳಾವಕಾಶವೇ ಇರುವುದಿಲ್ಲ.
ರೈಮರಿ ಶಾಲೆಗಳಲ್ಲಿ ಹುಡುಗರನ್ನು ದನಗಳನ್ನು
ಡಿಹಾಕುವ ಹಾಗೆ ಒಂದೇ ಒಂದು ಚಿಕ್ಕ ಕೊಠಡಿ
ಲ್ಲಿ ಕೂಡಿಹಾಕಬೇಕಾದ ಪರಿಸ್ಥಿತಿ ಬಂದಿದೆ.
ಮಾನ್ಯವಾಗಿ ಒಂದು ಶಾಲೆಗೆ 8 ಜನ ಉಪಾಧ್ಯಾ
ರು ಇರಬೇಕಾದ ಸಂದರ್ಭದಲ್ಲಿ ಕೇವಲ ಇಬ್ಬರೇ
ಬ್ಬರು ಕೆಲಸ ಮಾಡುವ ಪರಿಸ್ಥಿತಿ ಬಂದಿದೆ. ಆದಷ್ಟು
ಟ್ಟಿಗೆ ಹೆಚ್ಚಿಗೆ ಉಪಾಧ್ಯಾಯರುಗಳನ್ನು ನಮ್ಮ
ಗದ ಶಾಲೆಗಳಿಗೆ ನೇಮಿಸಬೇಕೆಂದು ನಾನು
ಹೆ ಮಾಡುತ್ತೇನೆ.

ಇನ್ನು ಪಠ್ಯಪುಸ್ತಕಗಳ ವಿಷಯದಲ್ಲಿ ಹೇಳಬೇಕಾ
ರೆ ಈಗ ಹೊಸದಾಗಿ ಕೆಲವು ಪುಸ್ತಕಗಳನ್ನು
ರೈಮರಿ ಶಾಲೆಗಳಿಗೆ ಇಟ್ಟಿದ್ದಾರೆ. ಆದರೆ ಅವು
ಕಷ್ಟು ಸರಬರಾಜು ಆಗದೆ ಇನ್ನೂ ಪ್ರಿಂಟ್‌ನಲ್ಲಿದೆ
ದು ಹೇಳುತ್ತಾರೆ. ಬ್ಲಾಕ್ ಮಾರ್ಕೆಟ್ಟಿನಲ್ಲಿ ಆ
ಸ್ತಕಗಳನ್ನು ಕೊಳ್ಳುವುದಕ್ಕೆ ಬಡವರಿಗೆ ಬಹಳ
ಷ್ಟ. ಅದು ನಿಜವಾಗಿ ಸರಿಯಾಗಿ ಕಾಣುವುದಿಲ್ಲವೆಂದು
ನು ಹೇಳುತ್ತೇನೆ.

ಇನ್ನು ಕೈಗಾರಿಕೆಗಳ ವಿಷಯದಲ್ಲಿ ಹೇಳಬೇಕಾದರೆ
ಮ್ಮ ಭಾಗದಲ್ಲಿ ಒಂದು ಸೊಸೈಟಿಯನ್ನು ಸ್ಥಾಪನೆ
ಡಬೇಕೆಂಬ ದೃಷ್ಟಿಯಿಂದ ಸುಮಾರು 6-7-8
ಗಳುಗಳ ಹಿಂದೆಯೇ ರಿಜಿಸ್ಟ್ರೇಷನ್‌ಗಾಗಿ ಅರ್ಜಿ
ಹಿಸಿದರೆ ಇನ್ನೂ ಇದುವರೆಗೂ ರಿಜಿಸ್ಟ್ರೇಷನ್ ಮಾಡಿ
ಹಿಸುವುದಕ್ಕೆ ಸಾಧ್ಯವಾಗಿಲ್ಲ. ಅಲ್ಲಿನ ಆಫೀಸರು
ನ್ನು ಕೇಳಿದರೆ ಈ ಇಲಾಖೆಗೆ ಹೋಗಿ ಆ ಇಲಾಖೆಗೆ
ೋಗಿ ಎಂದು ಹೇಳಿಕೊಂಡು ಇವೊತ್ತಿನವರೆಗೂ ಆ
ಲ್ಲೂಕ್‌ನಲ್ಲಿ ಇಂಡಸ್ಟ್ರಿಯಲ್ ಸೊಸೈಟಿ ಸ್ಥಾಪನೆ
ಗಿಲ್ಲ. ಹೀಗಾದರೆ ಯಾವ ರೀತಿ ಅಲ್ಲಿನ ಜನರು
ವೃದ್ಧಿಗೆ ಬರಬೇಕೆಂದು ನಾನು ಕೇಳುತ್ತೇನೆ.
ನ್ನು ಸರ್ಕಾರದವರು ವಿಚಾರಮಾಡಬೇಕು.
ಂಬಯಿ ಕರ್ನಾಟಕದಲ್ಲಿ ತಾಲ್ಲೂಕು ಕಛೇರಿಗಳು
ವಲು ಸುವ್ಯವಸ್ಥಿತ ರೀತಿಯಲ್ಲಿದುವು. ಇತ್ತೀಚೆಗೆ
ಯಾವ ತರಹ ಫರ್ನಿಚರ್ ಇದೆಯೆಂದರೆ ಎಲ್ಲಾ
ರುಕು ಮೇಜು, ಕುರ್ಚಿಗಳು ಕಾಣುತ್ತಿವೆ.
ಮೈಸೂರು ಮತ್ತು ಮುಂಬಯಿ ಕರ್ನಾಟಕವನ್ನು
ಹೋಲಿಸಿ ನೋಡಿದರೆ ನಮ್ಮ ತಾಲ್ಲೂಕ್ ಆಫೀಸಿನಲ್ಲಿ
6–7 ಮಂದಿ ಇದ್ದರೆ ಇಲ್ಲಿ 15-20 ಮಂದಿ ಇರುವಷ್ಟು
ಇದೆ. ಸರ್ಕಾರದವರು ಇನ್ನು ಮುಂದಾದರೂ
ಒಳ್ಳೆಯ ಫರ್ನಿಚರ್‌ಗಳನ್ನು ಈ ತಾಲ್ಲೂಕು ಕಛೇರಿ
ಗಳಿಗೆ ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ತೆರಿಗೆಗಳ ವಿಚಾರವಾಗಿ ಹೇಳುವುದಾದರೆ
ದಿನೇ ದಿನೇ ಬೇರೆ ಬೇರೆ ವಿಧವಾದಂತಹ ತೆರಿಗೆಗಳು
ಬರುತ್ತಲೇ ಇವೆ. ಇದರಿಂದೇನು ಗೊತ್ತಾಗುತ್ತದೆ
ಅಂದರೆ ಔರಂಗಜೇಬನ ಕಾಲದಲ್ಲಿ ಜೆಸಿಯ ಎಂಬ ತಲೆ
ಗಂದಾಯವನ್ನು ಹಾಕುತ್ತಿದ್ದರು. ಅದೇ ರೀತಿ
ಯಾಗಿ 108 ತರಹ ತೆರಿಗೆಗಳು ಇಲ್ಲಿ ಜಾರಿಗೆ ಬರು
ತ್ತಿವೆ. ಇದರಿಂದ ಜನಗಳು ಬಹಳ ಚಿಂತಾಜನಕ
ಪರಿಸ್ಥಿತಿಯಿಂದ ಕೂಡಿದ್ದಾರೆ. ಆದಷ್ಟುಮಟ್ಟಿಗೆ ಈ
ಕರಗಳನ್ನು ಕಡಮೆಮಾಡಬೇಕೆಂದು ನಾನು ಸರ್ಕಾರ
ದವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಟ್ರಾನ್ಸ್‌ಪೋರ್ಟೇಷನ್ ಬಗ್ಗೆ ಹೇಳುವು
ದಾದರೆ ಇದು ಬಹಳ ವಿಚಿತ್ರವಾಗಿದೆ. ಪ್ರಯಾಣ ದರಗ
ಳನ್ನು ಆದಷ್ಟುಮಟ್ಟಿಗೆ ಕಡಮೆಮಾಡಬೇಕು. ಇದನ್ನು
ಬದಲಾಯಿಸುವುದಕ್ಕೆ ಸರ್ಕಾರಕ್ಕೆ ಶಕ್ಯವಿಲ್ಲವೇ
ಎಂದು ನಾನು ಪ್ರಶ್ನೆಮಾಡುತ್ತೇನೆ. ಅಲ್ಲಲ್ಲಿ ಸಬ್
ಸ್ಟೇಜುಗಳನ್ನು ಜಾರಿಗೆ ತರುವುದು ಅವಶ್ಯಕವಾಗಿದೆ.
ಇತ್ತೀಚೆಗೆ ಎಂಟು ಮೈಲಿ ದೂರ ಹೋಗುವವರಿಗೂ
ಮತ್ತು ಐದು ಮೈಲಿ ದೂರ ಹೋಗುವವರಿಗೂ
ಒಂದೇ ದರ ಕೊಡಬೇಕೆಂಬ ಪರಿಸ್ಥಿತಿ ಬಂದಿದೆ.
ಅದನ್ನು ಕೂಡಲೇ ಕಡಮೆ ಮಾಡಬೇಕು. ಈ ಬಗ್ಗೆ
ಸರ್ಕಾರದವರು ರಿಫಾರಂ ಮಾಡಿ ಜನಗಳಿಗೆ ತಕ್ಕ
ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ಹೇಳಿ ನನ್ನ
ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಜಿ. ಬಂದೀಗೌಡ (ಶ್ರೀರಂಗಪಟ್ಟಣ).—
ಸ್ವಾಮಿ, ಈಗಾಗಲೇ ಈ ಸಭೆಯ ಮುಂದೆ ಮಂಡಿಸಿರ
ತಕ್ಕ ಬಡ್ಜೆಟ್ಟಿನ ಮೇಲೆ ಬಹಳ ಜನ ಮಾತನಾಡಿದ್ದಾರೆ.
ಆದ್ದರಿಂದ ನಾನು ಹೆಚ್ಚು ಕಾಲ ಮಾತನಾಡದೆ
ಮಾನ್ಯ ಅಧ್ಯಕ್ಷರು ನನಗೆ ಕೊಟ್ಟಿರತಕ್ಕ ಕಾಲದಲ್ಲೇ
ನನ್ನ ಕೆಲವು ಮುಖ್ಯ ವಿಷಯಗಳನ್ನು ಈ ಸಭೆಯಲ್ಲಿ
ಅರಿಕೆ ಮಾಡಿಕೊಳ್ಳುತ್ತೇನೆ. ಮಾರ್ಚಿ 22ನೇ ತಾರೀಕು
ಮಾನ್ಯ ಹಣಕಾಸಿನ ಮಂತ್ರಿಗಳು ಬಡ್ಜೆಟ್ಟನ್ನು ಈ
ಸಭೆಯ ಮುಂದೆ ಮಂಡಿಸಿ ಸುಮಾರು 3½ ತಿಂಗಳು
ಆಗಿದೆ. ಇಷ್ಟು ಕಾಲದಲ್ಲಿ ಅನೇಕ ವಿಷಯಗಳು
ನಡೆದು ಹೋಗಿವೆ. ಬಡ್ಜೆಟ್ಟನ್ನು ಮಂಡಿಸಿದ ಕೂಡಲೇ
ಜನಗಳ ಮತ್ತು ಈ ಸಭೆಯ ಮಾನ್ಯ ಸದಸ್ಯರ ಅಭಿ
ಪ್ರಾಯಗಳನ್ನು ತೆಗೆದುಕೊಂಡು ಬಡ್ಜೆಟ್ಟನ್ನು ಸರಿ
ಮಾಡಿಕೊಂಡು ದೇಶದ ಆಡಳಿತವನ್ನು ನಡೆಸತಕ್ಕದ್ದು.
ಸರಿಯಾದದ್ದು ಎಂದು ಹೇಳುವವರಲ್ಲಿ ನಾನೂ ಒಬ್ಬ.
ಆದರೆ ಈ ಸಾರಿ ಕಾರಣಾಂತರದಿಂದ ಆ ರೀತಿ
ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಹಾಗೆಂದು ಹೇಳು
ತ್ತಾರೆ. ಕಾರಣ ಕೂಡ ಹಾಗೆಯೇ ಇದೆ. ಈಗ ನಾವು
ಒಂದು ವಿಷಯವನ್ನು ಯೋಚನೆ ಮಾಡುವುದಾದರೆ
ಈಗ ನನಗೆ ತಿಳಿದಮಟ್ಟಿಗೆ ಓವರ್ ಡ್ರಾಫ್ಟ್ ಕೊಡ
ಬೇಕಾಗಿ ಬಂದಿದೆ ಎಂದು ನನಗೆ ಗೊತ್ತಾಗಿದೆ.
ಇಲ್ಲಿಯವರೆಗೂ ಆರು ಕೋಟಿ ರೂಪಾಯಿಗಳ
ಓವರ್ ಡ್ರಾಫ್ಟ್ ಮಾಡಿದ್ದಾರೆ ಎಂದು ನನಗೆ
ಗೊತ್ತಾಗಿದೆ. ಈ ರೀತಿ ಒಂದು ಓವರ್ ಡ್ರಾಫ್ಟಿನಿಂದ
ಸರ್ಕಾರವನ್ನು ನಡೆಸತಕ್ಕದ್ದು ಸರಿಯಾದ ಮಾರ್ಗ
ವಲ್ಲ ಎಂದು ಅನೇಕ ಜನಗಳು ಹೇಳಿದ ಮಾತನ್ನು
ನಾನು ಈ ಸಂದರ್ಭದಲ್ಲಿ ಈ ಸಭೆಯಲ್ಲಿ
ಹೇಳುತ್ತಿದ್ದೇನೆ.

ಶ್ರೀ ಜಿ. ವೆಂಕಟೇಗೌಡ.—ಈಗ್ಗೆ ನಾಲ್ಕು ತಿಂಗಳ ಹಿಂದೆ ಈ ಮಾನ್ಯ ಸಭೆಯವರು ಅನುಮತಿ ಕೊಟ್ಟ ಹಣಕ್ಕಿಂತಲೂ ಇನ್ನೂ ಹೆಚ್ಚಾಗಿ ಹಣ ಖರ್ಚಾಗಿದೆ ಎಂದು ಮಾನ್ಯ ಸದಸ್ಯರ ಅಭಿಪ್ರಾಯವೇ ?

ಶ್ರೀ ಎ. ಜಿ. ಬಂದೀಗೌಡ.—6 ಕೋಟಿ ರೂಪಾಯಿಗಳ ಓವರ್ ಡ್ರಾಫ್ಟ್ ಮಾಡಿದ್ದಾರೆ. ಇಷ್ಟು ಮಾತ್ರ ನಾನು ಹೇಳುತ್ತೇನೆ. ಬಡ್ಜೆಟ್ ಚರ್ಚೆಯ ಮೇಲೆ ಜವಾಬುಕೊಡುವಾಗ ಆ ವಿಷಯಕ್ಕೆ ಸರ್ಕಾರದವರು ಉತ್ತರ ಹೇಳುತ್ತಾರೆ. ನಾವು ಬಡ್ಜೆಟ್ಟಿನ ಮೇಲೆ ಮಾತನಾಡುವುದು ಎಂದರೆ ಬಡ್ಜೆಟ್ಟು ಸರಿಯಾಗಿದೆಯೇ ಅಥವಾ ಇಲ್ಲವೇ, ಸರ್ಕಾರಕ್ಕೆ ಬರಬೇಕಾದ ಹಣವನ್ನು ಸರಿಯಾದ ರೀತಿಯಲ್ಲಿ ವಸೂಲು ಮಾಡುತ್ತಿದ್ದಾರೆಯೇ ಅಥವಾ ಇಲ್ಲವೇ, ಮತ್ತು ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ಖರ್ಚುಮಾಡಬೇಕೆಂದು ಹಂಚಿದೆಯೋ ಆ ಹಣವನ್ನು ಆಯಾಬಾಬುಗಳಿಗೆ ಸರಿಯಾಗಿ ಖರ್ಚು ಮಾಡುತ್ತಿದ್ದಾರೆಯೇ ಅಥವಾ ಇಲ್ಲವೇ, ಮತ್ತು ದೇಶದ ಹಣಕಾಸಿನ ಪರಿಸ್ಥಿತಿ ಸೌಂಡ್ ಆಗಿದೆಯೇ ಹೇಗೆ ಎನ್ನತಕ್ಕ ಎಲ್ಲಾ ವಿಷಯಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ನಾವು ಮಾತನಾಡಬೇಕಾಗಿದೆ. ಈ ಸಾರಿ ಕೇಂದ್ರ ಸರ್ಕಾರದವರೂ ಖೋತಾ ಬಡ್ಜೆಟನ್ನು ತೋರಿಸಿದ್ದಾರೆ. ಅನೇಕ ದೇಶಗಳು ಖೋತಾ ಬಡ್ಜನ್ನು ತೋರಿಸಿವೆ. ಖೋತಾ ಬಡ್ಜೆಟ್ಟನ್ನು ಇಡತಕ್ಕದ್ದು ಒಂದು ಫ್ಯಾಷನ್ ಆಗಿದೆ. ಒಂದು ದೇಶದವರು ಎರಡು ಕೋಟಿ ರೂಪಾಯಿಗಳ ಖೋತಾವನ್ನು ತೋರಿಸಿದರೆ ಇನ್ನೊಂದು ದೇಶದವರು ನಾಲ್ಕು ಕೋಟಿ ರೂಪಾಯಿಗಳ ಖೋತಾವನ್ನು ತೋರಿಸುತ್ತಾರೆ. ಕೇಂದ್ರ ಸರ್ಕಾರದವರು ನೂರಾರು ಕೋಟಿ ರೂಪಾಯಿಗಳ ಖೋತಾವನ್ನು ತೋರಿಸುವಾಗ ನಮ್ಮ ದೇಶದವರು ಕೇವಲ 322 ಲಕ್ಷ ರೂಪಾಯಿಗಳ ಖೋತಾವನ್ನು ತೋರಿಸಿದರೆ ಏನೂ ತಪ್ಪಾಗಲಾರದು ಎನ್ನುವ ಉದ್ದೇಶ ನಮ್ಮ ಸರ್ಕಾರದವರಿಗೆ ಇರುವಂತೆ ಕಾಣುತ್ತದೆ. ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಒಂದು ಸಂದರ್ಭದಲ್ಲಿ ನಾನು ಒಬ್ಬ ಮಂತ್ರಿಗಳನ್ನು ವಿಚಾರ ಮಾಡಿದೆ, ''ಏತಕ್ಕೋಸ್ಕರ ಖೋತಾ ಬಡ್ಜೆಟ್ಟನ್ನು ಇಡುತ್ತೀರಿ, ಸರ್‌ಪ್ಲಸ್ ಬಡ್ಜೆಟ್ಟನ್ನು ಇಡುವುದಕ್ಕೆ ಸಾಧ್ಯವಿಲ್ಲವೇ'' ಎಂದು. ಅದಕ್ಕೆ ಅವರು ಎರಡು ಕಾರಣಗಳನ್ನು ಹೇಳಿದರು. ಒಂದನೆಯದು ಖೋತಾ ಬಡ್ಜೆಟ್ಟನ್ನು ತೋರಿಸಿದರೆ ಕೇಂದ್ರ ಸರ್ಕಾರದಿಂದ ಹೆಚ್ಚಿಗೆ ಹಣವನ್ನು ಪಡೆಯಬಹುದು. ಮತ್ತು ಗ್ರಾಂಟನ್ನು ಪಡೆಯಬಹುದು ಎಂದು ಅವರು ಹೇಳಿದರು.

ಶ್ರೀ ಬಿ. ಡಿ. ಜತ್ತಿ.—ಈ ವಿಷಯವನ್ನು ಯಾವ ಮಂತ್ರಿಗಳು ಹೇಳಿದರು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ಬಂದೀ ಗೌಡ.—ಅದನ್ನು ನಾನು ಹೇಳುವುದಕ್ಕಾಗುವುದಿಲ್ಲ.

ಎರಡನೆಯ ಕಾರಣ ಆಗಾಗ್ಗೆ ದೇಶದಲ್ಲಿ ಕಂದಾಯಗಳನ್ನೂ ಟ್ಯಾಕ್ಸ್‌ಗಳನ್ನೂ ಹಾಕಬೇಕಾಗಿ ಬರುತ್ತದೆ. ನಾವು ಸರ್‌ಪ್ಲಸ್ ಬಡ್ಜೆಟ್ಟನ್ನು ತೋರಿಸಿದರೆ ನಿಮಗೆ ದುಡ್ಡು ಬೇಕಾದಷ್ಟು ಇದೆಯಲ್ಲಾ ಏತಕ್ಕೆ ಟ್ಯಾಕ್ಸ್ ಹಾಕುತ್ತೀರಿ, ಎಂದು ಜನ ಕೇಳುತ್ತಾರೆ. ಅದಕ್ಕೋಸ್ಕರ ಖೋತಾ ಬಡ್ಜೆಟ್ಟನ್ನು ತೋರಿಸಿದೆ. ಈಗ ಟ್ಯಾಕ್ಸ್ ಹೆಚ್ಚು ಮಾಡುವುದಕ್ಕೆ ಒಂದು ಕಾರಣ ಚೆನ್ನಾಗಿ ಕಾಣುತ್ತದೆ ಎಂದು ಅವರು ಹೇಳಿದರು. ಈ ರೀತಿ ಕಾರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಖೋತಾ ಬಡ್ಜೆಟನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಸರ್ಕಾರದವರು ಖೋತಾ ಬಡ್ಜೆಟ್ಟನ್ನು ಇಡಬೇಕಾಗಿರಲಿಲ್ಲ; ಸರ್‌ಪ್ಲಸ್ ಬಡ್ಜೆಟ್ಟನ್ನು ತೋರಿಸಬಹುದಾಗಿತ್ತು ಎನ್ನುವುದಕ್ಕೆ ಒಂದು ನಿದರ್ಶನವನ್ನು ತೋರಿಸುತ್ತೇನೆ. ಈಗ ಬಡ್ಜೆಟ್ಟಿನಲ್ಲಿ ಅನೇಕ ಬಾಬುಗಳಿಗೆ ಇಷ್ಟಿಷ್ಟು ರೂಪಾಯಿಗಳು ಎಂದು ತೋರಿಸಿರುತ್ತಾರೆ. ಅವರು ಬಡ್ಜೆಟ್ಟಿನಲ್ಲಿ ತೋರಿಸಿರತಕ್ಕಂಥಾ ಹಣವನ್ನೆಲ್ಲ ಖರ್ಚು ಮಾಡುವುದಿಲ್ಲ. ವರ್ಷದ ಕೊನೆಯಲ್ಲಿ ಬೇಕಾದಷ್ಟು ಹಣ ಉಳಿತಾಯವಾಗುತ್ತದೆ. ಅದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ೧೯೬೨ನೇ ಇಸವಿಯ ಆಡಿಟ್ ರಿಪೋರ್ಟಿನ ೪೬ನೇ ಪುಟದಲ್ಲಿ ''Statement showing savings under voted grants''. ಎನ್ನುವ ಹೆಡ್ಡಿಂಗ್‌ನಲ್ಲಿ ಕೆಲವು ಐಟಮ್‌ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಹಣ ಉಳಿತಾಯವಾಗಿದೆ ಎನ್ನತಕ್ಕದನ್ನೂ ಕೊಟ್ಟಿದ್ದಾರೆ. ಅದು ಈ ರೀತಿ ಇದೆ: ''Motor Vehiclded Acts Administration 45.7 per cent. Ports and pilotage 53.0 per cent. Public Health 37.2 per cent, Agriculture, Horticulture and Fisheries 21.2 per cent. Co-operation 31.3 per cent Miscellaneous Departments 25.9 per cent. Compensation to Zamindars 46.7 per-cent. Irrigation Works Non Commercial 36.7 per cent. Industrial Development 24.1 per cent. Capital Account of other works outside the Revenue Account 31.3 per cent.'' ಹೀಗೆಲ್ಲಾ ಹಣ ಉಳಿದಿದೆ. ಬಡ್ಜೆಟ್ಟಿನಲ್ಲಿ ತೋರಿಸಿರುವ ಕೆಲವು ಐಟಮ್‌ಗಳಲ್ಲಿ ೫೦ ಪರ್ಸೆಂಟ್ ಹಣ ಉಳಿದಿದೆ ಎನ್ನುವುದು ಚೆನ್ನಾಗಿ ವ್ಯಕ್ತವಾಗುತ್ತದೆ. ಹೀಗಿರುವಾಗ ನಮ್ಮ ಬಡ್ಜೆಟ್ಟು ಖೋತಾ ಬಡ್ಜೆಟ್ ಆಗುತ್ತದೆ ಎಂದು ಹೇಳಿದರೆ ಚೆನ್ನಾಗಿರುವುದಿಲ್ಲ. ಆದ್ದರಿಂದ ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ಹಾಕಿದರೆ ಖೋತಾ ಬಡ್ಜೆಟ್ಟನ್ನು ತಪ್ಪಿಸುವುದಕ್ಕೆ ಸಾಧ್ಯ ಎಂಬುದನ್ನು ನೋಡಿಕೊಂಡು ಅದನ್ನು ಸರಿಮಾಡಬೇಕು. ಇಲ್ಲದಿದ್ದರೆ ದೇಶದಲ್ಲಿ ಜನಗಳು ನಾನಾ ತರಹ ಮಾತನಾಡಿಕೊಳ್ಳುತ್ತಾರೆ. ಅದನ್ನು ತಪ್ಪಿಸುವುದಕ್ಕೆ ಆದಷ್ಟೂ ಪ್ರಯತ್ನ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಒಂದು ವೇಳೆ ಡಿಫಿಸಿಟ್ ಬಡ್ಜೆಟ್ ಆದಾಗ ಅದರಿಂದ ಪ್ರಯೋಜನವುಂಟು ಎಂದು ಸರ್ಕಾರ ಭಾವಿಸುವುದಾದರೆ ನನ್ನ ವಾದ ಹೋಗುತ್ತದೆ. ಆಮೇಲೆ ಮೂರನೆಯ ಪಂಚವಾರ್ಷಿಕ ಯೋಜನೆಗೆ ೨೫೦ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೀರಿ. ೨೫೦ ಕೋಟಿ ರೂಪಾಯಿನಲ್ಲಿ ೧೪೦ ಕೋಟಿ ರೂಪಾಯಿ ಕೇಂದ್ರದವರು ನಮಗೆ ಕೊಡುವುದು ಅಂತಲೂ ೧೧೦ ಕೋಟಿ ರೂಪಾಯಿಗಳನ್ನು ನಾವು ಕೊಡಬೇಕೆಂತಲೂ ಅಥವಾ ಪೂರೈಸಬೇಕು, ಬಡ್ಜೆಟ್‌ನಲ್ಲಿ ಶೇಖರಿಸಬೇಕೆಂತಲೂ ಇಟ್ಟುಕೊಂಡಿದ್ದೇವೆ. ಈ ೧೧೦ ಕೋಟಿ ರೂಪಾಯಿಗಳನ್ನು ಶೇಖರಿಸುವ ವಿಧಾನವನ್ನು ನಾನಾ ತರಹವಾಗಿ ಹೇಳಿದ್ದಾರೆ. ಇದನ್ನು ಅವರು ಆ ದಿವಸದ ಫೈನಾನ್ಸ್ ಮಿನಿಸ್ಟರ್ ಆದವರು ದೆಹಲಿಯಿಂದ ವಾಪಸು ಬರುತ್ತಾ ೧೧೦ ಕೋಟಿ ರೂಪಾಯಿಗಳನ್ನು ಶೇಖರಿಸಬೇಕಾದರೆ ಸುಮಾರು ೪೨ ಕೋಟಿ ರೂಪಾಯಿಗಳ ವರೆಗೂ ಕೂಡ ಹೊಸ ಕಂದಾಯ ಹಾಕಬೇಕು ಎಂದು ಹೇಳಿ ಅಂದಾಗ ಅಷ್ಟು ಆಗ್ಗುವುದಿಲ್ಲ, 24 ಕೋಟಿ ರೂಪಾಯಿಗಳ ವರೆಗೆ ಮಾತ್ರ ಆಗುತ್ತದೆ ಎಂದು ಹೇಳಿದ್ದಾರೆ. ಆ ಸ್ಟೇಟ್‌ಮೆಂಟನ್ನು

ನಮ್ಮ ಮಾನ್ಯ ಫೈನಾನ್ಸ್ ಮಿನಿಸ್ಟರವರ ಗಮನಕ್ಕೆ ತರುತ್ತೇನೆ. ಅದು 30ನೇ ತಾರೀಖಿನ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿದೆ.

"Mysore has assured the Planning Commission that the additional taxation limit of Rs. 5 crores per annam would be reached from next year for the next three years of the Third Plan period. For this year, for various reasons, the State will not be able to reach the Rs. 5 crore additional taxation limit and that it would be possible to secure a yield of only Rs. 2 crores."

ಅವರು ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇದನ್ನು ಏಕೆ ಹೇಳುತ್ತೇನೆ ಎಂದರೆ ಈ ಕಂದಾಯದ ಹೊರೆಯನ್ನು ಎಷ್ಟು ಹೊರಿಸಬೇಕೆಂದಿದ್ದೀರೋ ಅದು ಬೇಡ, ಅದಕ್ಕೆ ಬೇರೆ ಉಪಾಯ ಕಂಡುಹಿಡಿಯಿರಿ ಎಂದು ನನ್ನ ವಾದ, ಅಷ್ಟೇ. ೫ ಕೋಟಿ ರೂಪಾಯಿ ಆಗುವುದಿಲ್ಲ. ೨ ಕೋಟಿ ರೂಪಾಯಿ ಸಾಧ್ಯ ಎಂದು ಹೇಳಿದ್ದಾರೆ. ಅದು ಒಂದು ಸಂತೋಷ. ೨ ಕೋಟಿ ರೂಪಾಯಿಗಳಿಗೆ ಈ ವರ್ಷ ತೆರಿಗೆ ಹಾಕುವುದಿಲ್ಲ. ಮುಂದಿನ ವರ್ಷ ಹಾಕುತ್ತೇವೆ ಎಂಬ ಅರ್ಥಬರುವಂತೆ ಹೇಳಿದ್ದಾರೆ. ಮುಂದಿನ ವರ್ಷ ಈ ತೆರಿಗೆಯನ್ನು ಹಾಕಿ ಜನಗಳಿಗೆ ಈ ಭಾರವನ್ನು ಹೊರಿಸುತ್ತಾರಲ್ಲಾ ಅದು ಕೂಡದು, ಅದಕ್ಕೆ ಬೇರೆ ಮಾರ್ಗ ಕಂಡುಹಿಡಿಯಲಿ ಎಂದು ಹೇಳುವುದನ್ನು ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದೆ ಅಷ್ಟೇ. ಪ್ಲಾನಿಂಗ್ ಕಮಿಷನ್‌ನವರು, ಆಂಧ್ರದವರು ಡಬ್ಬಲ್ ಟ್ಯಾಕ್ಸೇಷನ್ ಹಾಕಿ ಐದು ಕೋಟಿ ರೂಪಾಯಿಗಳವರೆಗೂ ಪೂರೈಸುತ್ತೇವೆ ಎಂದು ಹೇಳಿದ್ದಾರೆ ನೀವೇಕೆ ಆ ರೀತಿ ಹಾಕಬಾರದು ಎಂದು ನಿಮ್ಮನ್ನು ಕೇಳಿದ್ದಾರೆ. ಅದಕ್ಕೆ ಒಳ್ಳೆಯ ಅಭಿಪ್ರಾಯವನ್ನೇ ಮೈಸೂರಿನ ಮಿನಿಸ್ಟರು ಕೊಟ್ಟಿದ್ದಾರೆ.

"The Mysore representatives explained that in Mysore irrigation facilities existed only upto 7 per cent whi.e in Andhra it was 27 per cent"

ಆಂಧ್ರದಲ್ಲಿ ೨೭ per cent ಇರಿಗೇಷನ್ ಸೌಕರ್ಯ ಇದೆ. ಮೈಸೂರಿನಲ್ಲಿ ೭ per cent ಇದೆ. ಆದ್ದರಿಂದ ಮೈಸೂರಿನಲ್ಲಿ ಹೆಚ್ಚು ಟ್ಯಾಕ್ಸೇಷನ್ ಹಾಕುವುದಕ್ಕೆ ಆಗುವುದಿಲ್ಲ ಎಂದೂ ಹೇಳಿದ್ದಾರೆ. ಇದು ಬಹಳ ಸಂತೋಷದ ವಿಷಯ. ೧೧೦ ಕೋಟಿ ರೂಪಾಯಿ ಕೊಟ್ಟಹೊರತು ೧೪೦ ಕೋಟಿ ರೂಪಾಯಿ ಅವರು ಕೊಡುವುದಿಲ್ಲ. ಅವರು ೧೪೦ ಕೋಟಿ ರೂಪಾಯಿಗಳನ್ನು ಕೊಡದಿದ್ದರೆ ನಮ್ಮ ೧೧೦ ಕೋಟಿ ರೂಪಾಯಿಗಳು ಸೇರದಿದ್ದರೆ ೨೫೦ ಕೋಟಿ ರೂಪಾಯಿ ಆಗುವುದಿಲ್ಲ. ಮೂರನೇ ಪಂಚವಾರ್ಷಿಕ ಯೋಜನೆ ಬಿದ್ದು ಹೋಗುತ್ತದೆ ಎಂಬ ಪ್ರಶ್ನೆ ಬರುತ್ತದೆ. ಮೊನ್ನೆ ಪ್ರಶ್ನೋತ್ತರಗಳ ಕಾಲದಲ್ಲಿ ಮುಖ್ಯ ಮಂತ್ರಿಗಳು ೧೪೦ ಕೋಟಿ ರೂಪಾಯಿ ಮಾತ್ರವಲ್ಲ ಇನ್ನೂ ಹೆಚ್ಚು ಬರತಕ್ಕ ಸಂಭವವಿದೆ ಎಂದು ಹೇಳಿದರು. ಅದನ್ನು ಬಹಳ ವಿಶ್ವಸನೀಯವಾಗಿ ಸ್ವೀಕರಿಸುತ್ತೇವೆ.

Sri B. D JATTI.—Yesterday, while the Chief Minister was replying to a supplementary, he made it clear that it was possible to get more than 140 crores of rupees from the Government of India and Rs. 110 crores from the State. The Hon'ble Member is making use of one clause which is convenient to him and not another clause.

ಶ್ರೀ ಎ. ಜಿ. ಬಂದೀಗೌಡ.—೧೧೦ ಕೋಟಿ ರೂಪಾಯಿ ನಾವು ಶೇಖರಿಸುವುದಕ್ಕೆ ಸಾಧ್ಯ ಎಂದರೆ ಯಥಾ ಪ್ರಕಾರ ಟ್ಯಾಕ್ಸೇಷನ್ ಹಾಕಬೇಕಾಗುತ್ತದೆ. ಆ ರೀತಿ ಮಾಡಿ ೧೧೦ ಕೋಟಿ ರೂಪಾಯಿಗಳನ್ನು ಸೇರಿಸುವುದಕ್ಕೆ ಬದಲಾಗಿ ಬೇರೆ ವಿಧಾನಗಳನ್ನು ಕಂಡುಹಿಡಿದು ಶೇಖರ ಮಾಡಲಿ ಎಂದು ಹೇಳುತ್ತಿದ್ದೇನೆ. ಯಾವ ಯಾವದು ಪ್ಲಾನ್‌ನಲ್ಲಿ ಸೇರಿಲ್ಲವೋ, ಅಂಥಾ ಡೆವಲಪ್‌ಮೆಂಟ್ ವರ್ಕ್‌ಗೆ ಖರ್ಚುಮಾಡುತ್ತಾ ಇರತಕ್ಕ ಹೆಚ್ಚಿಗೆ ಹಣವನ್ನು ಉಳಿತಾಯ ಮಾಡಿ ೧೧೦ ಕೋಟಿ ರೂಪಾಯಿಗಳನ್ನು ಶೇಖರಿಸಿ, ಟ್ಯಾಕ್ಸೇಷನ್ ಹಾಕುವುದನ್ನು ತಪ್ಪಿಸಲು ಸ್ವಲ್ಪ ದೀರ್ಘಾಲೋಚನೆ ಮಾಡುತ್ತಾರೆ, ಈ ಕಾಲದಲ್ಲಿ ಟ್ಯಾಕ್ಸ್ ಹಾಕುವುದು ಸೂಕ್ತವಲ್ಲ ಎಂದು ಹೇಳುತ್ತೇನೆ. Plan Development ನಲ್ಲಿ ಸೇರದೇ ಇರತಕ್ಕ ಐಟಂಗಳಲ್ಲಿ ಹೆಚ್ಚು ಖರ್ಚು ಮಾಡದೇ ಉಳಿತಾಯಮಾಡಿ, ಟ್ಯಾಕ್ಸೇಷನ್ ಹಾಕದೇ ಈ ಮೂರನೇ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಮಾಡಬೇಕೆಂದು ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ಕೊಡಲು ಬಯಸುತ್ತೇನೆ.

ಇನ್ನು ಬೇರೆ ಬೇರೆ ಐಟಂಗಳನ್ನು ತೆಗೆದುಕೊಂಡು ಮಾತನಾಡುವುದಾದರೆ ವಿದ್ಯಾಭ್ಯಾಸದ ಇಲಾಖೆಯ ಮೇಲೆ ಅನೇಕರು ಮಾತನಾಡಿದ್ದಾರೆ. ನಾನೂ ಕೂಡ ಅದರ ಮೇಲೇ ಈ ದಿವಸ ಒತ್ತಾಯವಾಗಿ ಮಾತನಾಡಬೇಕಾಗಿದೆ. ಈಗಿರತಕ್ಕ ಅನೇಕ ಲೆಕ್ಚರರುಗಳನ್ನು ಟ್ಯೂಟರ್ಸ್ ಮತ್ತು ಡೆಮಾನ್ಸ್ಟ್ರೇಟರ್ಸ್ ಎಂದು ಮಾಡಿ ಅವರ ಗ್ರೇಡನ್ನು ಇಳಿಸಿ ಅವರಿಗೆ ಕೊಡತಕ್ಕ ಸಂಭಾವನೆಯನ್ನು ಕೂಡ ಕಡಮೆಮಾಡಿರತಕ್ಕದ್ದು ಸೂಕ್ತವಲ್ಲ, ಸ್ವಾಮಿ. ಏಕೆಂದರೆ ಈಗ ಮಿನಿಮಮ್ ವೇಜಸ್ ಆಕ್ಟ್ ಎಂದು ಮಾಡಿದ್ದಾರೆ ಮಿನಿಮಮ್ ಸ್ಯಾಲರೀಸ್ ಇಷ್ಟಿರಬೇಕೆಂದೂ ಕೂಡ ಮಾಡುತ್ತಾ ಇದ್ದಾರೆ. ಅದರ ಪ್ರಕಾರ ಒಬ್ಬ ಕೂಲಿ ಮಾಡುವವನಿಗೂ ಕೂಡ ನೂರು ರೂಪಾಯಿ ಬರುತ್ತದೆ. ಹೀಗಿರುವಾಗ ಎಂ. ಎ., ಎಂ. ಎಸ್‌ಸಿ., ಪಾಸು ಮಾಡಿ, ಅದರಲ್ಲಿ ಫಸ್ಟ್ ಕ್ಲಾಸ್ ಪಡೆದುಕೊಂಡುಬರತಕ್ಕವರಿಗೆ ಟ್ಯೂಟರ್ಸ್ ಆಗಿ, ಡೆಮಾನ್ಸ್ಟ್ರೇಟರ್ಸ್ ಆಗಿ ೧೫೦ ರೂಪಾಯಿ ತೆಗೆದುಕೊಳ್ಳಿ ಅಂದರೆ ಏನು ನ್ಯಾಯ, ಸ್ವಾಮಿ ? ಈ ಕಾಲದಲ್ಲಿ ಈ ರೀತಿ ಮಾಡುವುದು ಚೆನ್ನಾಗಿರುವುದಿಲ್ಲ. ಆದ್ದರಿಂದ ಈಗಿರತಕ್ಕ ಲೆಕ್ಚರರುಗಳನ್ನು ಲೆಕ್ಚರರುಗಳನ್ನಾಗಿಯೇ ಮಾಡಿ. ಮುಂದೆ ಬರತಕ್ಕವರಿಗೂ ಕೂಡ ಸರಿಯಾದ ಸಂಭಾವನೆಯನ್ನು ಕೊಟ್ಟು ನೇಮಕಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಹೀಗೆಯೇ ಪ್ರೈಮರಿ ಸ್ಕೂಲು ಮತ್ತು ಕಂಪಲ್‌ಸರಿ ಸ್ಕೂಲ್ ವಿಷಯದಲ್ಲಿ ಮಾತನಾಡುತ್ತಾ ಹೋದರೆ ಅನೇಕ ಪ್ರೈಮರಿ ಸ್ಕೂಲುಗಳಲ್ಲಿ ಏಳೆಂಟು ತಿಂಗಳವರೆಗೂ ಉಪಾಧ್ಯಾಯರಿಲ್ಲದೆ ಮುಚ್ಚಿರತಕ್ಕ ಸನ್ನಿವೇಶವುಂಟು. ಕೆಲವು ಸ್ಕೂಲುಗಳನ್ನು ಮುಚ್ಚಿ ಕೆಲವು ಕಡೆ ಉಪಾಧ್ಯಾಯರು ಸಂಬಳತೆಗೆದ ಕೊಳ್ಳುತ್ತಾ ಇದ್ದಾರೆ. ಇನ್ನು ಕೆಲವು ಕಡೆ ಮೇಸ್ತ್ರರಾಗಿರತಕ್ಕವರು ತಾವೇ ಹೋಗದೆ ಒಂದು ತಿಂಗಳು, ಎರಡು ತಿಂಗಳು ತಮ್ಮ ಪ್ರತಿನಿಧಿಗಳನ್ನು ಕಳುಹಿಸುತ್ತಾ ಇದ್ದಾರೆ.

(ಶ್ರೀ ಎ. ಜಿ. ಬಂದೀಗೌಡ)

ಅವರು ಹೋಗಿ ಮಕ್ಕಳಿಗೆ ಪಾಠಹೇಳತಕ್ಕ ಸಂದರ್ಭ ಇದೆ. ಇದನ್ನು ಸರ್ಕಾರದವರು ಸ್ವಲ್ಪ ಗಮನಿಸಬೇಕು.

ನಮ್ಮ ಡಿಸ್ಟ್ರಿಕ್ಟಿನಲ್ಲಿ ಪ್ಯಾಕೇಜ್ ಡೀಲ್ ಎಂದು ಬಂದಿದೆ. ಇದು ಬಂದಾಗ ನಾವು ಬಹಳ ಸಂತೋಷಪಟ್ಟೆವು. ಪ್ಯಾಕೇಜ್ ಡೀಲ್ ಬರುತ್ತದೆ. ನಾಲ್ಕು ಕೋಟಿ ಚಿಲ್ಲರೆ ರೂಪಾಯಿಗಳನ್ನು ನಾನಾ ರೂಪದಲ್ಲಿ ಕೊಡುತ್ತಾರೆ ಎಂದು ಹೇಳಿ ಒಂದೊಂದು ಎಕರೆ, ಗುಂಟೆಯನ್ನು ಅಳತೆಮಾಡಿ ಅದರಲ್ಲಿ ಹೀಗೆ ಬೆಳೆಯಬೇಕು, ಹಾಗೆ ಬೆಳೆಯಬೇಕು ಎಂದು ಹೇಳುತ್ತಾರೆ. ರೈತರಿಗೆ ಬಹಳ ಪ್ರಯೋಜನವಾಗುತ್ತದೆ ಎಂದು ಹೇಳಿ ತಿಳಿದುಕೊಂಡಿದ್ದೆವು. ಈಗ ನೋಡಿದರೆ ಪ್ಯಾಕೇಜ್ ಡೀಲ್ ಬಂದು ಆಗಲೇ ಆರೇಳು ತಿಂಗಳಾಯಿತು. ಏನೇನೂ ಕೆಲಸ ಆಗುತ್ತಿಲ್ಲ. ಸರಿಯಾಗಿ ಕೆಲಸ ನಡೆದಿಲ್ಲ. ಆದರೂ ಇದನ್ನು ಯಶಸ್ವಿಯಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ನಾನು ನಂಬಿದ್ದೇನೆ.

ಇನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಮಾತನಾಡುವುದಾದರೆ, ಅಲ್ಲಿ ಆಗಬೇಕಾದ ಕೆಲಸಗಳು ಅನೇಕ ಇವೆ. ಶ್ರೀರಂಗಪಟ್ಟಣ ಎಂದರೆ ಬಹಳ ಸರಿಯಾಗಿರುವ ತಾಲ್ಲೂಕು, ಅಲ್ಲಿ ಬಹಳ ಒಳ್ಳೆಯ ಕೆಲಸಗಳು ನಡೆದಿವೆ ಜನರು ಅನುಕೂಲವಾಗಿದ್ದಾರೆ ಎಂಬ ಭಾವನೆ ಇದೆ. ಅಲ್ಲಿ ತರೀ ಜಮೀನೇ ಹೆಚ್ಚಾಗಿದೆ ಎಂಬ ಭಾವನೆಯೂ ಇದೆ. ಆದರೆ ವಾಸ್ತವವಾಗಿ ನೋಡಿದರೆ ಕಾಲು ಭಾಗ ತರಿ ಇದ್ದರೆ ಮುಕ್ಕಾಲು ಭಾಗ ಖುಷ್ಕಿ ಬೆಳೆಯುವವರಿದ್ದಾರೆ. ಅಲ್ಲಿ ಅನೇಕ ಕಾಮಗಾರಿಗಳಾಗಬೇಕಾಗಿವೆ. ಏನೇನು ಕೆಲಸಕಾರ್ಯಗಳು ಅಲ್ಲಿ ಆಗಬೇಕೆಂದಿಟ್ಟುಕೊಂಡಿದ್ದಾರೋ ಅವೆಲ್ಲವೂ ಆಗಬೇಕು. ಇಷ್ಟು ಹೇಳಿ ಇಲ್ಲಿಗೇ ಮುಗಿಸುತ್ತೇನೆ.

4-30 P.M.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೆ, ಮೈಸೂರು ಸಂಸ್ಥಾನದಲ್ಲಿ ಸರ್ಕಾರವೇನಾದರೂ ಇದೆಯೆ ಎಂದು ಯೋಚನೆ ಮಾಡುವುದಾದರೆ, ಸದ್ಯಕ್ಕೆ ಕೆಲವು ಕಾಲದಿಂದ ಇಲ್ಲವೆಂದು ಹೇಳಬೇಕಾದ ಸಂದರ್ಭ ಇಲ್ಲಿ ಕಾಣುತ್ತದೆ. ಹಿಂದೆ ಅನೇಕ ಸಂದರ್ಭಗಳಲ್ಲಿ ಸಭೆಯಲ್ಲಿ ಹೆಚ್ಚು ಮಂದಿ ಸದಸ್ಯರಿಲ್ಲದೆ 'ಕೋರಂ' ಇಲ್ಲವೆಂದು ತೋರಿಸುತ್ತಿದ್ದರು. ಮಂತ್ರಿಗಳು 27 ಜನರಾದರೆ ಆಗಲಾದರೂ ಅವರಲ್ಲಿ ಹತ್ತು ಹದಿನೈದು ಜನರಾದರೂ ಇಲ್ಲಿರುತ್ತಾರೆಯೋ ಏನೋ ಎಂದು ತಿಳಿದುಕೊಂಡಿದ್ದೆ, ಆದರೆ ಈಗ ಅಷ್ಟು ಜನರೂ ಇಲ್ಲ. ಉಪಾಧ್ಯಾಯರಿಗೆ ಶಿಕ್ಷಣಕೊಡುವುದಕ್ಕಾಗಿ ಟ್ರೈನಿಂಗ್ ಸ್ಕೂಲ್ ಮಾಡಿದ್ದಾರೆ, ಈ ಮಂತ್ರಿಗಳಿಗೆ ಅಂಥಾದ್ದು ಯಾವುದೂ ಇಲ್ಲ. ಈ ಅಸೆಂಬ್ಲಿಯನ್ನು ಒಂದು ಟ್ರೈನಿಂಗ್ ಸ್ಕೂಲೆಂದು ಭಾವಿಸಿದರೂ ಇಲ್ಲಿಗೆ ಯಾರೋ ಒಬ್ಬಿಬ್ಬರು ಮಂತ್ರಿಗಳು ಬಂದು ಅವರು ಯಾವುದಾದರೂ ಪುಸ್ತಕವನ್ನೋದಿ ಬರೆದುಕೊಳ್ಳುತ್ತಿರುತ್ತಾರೆ. ನಾವು ಏನಾದರೂ ಮಾತನಾಡಿದರೆ ಅದು ಅರಣ್ಯರೋದನವೋ ಏನೋ ಎನ್ನುವ ಭಾವನೆ ನಮಗೆ ಬರುತ್ತದೆ. ನಾವು ಹೇಳುವುದನ್ನು ಮಂತ್ರಿಗಳು ಗಮನಕೊಟ್ಟು ಕೇಳಿದರೆ, ಹೇಳಬೇಕಾದುದನ್ನು ವಿವರವಾಗಿ ಹೇಳಬಹುದು. ಈಗೇನೋ ಇಬ್ಬರು ಮಂತ್ರಿಗಳಿದ್ದರೂ, ನಾವು ಮಾತನಾಡಬಹುದೋ ಇಲ್ಲವೋ ಗೊತ್ತಿಲ್ಲ.........

MR. SPEAKER.—May I know which head of the Budget the Hon'ble Member is discussing? General debate should relate to some item or other of the Budget.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮೊದಲು ಪೂರ್ವಪೀಠಿಕೆ ಆಗಬೇಕು. (ನಗು !)

[MR. DEPUTY SPEAKER in the Chair.]

ನಮ್ಮ ಮಾನ್ಯ ಮಿತ್ರರು ಕೆಲವರು ಮಾತನಾಡುವಾಗ, ನಮ್ಮ ಮಂತ್ರಿಗಳು ಕೇಂದ್ರದೊಡನೆ ಚರ್ಚೆ ಮಾಡಿ ನಮ್ಮ ರಾಜ್ಯಕ್ಕೆ ಹೆಚ್ಚು ಗ್ರ್ಯಾಂಟು ಪಡೆಯಬಹುದಾಗಿತ್ತೆಂದು ಹೇಳಿದರು. ಆದರೆ ಈ ವಿಷಯವನ್ನು ಚರ್ಚಿಸಲು ಅಲ್ಲಿ ಇವರಿಗೆ ಅವಕಾಶವೇ ಇರುವುದಿಲ್ಲ. ಅಲ್ಪ ಸ್ವಲ್ಪ ಅವಕಾಶವಿರುವುದರಲ್ಲಿ ಇಲ್ಲಿನ ಮಂತ್ರಿಮಂಡಲವನ್ನು ಹೆಚ್ಚಿಸಬೇಕೆಂಬ ಬಗ್ಗೆ ಚರ್ಚೆ ಮಾಡುತ್ತಾರೆಯೇ ವಿನಾ ದೇಶಕ್ಕೆ ಹೆಚ್ಚು ಹಣವನ್ನು ಪಡೆಯಬೇಕೆಂಬ ಉದ್ದೇಶ ಇವರಿಗಿರುವುದಿಲ್ಲ. ಅವರ ಕಡೆಯ ಸದಸ್ಯರಿಗೂ ಜನರಿಗೂ ಯಾರು ಮುಖ್ಯಮಂತ್ರಿಯಾಗಿ ಬರುತ್ತಾರೆ, ನಿಜಲಿಂಗಪ್ಪನವರು ಬರುತ್ತಾರೋ ಬೇರೆಯವರ ಬರುತ್ತಾರೋ ಎಂದು ನಿರೀಕ್ಷಿಸಿಕೊಂಡು ಕೈಯಲ್ಲಿ ಹೂಮಾಲೆಯೊಂದನ್ನು ಇಟ್ಟುಕೊಂಡಿರುತ್ತಾರೆ. ಅವರಲ್ಲಿ ಯಾರು ಯಾರನ್ನು ತೆಗೆದುಕೊಳ್ಳುತ್ತಾರೆಯೋ ಜನರಿಗೆ ಗೊತ್ತಾಗುವುದಿಲ್ಲ. ಆ ವೇಳೆ ಲಾಂಗ್ ಕೋಟ್ ಹಾಕಿಕೊಂಡಿರುವವರನ್ನು ನೋಡಿದರೆ ಅವರು ಮಂತ್ರಿಯಾಗಿದ್ದಾರೆಂದು ಗೊತ್ತಾಗುತ್ತದೆ. ನಾನು ಈ ಸಭೆಯ ಸದಸ್ಯನಾಗಿದ್ದರೂ ಈ 27 ಜನರಲ್ಲಿ ಯಾರು ಯಾರಿಗೆ ಯಾವ ಯಾವ ಪೋರ್ಟ್-ಫೋಲಿಯೋ ಎನ್ನುವುದು ಗೊತ್ತಿಲ್ಲ ಒಂದು ಅರ್ಜಿಯನ್ನು ಕೊಡಬೇಕಾಗಿ ಬಂದಾಗ ಯಾರಿಗೆ ಕೊಡುವುದೆಂದೇ ಗೊತ್ತಾಗಲಿಲ್ಲ. ಈ ಮಂತ್ರಿಗಳಿಗೆಲ್ಲಾ ಎಲ್ಲಿ ರೂಮುಗಳನ್ನು ಮಾಡುತ್ತಾರೆಂದ ಒಬ್ಬರನ್ನು ಕೇಳಿದುದಕ್ಕೆ, ಇಲ್ಲಿ ಜಾಗ ಸಾಲದೆ 'ಕಾರ್ ಷೆಡ್'ಗಳನ್ನು ತೆಗೆದುಕೊಳ್ಳುತ್ತಾರೋ ಏನೋ ಎಂದು ಹೇಳಿದರು. ನಾಲ್ಕು ಜನ ಮಂತ್ರಿಗಳನ್ನು ಒಂದೊಂದು ಕಡೆ ಹಾಕಿದರೂ ಚಿಂತೆಯಿಲ್ಲ, ಇವರಿಗೆ 'ಕಾರ್ ಷೆಡ'ಗಳನ್ನು ಮಾತ್ರ ಕೊಡಬೇಡಿ, ಹಾಗೆ ಕೊಟ್ಟರೆ ಮೈಸೂರ ಮಂತ್ರಿ ಮಂಡಲ ಈ ಮಟ್ಟಕ್ಕಿಳಿದಿದೆಯಲ್ಲಾ ಎಂದು ನಗುತ್ತಾರೆ. (ನಗು !) ಸ್ವಾತಂತ್ರ್ಯ ಬರುವುದಕ್ಕೆ ಹಿಂದೆ ನಮ್ಮ ರಾಜ್ಯವನ್ನು ಮಾದರಿ ಮೈಸೂರು ಎಂದು ಹೇಳುತ್ತಿದ್ದರು. ಈಗ ಹುಟ್ಟುವವರಿಗೆ ಮುಂದು, ಬೆಳೆಯುವವರಿಗೆ ಹಿಂದು ಎನ್ನುವ ಹಾಗಾಗಿದೆ. ಉದಾಹರಣೆಗೆ ಹೇಳುವುದಾದರೆ, ವಿದ್ಯುಚ್ಛಕ್ತಿಯ ವಿಚಾರದಲ್ಲಿ ಇದು ಇತರ ರಾಜ್ಯಗಳಿಗಿಂತ ಮುಂದಾಗಿಲ್ಲ.

ಮಂತ್ರಿಗಳ ಸಂಖ್ಯೆಯನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಬೇರೆ ದೇಶಗಳ ಕಡೆ ತೋರಿಸುತ್ತಾರೆ, ಆದರೆ ಕೈಗಾರಿಕೆ, ವಿದ್ಯುಚ್ಛಕ್ತಿ, ನೀರಾವರಿ ಯಾವುದರಲ್ಲಾದರೂ ಇತರ ರಾಜ್ಯಗಳಿಗಿಂತ ನಾವು ಮುಂದುವರಿದ್ದೇವೆ ಎಂದು ಯಾರಾದರೂ ಮಂತ್ರಿಗಳು ಎದ್ದು ಹೇಳಲಿ, ಐದು ನಿಮಿಷ ಕಾಲಾವಕಾಶ ಕೊಡುತ್ತೇನೆ. (ನಗು)

ಶ್ರೀ ಕೆ. ಪ್ರಭಾಕರ್ (ಸಮಾಜ ಕಲ್ಯಾಣ ಶಾಖೆಯ ಉಪ ಮಂತ್ರಿಗಳು).—ಈ ಬಗ್ಗೆ ಅಂಕಿ ಅಂಶಗಳನ್ನು ಮಾನ್ಯ ಸದಸ್ಯರು ಹೇಳಿದರೆ ಆಗ ಕನ್ನಡಿಯ ಹಾಗಿರುತ್ತದೆ...

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನನಗೆ ಐದಾರ ಗುಮಾಸ್ತರು, ಸೆಕ್ರೆಟರಿ ಮುಂತಾದ ಸಿಬ್ಬಂದಿಯನ್ನು ಕೊಟ್ಟರೆ ಅಂಕಿಅಂಶಗಳನ್ನು ಎರಡು ಮೂರು ದಿನಗಳಲ್ಲಿ ಒದಗಿಸುತ್ತೇನೆ. ಯಾವುದರಲ್ಲಿ ಮುಂದಿದ್ದೇವೆಂಬುದನ್ನು ಅವರ ಭಾಷಣದಲ್ಲಿ ಹೇಳಲಿ, ಜನರಿಗೆ ಆಶ್ವಾಸನೆ ಭರವಸೆಗಳನ್ನು ಕೊಡುವುದರಲ್ಲಿ ಕಾಂಗ್ರೆಸ್ ಸರ್ಕಾರವನ್ನು ಬಿಟ್ಟರೆ ಇನ್ನಾರೂ ಇಲ್ಲ. ಚುನಾವಣೆ ಕಾಲದಲ್ಲಿ ಇಂತಿಂಥಾ ಬಾಬಿಗೆ ಇಷ್ಟಿಷ್ಟು ಹಣ ಒದಗಿಸಿದ್ದೇವೆ, ಇಷ್ಟು ಕೆಲಸ ಮಾಡುತ್ತೇವೆ, ಜನರ ಸೇವೆ ಮಾಡುತ್ತೇವೆ ಎಂದು ಹೇಳುತ್ತಾರೆ. ಕಾಂಗ್ರೆಸ್ಸಿನವರ ಗುರ್ತು ಎತ್ತು. ಎತ್ತು ಅಂದರೆ ನಾವು ಬಸವಣ್ಣನ ಹಾಗೆ ಜನರಿಗಾಗಿ ಕೆಲಸಮಾಡುತ್ತೇವೆ ನಮಗೇ ಓಟು ಕೊಡಿ ಎಂದು ಕೇಳುತ್ತಾರೆ. ಇವರು ಮೊದಲು ನಾನು ಪಾರ್ಲಿಮೆಂಟಿಗೆ ಹೋಗುತ್ತೇನೆಂದು ಹೇಳಿ ಚುನಾಯಿತರಾಗುವುದು, ಆಮೇಲೆ ರಾಜೀನಾಮೆ ಕೊಟ್ಟು ಇಲ್ಲ ಚೀಫ್ ಮಿನಿಸ್ಟರು ಅಥವಾ ರೆವಿನ್ಯೂ ಮಿನಿಸ್ಟರು ಆಗುತ್ತೇನೆಂದು ಇಲ್ಲಿಗೆ ಬರುವುದು ? ಪಾನನಿರೋಧವಿರುವ ಕಡೆ ಪಾನವನ್ನು ಜಾರಿಮಾಡಿ ಉಪಚುನಾವಣೆಗಳು ನಡೆಯುತ್ತಿವೆ. ಇಂಥ ಚಕ್ಕಂದಗಳಿಗಾಗಿ ಜನರ ಹಣವನ್ನು ಖರ್ಚುಮಾಡುವುದು ? ಒಬ್ಬ ಮನುಷ್ಯ ಒಂದು ಸಲ ಚುನಾಯಿತನಾದ ಮೇಲೆ ಆ ಕ್ಷೇತ್ರದಲ್ಲಿ ಅವನು ಸೇವೆಸಲ್ಲಿಸಬೇಕು. ಅದನ್ನು ಬಿಟ್ಟು ಅಲ್ಲಿ ರಾಜೀನಾಮೆ ಕೊಡುವುದು, ಇನ್ನೊಂದು ಕಡೆ ಬರುವುದು, ಇದೊಂದು ತಮಾಷೆಯಾಗಿ ಹೋಗಿದೆ. ಇವರು ಹಾಡಿದ್ದೇ ರಾಗವಾಗಿದೆ. ಜನರನ್ನು ಗೆಯ್ಯುವ ಎತ್ತುಗಳನ್ನಾಗಿ ಮಾಡಿ ಚಕ್ಕಂದವಾಡುತ್ತಿದ್ದಾರೆ. ಈ ಸರ್ಕಾರದಲ್ಲಿ ಉಪಾಧ್ಯಾಯರಿಲ್ಲದ ಸ್ಕೂಲು, ಮಂತ್ರಿಗಳಿಲ್ಲದ ಸಭೆ ಇಲ್ಲ, ಡಾಕ್ಟರುಗಳು ನರ್ಸುಗಳಿಲ್ಲದ ಆಸ್ಪತ್ರೆಸರ್ವೇ ಸಮಾನ್ಯವಾಗಿದೆ. ಚುನಾವಣೆಯ ಕಾಲದಲ್ಲಿ ಈ ಕ್ಷೇತ್ರಕ್ಕೆ ಐದು ಆಸ್ಪತ್ರೆಗಳನ್ನು ಕೊಟ್ಟಿದ್ದೇವೆಂದು ಹೇಳಿ, ಅವಕ್ಕೆ ಶಂಕುಸ್ಥಾಪನೆ ಕೂಡ ಮಂತ್ರಿಗಳು ಮಾಡಿ ಬರುತ್ತಾರೆ. ಆಮೇಲೆ ನೋಡಿದರೆ ಡಾಕ್ಟರೂ ಇಲ್ಲ, ನರ್ಸುಗಳೂ ಇಲ್ಲ, ಸ್ಕೂಲುಗಳಿರುತ್ತವೆ ಆದರೆ ಒಬ್ಬರು ಮೇಷ್ಟ್ರೂ ಇರುವುದಿಲ್ಲ. 18 ಸೇತುವೆಗಳಿಗೆ ಮಂತ್ರಿಗಳು ಶಂಕುಸ್ಥಾಪನೆ ಮಾಡಿದ್ದಾರೆ, ಇವುಗಳಲ್ಲಿ ಎಷ್ಟು ನಿರ್ಮಾಣವಾಗಿವೆ ಎಂದು ಕೇಳಿದರೆ, ಎರಡು ಆಗಿವೆ ಎಂದು ಉತ್ತರ ಕೊಟ್ಟರು. ಹೀಗಿದ್ದ ಮೇಲೆ ಏಕೆ ಇವರು ಶಂಕುಸ್ಥಾಪನೆ ಮಾಡಬೇಕಾಗಿತ್ತು ? ಚುನಾವಣೆಗಾಗಿ ಹೋದ ಕಾಲದಲ್ಲಿ ಶಂಕುಸ್ಥಾಪನೆ ಮಾಡುತ್ತೇವೆಂದು ಹೇಳಿ ಜನರಿಂದ ಐದುನೂರು ಆರುನೂರು ರೂಪಾಯಿ ತನಕ ಖರ್ಚುಮಾಡಿಸಿ ಶಂಕುಸ್ಥಾಪನೆ ಮಾಡುತ್ತಾರೆ. ಮಂತ್ರಿಗಳು ಹಾಕುವುದೇನೋ ಒಂದು ದೃಷ್ಟಿಯಲ್ಲಿ ಸಹಜ. ಏಕೆಂದರೆ ಆನೆ ಫಲಕ್ಕೆ ಬರುವ ಹಾಗೆ ಯಾವಾಗಲೋ ಜೀವಮಾನದಲ್ಲಿ ಮಂತ್ರಿಯಾಗುತ್ತಾರೆ.

ಯಾವುದಾದರೂ ಒಂದು ಕೆಲಸ ಮಾಡಬೇಕಾದರೇ, ಅಸ್ತಿಭಾರಶಿಲೆ ಹಾಕಬೇಕಾದರೆ ಅಂದಾಜು, ಪ್ಲಾನು ತಯಾರಾಗಿದೆಯೆ, ಬಡ್ಜೆಟ್‌ನಲ್ಲಿ ಪ್ರಾವಿಷನ್ ಇದೆಯೆ, ಈ ವರ್ಷ ಮಾಡಲು ಸಾಧ್ಯವೆ ಎಂದು ನೋಡಿ ಮುಂದುವರಿಯಬೇಕು. ಹಾಗಿಲ್ಲದಿದ್ದರೆ ಪಡುವ ಶ್ರಮ ಮತ್ತು ಹಣದ ವ್ಯಯ ಸಾರ್ಥಕವಾಗುವುದಿಲ್ಲ ಎಂಬುದನ್ನು ಗಮನಿಸಬೇಕು.

ಈಗ 27 ಜನ ಮಂತ್ರಿ ಮಂಡಲದ ಅಧಿಕಾರ ವಹಿಸಿಕೊಂಡಿದ್ದಾರೆ. ಇವರೇನಾದರೂ ಪ್ರವಾಸ ಹೋದರೆ ಅಧಿಕಾರಿಗಳಿಗೆ ಪುರುಸೊತ್ತೇ ಇರುವುದಿಲ್ಲ ಮತ್ತು ಯಾವ ಪ್ರಯೋಜನವೂ ಆಗದೆ ಬರೀ ಟಿ.ಎ. ಮತ್ತು ಡಿ.ಎ. ಗಾಗಿ ಹಣ ಖರ್ಚಾಗುತ್ತದೆ, ಜನರ ಕಷ್ಟಸುಖ ವಿಚಾರಿಸದೆ ಪ್ರವಾಸ ಮಾಡಿದರೆ ಪ್ರಯೋಜನವೇನು ? ಹೋದ ಕಡೆ ಯಾವ ಮಂತ್ರಿಯೂ ಸಹ ಜನರನ್ನು ವಿಚಾರಿಸಿ ಅವರ ಪ್ರಶ್ನೆಗೆ ಉತ್ತರ ಕೊಟ್ಟಿರುವುದು ನನಗಂತೂ ಗೊತ್ತಿಲ್ಲ, ಹಾಗೆ ಮಾಡಿದ್ದರೆ ಹೇಳಲಿ. ಏನಾದರೂ ಕಷ್ಟವಿದ್ದರೆ, ಸಮಸ್ಯೆಯಿದ್ದರೆ ನೋಡಿ ಪರಿಹಾರ ಮಾಡುವುದಕ್ಕೆ ಪ್ರಯತ್ನಪಡುತ್ತಿಲ್ಲ.

ವಿದ್ಯಾಇಲಾಖೆಯವರು ತುಮಕೂರಿನಲ್ಲಿ ಒಬ್ಬ ಎಜುಕೇಷನ್ ಸಬ್‌ಡಿವಿಜನ್ ಆಫೀಸರನ್ನು ಹಾಕಿ, 150 ರೂಪಾಯಿಗಳ ಬಂಗಲೆ, ಆರು ಜನ ಗುಮಾಸ್ತರು ಮುಂತಾದ ಸಿಬ್ಬಂದಿ ಒದಗಿಸಿ ಸಾಮಾನ್ಯವಾಗಿ ಎರಡು ತಿಂಗಳಾದುವು. ಈ ದಿವಸದವರೆಗೂ ಅವರೇನು ಮಾಡಬೇಕೆಂಬುದೇ ಗೊತ್ತಿಲ್ಲ. ಸಂಬಳ ಕೊಡುತ್ತಿದ್ದಾರೆ, ಆಫೀಸಿದೆ. ಅವರಿಗೆ ಮಾಡಬೇಕಾದ ಕೆಲಸವೇನಿದೆಯೆಂಬುದೇ ತಿಳಿಯದು. ಹೀಗಿದೆ ಪರಿಸ್ಥಿತಿ.

ಸಹಕಾರ ಸಂಘದ ವಿಷಯ ನೋಡಿದರೆ ರಾಜಕೀಯ ಧುರೀಣರ ಹಾವಳಿ ಹೆಚ್ಚಾಗುತ್ತಿದೆ. ರೈತರಿಗೆ ಬೇಕಾದ ಹಾಗೆ ಸಹಾಯ ಮಾಡುವುದಾಗಿ ಕೆಲವರು ಹೇಳಿಕೊಂಡು ಮುಖಂಡರಂತೆ ಓಡಾಡಿ ಇಂಗ್ಲೆಂಡಿಗೋ ಬೆಲ್ಜಿಯಂಗೋ ಓದಲು ರೈತರ ಹಣದ ಸಹಾಯ ಪಡೆದು ವ್ಯಾಸಂಗ ಮಾಡಲು ಹೋಗುತ್ತಾರೆ. ಆದರೆ ಇದರಿಂದ ಅವರು ಸ್ವಾರ್ಥಸಾಧಿಸಿಕೊಳ್ಳುತ್ತಿದ್ದಾರೆಯೇ ವಿನಾ ರೈತರ ಕಷ್ಟಸುಖ ವಿಚಾರಿಸುತ್ತಿಲ್ಲ, ಅವರಿಗೆ ಬೇಸಾಯದ ವಿಷಯವೇ ಚೆನ್ನಾಗಿ ಗೊತ್ತಿರುವುದಿಲ್ಲ. ರೈತರ ಕೆಲಸಕ್ಕೆ ಬೇಕಾದ ಗುಳ ವಗೈರೆಯನ್ನು ಕೂಡ ಸಕಾಲದಲ್ಲಿ ಒದಗಿಸುವುದಿಲ್ಲ. ರೈತರ ನೆಪದಲ್ಲಿ ಮುಖಂಡರು ಅನುಕೂಲ ಹೊಂದಿ ಚುನಾವಣೆಯಲ್ಲಿ ಆಯ್ಕೆಯಾಗುತ್ತಾರೆ. ಇಂಥವರಿಗೆ ಪಾಶ್ಚಾತ್ಯ ದೇಶಗಳಿಗೆ ಹೋಗಲು ಏಕೆ ಅವಕಾಶ ಕೊಡಬೇಕು ? ಮುಂದಾದರೂ ಇಂಥವರು ಹೊರದೇಶಗಳ ವ್ಯಾಸಂಗಕ್ಕೆ ಹೋಗಲು ಅವಕಾಶ ಕೊಡುವುದಿಲ್ಲವೆಂದು ನಂಬುತ್ತೇನೆ.

ಇನ್ನು ಸೊಸೈಟಿ ವಿಷಯ: ಈಗ ದೇಶದಲ್ಲಿ ಕೆಲವು ರಾಜಕೀಯ ಪಕ್ಷಗಳಿವೆ. ಒಬ್ಬ ಯಾರಾದರೂ ಸೊಸೈಟಿಯ ಹಣ ದುರುಪಯೋಗ ಮಾಡಿದನೆಂದು ಕಾಗದ ಬರೆದರೆ ಇನ್ನೊಂದು ಪಕ್ಷದವರು ಬಂದು ಅವನಂಥ ಸತ್ಯವಂತರು ಸಿಕ್ಕುವುದಿಲ್ಲ, ಕೇವಲ 72 ಸಾವಿರ ರೂಪಾಯಿಗಳ ದುರುಪಯೋಗ ಅಂಥ ದೊಡ್ಡದಲ್ಲ, ಅವನನ್ನು ಶಿಕ್ಷೆಗೆ ಗುರಿಪಡಿಸಬಾರದು ಎಂದು ಏನಾದರೂ ಹೇಳಿ ಬಿಡಿಸುತ್ತಾರೆ, ಚುನಾವಣೆಯಲ್ಲಿ ಓಟು ಕೊಡಿಸಿದ ಎಂದು ಏನಾದರೂ ಹೇಳಿ ಟೆಲಿಫೋನ್ ಮೂಲಕ ಹೇಳಿಸಿ ದುರುಪಯೋಗ ಮಾಡಿಬಿಡುತ್ತಾರೆ,ಬರವಣಿಗೆಯಲ್ಲಿ ಏನೂಇರುವುದಿಲ್ಲ. ನಿನ್ನೆಯ ದಿವಸ ಲಕ್ಕಪ್ಪನವರು ಲಾಳದ ಸೊಸೈಟಿ ವಿಚಾರ ಹೇಳಿದರು. ಅದಕ್ಕೆ ಮೂರು ಲಕ್ಷರೂಪಾಯಿಗಳನ್ನು ಕೊಟ್ಟು ಕೆಲವು ಕಾಲದನಂತರ ಹಣ ಎಲ್ಲಿ ಎಂದು ಕೇಳಿದರೆ ಎತ್ತಿನಕಾಲಲ್ಲಿದೆ ಎಂದು ಹೇಳಿದರಂತೆ, ಸ್ಕೈಕಲ್ ತಯಾರಿಸಲು ಒಬ್ಬ ಆಚಾರಿಗೆ ಬೆಳ್ಳಾವಿಯಲ್ಲಿ ಹಣಕೊಟ್ಟರಂತೆ. ಅದರ ವಿಚಾರ ಹೇಳುವುದಕ್ಕೇ ಸಾಧ್ಯವಿಲ್ಲ, ಈ ರೀತಿಯಿದೆ. ಹೀಗಿರುವಾಗ ಸರ್ಕಾರವಿದ್ದೇನು ಪ್ರಯೋಜನ ! ಮಾದಯ್ಯಗೌಡರು ಬಹಳವಾಗಿ ಸರ್ಕಾರವನ್ನು ಹೊಗಳಿದರೂ ಲೋಪದೋಷಗಳನ್ನು ವ್ಯಕ್ತಪಡಿಸಿದರು. ಈಗಲಾದರೂ ಸರ್ಕಾರದವರು ಒಂದು ಸುವ್ಯವಸ್ಥೆ ಮಾಡುವರೆಂದು ನಂಬುತ್ತೇನೆ.

(ಶ್ರೀ ಕೆ. ಪಿ. ರೇವಣಸಿದ್ದಪ್ಪ)

ಪಾನನಿರೋಧ ಯಶಸ್ವಿಯಾಗಿದೆಯೆಂದು ನಮ್ಮ ಹೊಸ ಗಾಂಧಿಮಕ್ಕಳು ಹೇಳುತ್ತಿದ್ದಾರೆ. ಸರಿಯಾಗಿ ಪರಿಶೀಲಿಸಿದರೆ ಇದು ನಿಜವೇ ಎಂಬುದು ಗೊತ್ತಾಗುತ್ತದೆ. ಬೆಂಗಳೂರಿಗೆ 36 ಮೈಲಿಗಳ ದೂರದಲ್ಲಿರುವ ಗೋರಿಬಿದನೂರಿನಲ್ಲಿ ಸುಮಾರು ಮೂರು ಸಾವಿರ ಈಚಲಮರಗಳಿಂದ ಹೆಂಡ ಇಳಿಸಿ ಪ್ರತಿದಿನ ಪೋಲೀಸ್ ಸ್ಟೇಷನ್ ಎದುರಿಗೇ ಮಾರಾಟ ಮಾಡುತ್ತಿದ್ದಾರೆ. ಚನ್ನಪಟ್ಟಣದಲ್ಲೂ ಇದೇ ರೀತಿ ನಡೆಯುತ್ತಿದೆ. ಇಷ್ಟರಮಟ್ಟಿಗೆ ಆಡಳಿತ ನಡೆಯುತ್ತದೆ!

ಮಂತ್ರಿಗಳು ಸಾಮಾನ್ಯವಾಗಿ ಮಾತನಾಡುವಾಗ ತಾವು ರೈತರ ಮಕ್ಕಳು, ರೈತರಿಗೆ ಸರಿಯಾದ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತೇವೆ ಎಂದು ಹೇಳುತ್ತಾರೆ. ಗ್ರಾಮಾಂತರ ಸಾರಿಗೆ ವಿಚಾರ ನೋಡಿದರೆ, ಸಂಚಾರ ಸೌಲಭ್ಯ ನೋಡಿದರೆ ಶೋಚನೀಯವಾಗಿದೆ. 50 ಮೈಲಿಗಳ ರಸ್ತೆಗೆ ಮಾತ್ರ ಅವಕಾಶ ಮಾಡಿವೆಯೆಂದು ಹೇಳುತ್ತಾರೆ. ಆದರೆ ಕಾಸ್‌ವೇ; ಸೇತುವೆ ವಗೈರೆ ನಿರ್ಮಿಸಲು ಹಣವಿಲ್ಲ ಎಂದು ಇಂಜಿನಿಯರು ಸರ್ಕ್ಯುಲರ್ ಕೊಟ್ಟಿದ್ದಾರೆ. ಗ್ರಾಮಾಂತರಗಳಲ್ಲಿ ವಾಸಮಾಡುವ ಮನುಷ್ಯರು ತಮ್ಮ ಊರಿನಿಂದ ಮತ್ತೊಂದು ಊರಿಗೆ ಅಥವಾ ಸಂತೆಗೆ, ಮಾರ್ಕೆಟ್ಟಿಗೆ ಹೋಗಲು ಸಂಚಾರಕ್ಕೆ ಮಾರ್ಗ ಕಲ್ಪಿಸಿಕೊಡಿ ಎಂದರೆ ಅದಕ್ಕೂ ಕೂಡ ಗಮನ ಕೊಡದಿದ್ದರೆ ಇದೆಂಥ ಪ್ರಜಾಪ್ರಭುತ್ವ? ಹೀಗೆ ಮಾಡಿದರೆ ರೈತರಿಗೆ ನಿಜವಾಗಿಯೂ ಸಹಾಯವಾಗುತ್ತದೆಯೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಸರ್ಕಾರದವರು ಇತ್ತೀಚೆಗೆ ನೀರಾವರಿ ಬಾವಿಗಳಿಗೆ ರೈತರಿಗೆ ಸಾಲ ಕೊಡುತ್ತೇವೆಂದು ಹೇಳುತ್ತಿದ್ದಾರೆ. ನಿಜವಾಗಿಯೂ ಇದು ಉತ್ತಮವಾದ ಯೋಜನೆ. ಆದರೆ ಇದರಿಂದ ರೈತರಿಗೆ ಸರಿಯಾದ ಸೌಲಭ್ಯ ದೊರೆಯುತ್ತಿದೆಯೇ ಎಂಬುದನ್ನು ಗಮನಿಸಬೇಕು. ಕೇಂದ್ರಸರ್ಕಾರದಿಂದ ಹೆಚ್ಚು ಹಣ ಪಡೆದು ರೈತರಿಗೆ ಸರಿಯಾಗಿ ಸಹಾಯ ಮಾಡಬೇಕು. ನನ್ನಂಥ ರಾಜಕೀಯ ಧುರೀಣನಿಗೆ ಹಳೆಯ ಬಾವಿಯನ್ನು ಶೋಡಿಸಿ ತೋರಿಸಲಿಕ್ಕಲ್ಲ ಈ ಹಣ ಕೊಟ್ಟಿರುವುದು, ನಿಜವಾಗಿ ಬಾವಿಯ ಅವಶ್ಯಕತೆ ಹೊಂದಿರುವವನಿಗೆ ಬಾವಿ ತೋಡಿಸಲಿಕ್ಕೆ ಕೊಡುವುದು. ಹಾಗೆ ಮಾಡಿದರೇನೆ ನಮ್ಮ ದೇಶದ ಆಹಾರದ ಕೊರತೆಯನ್ನು ಹೋಗಲಾಡಿಸಲು ಸಾಧ್ಯವಾದೀತು. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜೆ. ದೇವಯ್ಯ (ಮಂಡ್ಯ).—ಸಭಾಪತಿಯವರೇ, 1962–63ನೆಯ ಸಾಲಿನ ಅಂದಾಜಿನ ಪಟ್ಟಿಯ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊಟ್ಟಮೊದಲನೆಯದಾಗಿ ತಮ್ಮನ್ನು ವಂದಿಸುತ್ತೇನೆ. ನಾನು 1952ನೆಯ ಇಸವಿಯಿಂದ 1960ನೆಯ ಇಸವಿಯ ವರೆಗೂ ಕಾಂಗ್ರೆಸ್ ಪಾರ್ಟಿಯಲ್ಲಿದ್ದು ಲೋಕಲ್ ಸಂಸ್ಥೆಗಳ ಸ್ಥಾನದಿಂದ ಕಾಂಗ್ರೆಸ್ ಟಿಕೆಟ್ಟಿನ ಮೇಲೆ ಚುನಾಯಿತನಾಗಿ ಬಂದು 8 ವರ್ಷಗಳು ಬಡ್ಜೆಟ್ಟಿನ ಮೇಲೆ ಮಾತನಾಡಿ ಅದಕ್ಕೆ ನನ್ನ ಸಮರ್ಥನೆಯನ್ನು ಕೊಟ್ಟಿದ್ದೇನೆ. ಈ ವರ್ಷ ಮಾತ್ರ ನಾನು ಸ್ವತಂತ್ರನಾಗಿ ಇಲ್ಲಿ ಬಂದವನಾಗಿ ನಾನಿದನ್ನು ಸಮರ್ಥಿಸಬೇಕೋ ಬೇಡವೋ ಎಂಬ ಶಂಕೆಯಲ್ಲಿದ್ದೇನೆ.

ಒಬ್ಬ ಸದಸ್ಯರು.—ಅಲಸೂರು ಜೋಯಿಸರನ್ನು ಕೇಳಿ?

ಶ್ರೀ ಜೆ. ದೇವಯ್ಯ.—ನನ್ನ ಮನಸ್ಸಿನ ಜೋಯಿಸನ ಅಭಿಪ್ರಾಯ ತೆಗೆದು ಕೊಂಡೇ ಮಾತನಾಡುತ್ತೇನೆ.

ನಾನು ಹಿಂದಿನ ಕೆಲವು ವರ್ಷಗಳು ಕಾಂಗ್ರೆಸ್ ಸಂಸ್ಥೆಯಲ್ಲಿ ಕೆಲಸ ಮಾಡಲು ಉತ್ಸಾಹಶಾಲಿಯಾಗಿದ್ದೆ. ಈಗಲೂ ಅದೇ ರೀತಿ ಸೇವೆಮಾಡಲು ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಾಗಲಿ, ಕೌನ್ಸಿಲ್‌ನಲ್ಲಾಗಲೀ ಅಲ್ಲದಿದ್ದರೆ ಸ್ಥಳೀಯ ಕಾಂಗ್ರೆಸ್ ಸಂಸ್ಥೆಗಳಲ್ಲೋ ಕೆಲಸ ಮಾಡಲು ಸ್ಥಳೀಯ ಕಾಂಗ್ರೆಸಿನವರು ಅವಕಾಶ ಕೊಟ್ಟಿದ್ದರೆ ನಾನು ಆ ಸಂಸ್ಥೆಯಿಂದ ಹೊರಗೆ ಬರುತ್ತಿದ್ದೆನೋ ಅಥವಾ ಅಲ್ಲೇ ಅವರ ಹಿಂಬದಿಯಲ್ಲೇ ಕೆಲಸ ಮಾಡಿಕೊಂಡು ಇರುತ್ತಿದ್ದೆನೋ ಎಂಬುದು ಅವರಿಗೆ ಈಗ ಮನವರಿಕೆಯಾಗುತ್ತಿತ್ತು.

ಈದಿವಸ ನಾನು ಮಾತನಾಡಲು ಇರುವ ಉದ್ದೇಶವೇನೆಂದರೆ 1952ನೆಯ ಇಸವಿಯಿಂದ 1957ನೆಯ ಇಸವಿಯವರೆಗೂ ಕೇವಲ ಏಳು-ಎಂಟು ಮಂತ್ರಿಗಳಿದ್ದು ಐದು ವರ್ಷಗಳ ಆಡಳಿತ ಮಾಡಿದರು. 1957ರಿಂದ 1961ರ ವರೆಗೆ ಹತ್ತು ಜನ ಮಂತ್ರಿಗಳು ಆರು ಜನ ಉಪಮಂತ್ರಿಗಳಿದ್ದುಕೊಂಡು ರಾಜ್ಯಾಡಳಿತ ನಡೆಸಿದ್ದಾರೆ. ಈಚೆಗೆ ಸುಮಾರು ಏಳು-ಎಂಟು ತಿಂಗಳಿಂದ ಇನ್ನೂ ನಾಲ್ಕು ಮಂತ್ರಿಗಳು ಜಾಸ್ತಿಯಾಗಿದೆ, ಕೊನೆಗೆ ಈ ವರ್ಷ ಕಳೆದ ಒಂದು ವಾರದಿಂದೀಚೆಗೆ 25 ಜನ ಮಂತ್ರಿಗಳು ಸ್ಥಾನಮಾಡಿಕೊಂಡಿದ್ದಾರೆ. ಒಟ್ಟಿನಲ್ಲಿ ಎಷ್ಟೇ ಜನ ಮಂತ್ರಿಗಳಿರಲಿ, 25 ಜನ ಮಂತ್ರಿಗಳಿರಲಿ ಅಥವಾ ಮೂರೇ ಜನ ಮಂತ್ರಿಗಳಿರಲಿ ಅವರಿಟ್ಟ ಬಡ್ಜೆಟ್ಟನ್ನು ಜನ ಎಷ್ಟು ವಿರೋಧಿಸಿದರೂ ತಮ್ಮ ಬಹುಮತದ ಪ್ರಭಾವದಿಂದ ಮಂಜೂರು ಮಾಡಿಕೊಂಡು ಆಡಳಿತ ನಡೆಸಿಕೊಂಡು ಬರುತ್ತಾರೆ. ನಾನು ಇದನ್ನೆಲ್ಲಾ ಮಾತನಾಡಿದರೆ ರಾಜಕೀಯಕ್ಕಾಗಿ ಮಾತನಾಡುತ್ತಿದ್ದೇನೆಂದು ಯಾರೂ ತಿಳಿದುಕೊಳ್ಳಕೂಡದು, ಏಕೆಂದರೆ, ಈ ಬಡ್ಜೆಟ್ ದೇಶದ ಎರಡು ಕೋಟಿ ಜನರ ಕಷ್ಟವನ್ನು ನೋಡುವ ಬಡ್ಜೆಟ್ಟು. ಇಂಥ ಬಡ್ಜೆಟಿನ ಮೇಲೆ ಸದಸ್ಯರು ಮಾತನಾಡುವಾಗ 25 ಮಂತ್ರಿಗಳಿದ್ದರೆ ಜನರ ಕಷ್ಟಸುಖಗಳನ್ನು ತಿಳಿದುಕೊಂಡರೆ ಹೇಗೆ, ಇಬ್ಬರು ಮಂತ್ರಿಗಳಿದ್ದರೆ ಹೇಗೆ, ದೇಶದ ಜನರ ಕುಂದುಕೊರತೆಗಳನ್ನು ನಿವೇದಿಸಿಕೊಳ್ಳುವಾಗ ಅದನ್ನು ಗುರುತು ಹಚ್ಚಿಕೊಂಡು, ಸರಿಯಾದ ಸವಜಾಯಿಷಿಕೊಟ್ಟು ಅವರಿಗೆ ಉಪಕಾರ ಮಾಡಿಕೊಡಬೇಡವೇ! ಹೀಗಿರುವಲ್ಲಿ ಈಗ ನೋಡಿದರೆ ಹಣಕಾಸಿನ ಮಂತ್ರಿಗಳು ಜೊತೆಗೆ ಒಬ್ಬರು ಉಪಮಂತ್ರಿಗಳು ಮಾತ್ರ ಈ ಸಭೆಯಲ್ಲಿದ್ದಾರೆ. ಹಣಕಾಸಿನ ಮಂತ್ರಿಗಳೇ ಎಲ್ಲಕ್ಕೂ ಉತ್ತರ ಕೊಡಬೇಕೆಂದರೆ ಬಹಳ ಕಷ್ಟ. ಆಯಾ ಬಾಬಿನ ಮಂತ್ರಿಗಳು ತಮ್ಮ ಭಾಗಕ್ಕೆ ಸಂಬಂಧಪಟ್ಟ ಹಾಗೆ ಉತ್ತರ ಕೊಡುವುದಾದರೆ ಅನುಕೂಲವಾಗುತ್ತದೆ.

ಇನ್ನು ನಮ್ಮ ಮಂಡ್ಯ ಡಿಸ್ಟ್ರಿಕ್ಟಿನ ವಿಚಾರವನ್ನು ಹೇಳುವುದಾದರೆ, ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ವಿಶ್ವೇಶ್ವರಯ್ಯ ನಾಲಾ ಬಂದು ಸುಮಾರು ಮೂವತ್ತು ವರ್ಷಗಳಾದುವು. ಈ 30 ವರ್ಷಗಳಿಂದ ಆ ಭಾಗದಲ್ಲಿ ಕಂಟ್ರಿಬ್ಯೂಷನ್, ವಾಟರ್‌ರೇಟ್, ರೆವಿನ್ಯೂ ಕಂದಾಯ ಎಲ್ಲಾ ವಸೂಲು ಮಾಡಿಕೊಳ್ಳುತ್ತಲೇ ಬಂದು ಇಂದಿಗೆ ಕಂಟ್ರಿಬ್ಯೂಷನ್ ಎಲ್ಲಾ ಪೂರಾ ಕೊಟ್ಟಾಗಿದೆ. ಇಷ್ಟಾದರೂ ಅಲ್ಲಿ ರೆವಿನ್ಯೂ ಖುಷ್ಕಿ ಕಂದಾಯವನ್ನು ವಸೂಲು ಮಾಡುವುದನ್ನು ನಿಲ್ಲಿಸಿಲ್ಲ. ಈಗಲಾದರೂ ಅದನ್ನು ವಜಾಮಾಡಿ ವಾಟರ್ ರೇಟನ್ನು ಖಾಯಂ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಆ ಮೇಲೆ ರೆವಿನ್ಯೂ ಇಲಾಖೆಯವರು ಜನಗಳಿಗೆ ಜಮೀನುಗಳನ್ನು ವ್ಯವಸಾಯಕ್ಕೆ ಕೊಡುತ್ತಿರುವ ವಿಚಾರ. ಈ ಜಮೀನುಗಳನ್ನು ಕೊಡುವಾಗ ಯಾರು ಖುದ್ದು ವ್ಯವಸಾಯ ಮಾಡುತ್ತಾರೋ ಅವರಿಗೆ

ಮಾತ್ರ ಜಮೀನು ಕೊಡಬೇಕೆಂಬುದು ನ್ಯಾಯವಾದರೂ ಅಂಥವರಿಗೆ ಕೊಡದೆ ಬೇರೆಯವರಿಗೆ ಕೊಟ್ಟು ಅವರು ಜಮೀನು ಪಡೆದು ಮಾರಾಟ ಮಾಡುತ್ತಿದ್ದಾರೆ. ಒಮ್ಮೆ ತೆಗೆದುಕೊಂಡು ಮಾರಾಟಮಾಡಿ ಮತ್ತೆ ಜಮೀನಿಗೆ ಅರ್ಜಿ ಹಾಕಿಕೊಳ್ಳುತ್ತಾರೆ. ಮಂಡ್ಯ ನಾಲಾ ಕೆಳಗೆ ಬೆಲೆ ಬಾಳುವ ಜಮೀನುಗಳನ್ನು ಹೀಗೆ ಕಡಮೆ ದರಕ್ಕೆ ತೆಗೆದುಕೊಂಡು ಮಾರಾಟಮಾಡಿರುವ ನಿದರ್ಶನಗಳು ಅನೇಕವಾಗಿವೆ. ಆದ್ದರಿಂದ ಸರ್ಕಾರದವರು ತಾಲ್ಲೂಕ್ ಅಧಿಕಾರಿಗಳಿಗೆ ಸೂಕ್ತ ತಿಳಿವಳಿಕೆ ಕೊಟ್ಟು ಒಂದು ಸಾರಿ ಒಬ್ಬರಿಗೆ ಜಮೀನು ಕೊಟ್ಟ ಮೇಲೆ ಪುನಃ ಜಮೀನು ಕೊಡಕೂಡದೆಂದು ಆಜ್ಞೆ ಮಾಡಿ, ಯಾರಾದರೂ ಹಾಗೆ ಜಮೀನು ತೆಗೆದುಕೊಂಡು ಮಾರಿದ್ದರೆ ಅದನ್ನು ಹಿಂದಕ್ಕೆ ತೆಗೆದುಕೊಂಡು ಸರಿಯಾದ ಬುದ್ಧಿ ಕಲಿಸಬೇಕೆಂದು ನಾನು ಹೇಳುತ್ತೇನೆ. ಅನೇಕ ಕಾಂಗ್ರೆಸ್ ಮಿತ್ರರು ತಾವು ರಾಜಕೀಯದಲ್ಲಿ ನೊಂದವರು ಎಂದು ಹೇಳಿಕೊಂಡು ಸರ್ಕಾರದವರು ತೋರಿಸಿರುವ ಉದಾರತೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು ನಾನು ಹೇಳಬಲ್ಲೆ. ವಾಸ್ತವವಾಗಿ ನೊಂದವರು ಎಲ್ಲಿಯೋ ಇರುತ್ತಾರೆ. ಬೇರೆ ಯಾರೋ ಅವರ ಹೆಸರು ಹೇಳಿ ಸರ್ಟಿಫಿಕೇಟ್ ಮಾಡಿಸಿಕೊಂಡು ಜಮೀನಿಗೆ ಅರ್ಜಿ ಹಾಕಿಕೊಂಡಿರುವುದುಂಟು. ಇದನ್ನೆಲ್ಲಾ ಗಮನದಲ್ಲಿಟ್ಟು ಯಾರು ನಿಜವಾಗಿ ಕೆಲಸ ಮಾಡುವವರೋ ಅವರಿಗೆ ಮಾತ್ರ ಜಮೀನು ಕೊಡಬೇಕೆಂದು ನಾನು ಹೇಳುತ್ತೇನೆ.

ನೀರಾವರಿಯಿಂದಾಗಿ ಮುಳುಗಡೆಯಾದವರಿಗೆ ಜಮೀನು ಕೊಡುವುದು ಊರಿನ ಬಡಾವಣೆಯಿಂದಾಗಿ ಜಮೀನು ಹೋದವರಿಗೆ ಜಮೀನು ಕೊಡುವುದು ಅತ್ಯಾವಶ್ಯಕ. ನೀರಾವರಿಯಿಂದಾಗಿ ಜಮೀನು ಮುಳುಗಡೆ ಅನೇಕ ಕಡೆ ಆಗುತ್ತಿದೆ. ಅನೇಕ ಕಡೆ ಊರಿನ ಬಡಾವಣೆಗಳಾಗಬೇಕಾಗಿದೆ. ಪ್ರತಿಯೊಂದು ಮುನಿಸಿಪಾಲಿಟಿಯವರೂ ಬಡಾವಣೆ ಮಾಡಬೇಕೆಂದ ಮುಂದೆ ಬಂದಿದ್ದಾರೆ. ಹೀಗೆ ಜಮೀನು ಕಳೆದುಕೊಂಡವರಿಗೆ ಜಮೀನು ಕೊಡದೆ ಇದ್ದರೆ ಅವರಿಗೆ ಜೀವನಕ್ಕೆ ಬಹಳ ತೊಂದರೆಯಾಗುತ್ತದೆ. ಅವರಿಗೆ ಬೇಗ ಜಮೀನು ಕೊಡುವಂತೆ ಮಾಡಬೇಕು, ಒಬ್ಬ ಸಾಮಾನ್ಯ ಬಡವ ಅರ್ಜಿ ಹಾಕಿದರೆ ಎರಡು ಮೂರು ವರ್ಷಗಳಾಗಿರುವುದೂ ಉಂಟು. ಕೆಲವು ವೇಳೆ ಜನರು ಹರಿಜನರ ಹೆಸರು ಹೇಳಿ ಜಮೀನನ್ನು ಅವರ ಹೆಸರಿಗೆ ಮಾಡಿಸಿ ಕ್ರಮೇಣ ಖರೀದಿ ಮಾಡಿಸಿಕೊಳ್ಳುತ್ತಾರೆ. ಇಂಥವುಗಳನ್ನು ತಪ್ಪಿಸಲು ಇಂತಿಷ್ಟು ಕಾಲ ಅವರುಗಳನ್ನು ಜಮೀನನ್ನು ಪರಭಾರೆ ಮಾಡಕೂಡದೆಂದು ವಿಧಿಸಬೇಕೆಂದು ಹೇಳುತ್ತೇನೆ.

ಆಮೇಲೆ ವ್ಯವಸಾಯದ ವಿಚಾರ. ಇದು ನಮ್ಮ ದೇಶಕ್ಕೆ ಬಹಳ ಮುಖ್ಯವಾದುದು. ನಮ್ಮ ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಪ್ಯಾಕೇಜ್ ಸ್ಕೀಮ್ ಎಂಬುದನ್ನು ಏರ್ಪಾಡು ಮಾಡಿದ್ದಾರೆ. ಆದರೆ, ಈ ಹೊತ್ತಿನವರೆಗೂ ಅಲ್ಲಿಗೆ ಒಂದು ಬುಲ್‌ಡೋಜರಾಗಲೀ, ಟ್ರಾಕ್ಟರಾಗಲೀ ಬಂದಿಲ್ಲ. ಬರೀ ಕಾಗದ ಪತ್ರಗಳನ್ನು ನಡೆಸುವುದರಲ್ಲಾಗಿದೆಯೇ ಹೊರತು ಏನೂ ವ್ಯವಸಾಯ ನಡೆಯುತ್ತಿಲ್ಲ. ಏನೂ ವ್ಯವಸಾಯವೇ ನಡೆಯದಿದ್ದರೆ ಅಲ್ಲಿರತಕ್ಕ ಬಡಜನರ ಗತಿಯೇನಾಗಬೇಕು! ಜೊತೆಗೆ ಈಗ ಬಡವರಿಗೆ ಸುಲಭ ಬೆಲೆಗೆ ದಿನಸಿ ಸಿಕ್ಕುವುದೂ ಬಹಳ ಕಷ್ಟವಾಗಿದೆ, ಸರ್ಕಾರದವರನ್ನು ಕೇಳಿದರೆ ಸಾಲವಾಗಿ ಹಣ ಕೊಡುತ್ತೇವೆನ್ನುತ್ತಾರೆ. ಸಾಲ ತೆಗೆದುಕೊಳ್ಳುವುದಾದರೂ, ಆ ಜನ ಎಷ್ಟು ತರದಲ್ಲಿ ತೆಗೆದುಕೊಳ್ಳುವುದು ? ಕೊನೆಗೆ ಅದನ್ನು ತೀರಿಸುವುದು ತಾನೆ ಹೇಗೆ? ಆದ್ದರಿಂದ ಸರ್ಕಾರದವರು ರೈತರಿಗೆ ವ್ಯವಸಾಯಕ್ಕೆ ಕೊಡಬೇಕಾದ ದಿನಸಿ ವಗ್ಯೈರೆಗಳನ್ನು ರಿಯಾಯಿತಿಯ ದರದಲ್ಲಿ ಕೊಡುವ ವ್ಯವಸ್ಥೆ ಮಾಡಬೇಕು. ಬುಲ್‌ಡೋಜರಿಗೆ ಒಂದು ಗಂಟೆಗೆ 24 ರೂಪಾಯಿ ಮಜೂರಿ ಕೊಡಬೇಕೆಂದರೆ ಹೇಗೆ? ಬಡರೈತ ಎಲ್ಲಿಂದ ತರುತ್ತಾನೆ? ಇದನ್ನು ಸರ್ಕಾರದವರು ಯೋಚನೆ ಮಾಡಬೇಕು.

ನಾನು ಹಿಂದಿನಿಂದಲೂ ಹೇಳುತ್ತಿದ್ದೇನೆ. ಸರ್ಕಾರದವರು ಮನಸ್ಸಿಗೇ ಹಾಕಿಕೊಳ್ಳಲಿಲ್ಲ. ವ್ಯವಸಾಯ ಚೆನ್ನಾಗಿ ನಡೆಯಬೇಕೆಂಬುದೇ ನನ್ನ ಒಂದು ದೃಷ್ಟಿ. ರೈತರಿಗೆ ಈ ಬಗ್ಗೆ ಯಾವ ಯಾವ ತರಹದಲ್ಲಿ ಸಲಹೆ ಮಾಡಬೇಕು ಎಂಬುದನ್ನು ಸರ್ಕಾರ ಮನಗಾಣಬೇಕೆಂದು ಸಭಾಧ್ಯಕ್ಷರ ಮೂಲಕ ಸರ್ಕಾರದವರಿಗೆ ಹೇಳುತ್ತೇನೆ.

5-00 P.M.

ಇನ್ನು ಅರಣ್ಯ ವಿಚಾರ. ಈ ಅರಣ್ಯಗಳಿಂದ ದೇಶದಾದ್ಯಂತ ಸೌದೆ ಹೋಗುತ್ತಿದೆ. ಕಾಡು ಸೌದೆ ಸಪ್ಲೈ ಮಾಡುವಾಗ ಯಾವ ಸೌದೆ ಏನಿದೆ ಅದನ್ನು ಪರಿಶೀಲನೆ ಮಾಡುವವರೇ ಇಲ್ಲ. ಅರಣ್ಯ ಸಂಪತ್ತು ದೇಶದಲ್ಲಿ ಹೆಚ್ಚು ಬೇಕು. ಅದನ್ನು ಕಾಪಾಡುವುದಕ್ಕೆ ಸರ್ಕಾರದವರು ಹೆಚ್ಚು ಮುತುವರ್ಜಿ ವಹಿಸಬೇಕು. ಕಾಡುಸೌದೆಗಳ ಜೊತೆಗೆ ತೇಗ, ಹೊನ್ನೆ ಮರಗಳು ಹೋಗುವುದನ್ನು ತಪ್ಪಿಸಬೇಕು. ಅಲ್ಲಿಗೆ ಸರಿಯಾದಂಥ ಅಧಿಕಾರಿಗಳನ್ನು ನೇಮಿಸಬೇಕು.

ಇನ್ನು ನೀರಾವರಿಯ ವಿಷಯ. ವಿಶ್ವೇಶ್ವರಯ್ಯ ನಾಲಾ ಕೆಳಗೆ ಇರತಕ್ಕ ಜಮೀನುಗಳಲ್ಲಿ ನೀರು ಬಂದು ಅನೇಕ ವರ್ಷವಾಯಿತು. ಆಗ ಮಲೇರಿಯ ಹಾವಳಿಗೆ ವಿಲೇಜ ಷಿಫ್ಟಿಂಗ್ ಮಾಡಿದರು. ಆ ಲಾಗಾಯಿತು ಕೆಲವು ವಿಲೇಜುಗಳಿಗೆ ಕಂಪನ್‌ಸೇಷನ್ ಕೊಟ್ಟಿಲ್ಲ. ಕಳೆದುಕೊಂಡಿರತಕ್ಕ ರೈತರಿಗೆ ಈಗ್ಗೆ 30 ವರ್ಷಗಳಾದರೂ ಇನ್ನೂ ಪರಿಹಾರ ದೊರತಿಲ್ಲ. ಅವರಿಗೆ ಮನೆಗಳನ್ನು ಕಟ್ಟುವುದಕ್ಕೆ ದುಡ್ಡು ಇಲ್ಲ. ಸಾಲವೂ ಸರ್ಕಾರದಿಂದ ಇದುವರೆಗೆ ದೊರತಿಲ್ಲ. ಬಹಳ ಬಡರೈತರು ಇಂಜನಿಯರ್ ಅಫೀಸಿಗೆ, ಅಕ್ವಿಸಿಷನ್ ಆಫೀಸಿಗೆ ಅಲ್ಲಿಂದ ಡೆಪ್ಯುಟಿ ಕಮೀಷನರ ಆಫೀಸಿಗೆ ವರ್ಷಾನುಗಟ್ಟಲೆಯಿಂದ ತಿರುಗಾಡುತ್ತಿದ್ದಾರೆ. ಆದರೂ ಏನೂ ಪ್ರಯೋಜನವಾಗಲಿಲ್ಲ. ಇಲ್ಲಿರತಕ್ಕ ಮಂತ್ರಿಗಳಿಗಾದರೂ ಹೇಳಿದರೆ ಕೂಡಲೇ ಆ ಬಡ ಜನಗಳ ಬೇಡಿಕೆಯನ್ನು ಸಾಧಿಸುತ್ತಾರೆಂಬ ಆಶೆಯಿಂದ ನಾನು ಈ ಸಭೆಯ ಮುಂದೆ ಹೇಳುತ್ತಿದ್ದೇನೆ. ಆದ್ದರಿಂದ ಕೂಡಲೆ ವಿಲೇಜುಗಳಿಂದ ಷಿಫ್ಟಿಂಗ್ ಆಗಿರತಕ್ಕವರಿಗೆ ತಕ್ಕ ಪರಿಹಾರವನ್ನೊದಗಿಸಬೇಕೆಂದು ನಾನು ಮತ್ತೊಂದು ಸಾರಿ ಕೇಳಿಕೊಳ್ಳುತ್ತೇನೆ. ಆ ಸ್ಥಳದಲ್ಲಿನ ಜನಗಳು ಮಲೇರಿಯಾ ರೋಗಕ್ಕೆ ತುತ್ತಾದುದರಿಂದ ಆ ರೋಗದ ಪರಿಹಾರಕ್ಕಾಗಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈಗ ಆ ಕಾಯಿಲೆಯನ್ನು ಸಹ ಕಡಮೆ ಮಾಡಿದ್ದಾರೆ. ಅದರ ಮೇಲೆ ಈ ನಾಲಾ ಪ್ರದೇಶವನ್ನು ರಿಜರ್ವ್‌ಗೋಸ್ಕರ ಇಡಬೇಕೆಂದು ಅಭಿಪ್ರಾಯಪಟ್ಟಿರುವುದರಿಂದ ನಮ್ಮ ಭಾಗಕ್ಕೆ ನೀರಾವರಿಗೆ ಒಂದು ಫರ್ಲಾಂಗ್ ರಿಜರ್ವಗೋಸ್ಕರ ಗಲಾಟೆಯಾದ ವೇಳೆ ಸರ್ಕಾರದವರು ಒಂದು ಕಮಿಟಿ ಮಾಡಿದರು. ಆ ಕಮಿಟಿ ವರದಿ ಏನಾಯಿತೆಂಬುದನ್ನು ಎರಡು ವರ್ಷಗಳಿಂದೀಚೆಗೆ ಬಂದೇ ಇಲ್ಲ. ಆದರೂ ಒಂದು ಫರ್ಲಾಂಗ್ ರಿಜರ್ವ್‌ಗೆ ತೆಗೆಯಬೇಕೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ನನ್ನ ಮಾನ್ಯ

(ಶ್ರೀ ಜೆ. ದೇವಯ್ಯ)

ಸ್ನೇಹಿತರು ಹೇಳಿದ ಹಾಗೆ ಸರ್ಕಾರದವರು ನೀರಾವರಿಗೆ ಹೆಚ್ಚು ಸಹಾಯವನ್ನೇನೋ ಮಾಡಿದ್ದಾರೆ. ಆದರೆ ಪಿಕಪ್ ಚಾನಲ್ ಮತ್ತು ಸಣ್ಣಸಣ್ಣ ಕೆರೆಗಳನ್ನು ಕಟ್ಟಿರುವ ಬಗ್ಗೆ ಹೇಳುವುದಾದರೆ ಅದರಲ್ಲಿ ನೀರು ಇಲ್ಲವೇ ಇಲ್ಲ. ಒಂದೆರಡು ಎಕರೆಗಳಷ್ಟು ಜಮೀನು ಸಾಗುವಳಿಯಾಗುವ ಹಾಗಿಲ್ಲ. ಅಂತಹ ಕಡೆಗಳಲ್ಲಿ ಒಳ್ಳೆಯ ಅಧಿಕಾರಿಗಳನ್ನು ಕಳುಹಿಸಿ ವರದಿಗಳನ್ನು ತರಿಸಿಕೊಳ್ಳಬೇಕು. ಎಷ್ಟು ಎಕರೆ ನೀರಾವರಿಯಾಗಿದೆ, ರೈತರಿಗೆ ಎಷ್ಟರಮಟ್ಟಿಗೆ ಅನುಕೂಲವಾಗಿದೆಯೆಂಬುದನ್ನು ಪರಿಶೀಲನೆ ಮಾಡಬೇಕು. ದಾಕ್ಷಿಣ್ಯಕ್ಕೆ ಇಂಜನಿಯರ್ ಪಿಕಪ್ ನಾಲೆಗಳನ್ನು ಕಟ್ಟಿಕೊಟ್ಟಿದ್ದಾರೆ. ಇತ್ತೀಚೆಗೆ ಪಿಕಪ್ ನಾಲೆಯ ಕೆಳಗೆ ನೀರಾವರಿ ಚೆನ್ನಾಗಿ ಆಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುವವರೇ ಇಲ್ಲ. ಈ ಬಗ್ಗೆ ಸರ್ಕಾರದವರು ಒಂದು ಕಮಿಟಿ ಮಾಡಿ ಸರಿಯಾದ ಅಧಿಕಾರಿಗಳನ್ನು ಕೂಡಲೇ ನೇಮಿಸಿ ಅವರು ಅದಕ್ಕಾಗಿ ಎಷ್ಟು ಖರ್ಚಾಗಿದೆ ಎಂಬುದನ್ನು ಪರಿಶೀಲನೆ ಮಾಡಬೇಕು. ನಾವು ದುಡ್ಡು ಖರ್ಚುಮಾಡಿ ಪ್ರಯೋಜನವಾಗಿಲ್ಲವೆಂದು ಹೇಳಿದರೆ ಹೇಗೆ? ಮಂಡ್ಯ ತಾಲ್ಲೂಕಿನಲ್ಲಿ ಲೋಕಪಾವನಿಯ ಗಂಗವಾಡಿ ಹತ್ತಿರ ಅಣೆಕಟ್ಟು ಕಟ್ಟಿದ್ದಾರೆ. ಫೌಂಡೇಷನ್ ಸ್ಟೋನ್ ಹಾಕಿ ಐದು ವರ್ಷಗಳಾದುವು. ಆ ಚಾನಲ್ ತೆಗೆದು ಅರ್ಧ ಮರ್ಧ ಕೆಲಸ ಮಾಡಿದ್ದಾರೆ. ಇಷ್ಟು ದುಡ್ಡು ಖರ್ಚುಮಾಡಿ ಏನು ಪ್ರಯೋಜನವೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಈ ಬಗ್ಗೆ ಯಾರೂ ದಾಕ್ಷಿಣ್ಯಕ್ಕೊಳಗಾಗದೆ ಕೆಲಸ ಮಾಡಬೇಕು. ಇಲ್ಲದಿದ್ದರೆ ಜನ ಏನು ತಿಳಿದುಕೊಳ್ಳುತ್ತಾರೆಂಬುದಾಗಿ ನಾನು ಸರ್ಕಾರದವರನ್ನು ಕೇಳಬೇಕಾಗಿದೆ. ಮಾನ್ಯ ಹಣಕಾಸಿನ ಸಚಿವರು ಈ ವಿಷಯವನ್ನು ಹೇಳಬೇಕು. ಮಂಡ್ಯ ನಾಗಮಂಗಲ ರಸ್ತೆಯಲ್ಲಿ ಒಂದು ಸೇತುವೆ ಕೆಲಸ. ಅಲ್ಲಿಗೆ ಟೆಂಡರು ಹಾಕಿ ನಾಲ್ಕು ವರ್ಷಗಳಾದುವು. ಮಂಡ್ಯಕ್ಕೆ ಒಂದು ಮೈಲಿಯಲ್ಲಿ ಚಿಕ್ಕ ಮಂಡ್ಯ ಸುಮಾರು ನಾಲ್ಕು ವರ್ಷದಲ್ಲಿ ಹೊಸದಾಗಿ ಸೇತುವೆ ಷುರು ಮಾಡಿದ್ದಾರೆ. ಈ ಸೇತುವೆಯನ್ನು ನಿರ್ಮಿಸಲು ಸರ್ಕಾರದವರು ಬಹಳ ನಿಧಾನ ಮಾಡುತ್ತಿದ್ದಾರೆ. ಇದರಿಂದ ಸಕ್ಕರೆ ಕಾರ್ಖಾನೆಗೆ ಕಬ್ಬು ಸಾಗಿಸುವವರು ಬಳಸುದಾರಿಯಲ್ಲಿ ಸಂಚರಿಸಬೇಕಾಗಿದೆ. ಸರ್ಕಾರದವರು ಇದಕ್ಕಾಗಿ ಎರಡು ಲಕ್ಷ ರೂಪಾಯಿಗಳನ್ನೂ ರೈತರು ಎರಡು ಲಕ್ಷ ರೂಪಾಯಿಗಳನ್ನೂ ಒಟ್ಟಿನಲ್ಲಿ ನಾಲ್ಕು ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ. ರೈತರಿಗೆ ಅನುಕೂಲ ಇದುವರೆಗೂ ಒದಗಿಲ್ಲವೆಂದು ಹೇಳಿದರೆ ಏನು ಹೇಳೋಣ! ಕೇವಲ ನಾಲ್ಕು ಕುಂಟೆ ಜಮೀನನ್ನು ಅಕ್ವೈರುಮಾಡಿ ನಾಲ್ಕು ಲಕ್ಷ ರೂಪಾಯಿಗಳನ್ನು ಜನಗಳಿಗೆ ಉಳಿತಾಯ ಮಾಡಿಕೊಡುವಂತಹ ಒಂದು ಯೋಜನೆಯ ಕೆಲಸವನ್ನು ನಾಲ್ಕು ವರ್ಷಗಳಿಂದಲೂ ಈ ಸರ್ಕಾರ ಮಾಡಲಿಲ್ಲವೆಂದು ಹೇಳಿದರೆ ನಾನು ಏನು ಹೇಳಲಿ! ನನಗೆ ಬಹಳ ವ್ಯಸನವಾಗುತ್ತದೆ. ಸೇತುವೆ ಕೆಲಸ ಪೂರೈಸಿ ಸ್ವಲ್ಪ ಕೆಲಸ ಮಾತ್ರ ನಿಂತಿದೆ. ನಾನು ಸರ್ಕಾರವನ್ನು ಆಕ್ಷೇಪಣೆ ಮಾಡುವ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಸರ್ಕಾರದವರು ಇದನ್ನು ಪರಿಶೀಲನೆ ಮಾಡದೆ ಇಲ್ಲಿಯೇ ಕುಳಿತುಕೊಂಡು ಅವರು ಹೇಳಿದ ಕೆಲಸ ನಡೆಸಬೇಕೆಂದು ಹೇಳುವುದು ಸರಿಯಲ್ಲ. ಅವರೇ ಖುದ್ದಾಗಿ ಈ ಕೆಲಸ ನಡೆದಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು. ಇದರಿಂದಲೇ ತಮ್ಮ ಗುಂಪು ಬಲವಾಗಬೇಕು. ಆಯಾ ತಾಲ್ಲೂಕ್‌ನಲ್ಲಿ ಈ ರೀತಿ ತೊಂದರೆ ಪಡುತ್ತಿರುವವರು ಗ್ರೂಪ್ ಮಾಡಿಕೊಳ್ಳುವ ಪರಿಸ್ಥಿತಿಗೆ ಬಿಡಬಾರದು. ಇದನ್ನು ನಮ್ಮ ಮನೆಕೆಲಸವೆಂದು ತಿಳಿಯಬೇಕು. ಇದು ನಾಲ್ಕು ಲಕ್ಷ ರೂಪಾಯಿಗಳವರೆಗೂ ನಷ್ಟವಾಗಿರುವ ಕೆಲಸ. ಸಾವಿರಾರು ಜನರು ತಿರುಗಾಡುವ ಕೆಲಸ. ಎಷ್ಟು ಸಾರಿ ಹೇಳಿದರು ಬಂದು ಈ ಸೇತುವೆ ಕೆಲಸ ಜಾಗ್ರತೆಯಾಗಿ ಆಗಬೇಕೆಂದು ಕೇಳಿದ್ದರೂ ಸರ್ಕಾರದವರು ಆ ಕೆಲಸ ಮಾಡಿಸುವುದಕ್ಕೆ ಗೊತ್ತಿರಲಿಲ್ಲವೇ ಎಂದು ನಾನು ಕೇಳುತ್ತೇನೆ. ಸರ್ಕಾರದವರು ನ್ಯಾಯವಾದ ರೀತಿಯಲ್ಲಿ ನಡೆದುಕೊಂಡು ಅಧಿಕಾರವರ್ಗದವರು ಮನಸ್ಸು ಇಟ್ಟು ಕೆಲಸಮಾಡಬೇಕೆಂದು ಕೂಡಲೇ ಸೂಚನೆ ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನೀರಾವರಿಯ ಬಗ್ಗೆ ಒಂದು ವಿಷಯವನ್ನು ಹೇಳಬೇಕಾಗಿದೆ. ಕೆಲವು ಕಡೆ ಹಳ್ಳಿಗಾಡಿನಲ್ಲಿ ಕಬ್ಬಿನ ಏರಿಯಾಗಳಲ್ಲಿ ಒಂದೇ ತರಹ ವಾಟರ್‌ರೇಟ್ ಕಂಟ್ರಿಬ್ಯೂಷನ್ ಇದೆ. ಷಿಂಷಾ ನಾಲಾದಲ್ಲಿ ಆರು ತಿಂಗಳು ನೀರು ಕೊಡುತ್ತಾರೆ. ಹಸುರೆಲೆ ಗೊಬ್ಬರವನ್ನು ಬೆಳೆಯುವುದಕ್ಕೋಸ್ಕರ ಸರ್ಕಾರದಿಂದ ಸಾಕಷ್ಟು ಸಹಾಯ ದೊರಕಿಲ್ಲ. ಹದಿನೈದು ವರ್ಷಗಳಿಂದಲೂ ಒಂದೇ ತರಹ ವಾಟರ್ ರೇಟನ್ನು ಕೊಟ್ಟಿದ್ದಾರೆ. ಆದರೂ ಈಗ್ಗೆ ಈ ಷಿಂಷಾ ನಾಲಾ ಕೆಳಗೆ ೬ ತಿಂಗಳು ಬತ್ತದ ಬೆಳೆಗೆ ನೀರು ಕೊಡುತ್ತಾರೆ. ಹಸುರೆಲೆ ಬೆಳೆಯಲು ಮತ್ತು ಕಾರುರಾಗಿ ವಗೈರೆ ಬೆಳೆಯಲು ಆಗಾಗ್ಗೆ ಎಂದರೆ ೧೫ ದಿವಸಗಳಿಗೆ ಒಂದು ಸಾರಿ ನೀರು ಕೊಟ್ಟು ಸಹಾಯ ಮಾಡಬೇಕು. ಕಬ್ಬು ಬೆಳೆಯುವ ರೈತರುಗಳಿಗೆ ವರ್ಷವೂ ನೀರು ಕೊಡುತ್ತಾರೆ. ಅವರು ಕಾರುರಾಗಿ ಭತ್ತ ಕಡಲೆಕಾಯಿ ಎಲ್ಲವನ್ನೂ ಬೆಳೆಯುತ್ತಾರೆ. ವಿಷಯವನ್ನು ಸಂಬಂಧಪಟ್ಟ ಇಲಾಖೆಗೆ ಎಷ್ಟೋ ಸಾರಿ ಹೇಳಿಕೊಂಡಿದ್ದು ಸಹ ಆಗಿದೆ. ಆದರೂ ಏನೂ ಪ್ರಯೋಜನವಾಗಲಿಲ್ಲ. ಈ ವಿಚಾರವನ್ನು ಇಂಜಿನಿಯರಿಂಗ್ ಇಲಾಖೆಯವರು ಕೂಡಲೆ ಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತೇನೆ.

ಅವರು 120 ರೂಪಾಯಿಗಳಿಂದ 200 ರೂಪಾಯಿಗಳವರೆಗೆ ಕಾಂಟ್ರಿಬ್ಯೂಷನ್ ಕೊಟ್ಟು ಅವರಿಗೆ ಸರಿಯಾಗಿ ನೀರ ಕೊಡದೆ ಅವರು ಪದೇ ಪದೇ ಇಂಜಿನಿಯರಿಂಗ್ ಇಲಾಖೆಯವರ ಹತ್ತಿರ ಹೋಗಿ ನಮಗೆ ನೀರು ಕೊಡಿ, ನಾವು ಕಾಳು ಬೆಳೆಯುತ್ತೇವೆ ಎಂದು ಅವರನ್ನು ಕೇಳಬೇಕಾದರೆ ಇದು ಯಾವ ಲೆಕ್ಕಾಚಾರ? ಮದ್ದೂರು ಮುಂತಾದ ಸ್ಥಳಗಳಲ್ಲಿ 15 ದಿವಸಗಳಿಗೆ ಒಂದು ಸಾರಿಯಂತೆಯಾದರೂ ಅವರಿಗೆ ನೀರು ಕೊಡುತ್ತಿಲ್ಲ. ಸರ್ಕಾರದವರು ಕೂಡಲೇ ಇದನ್ನು ಪರಿಶೀಲನೆ ಮಾಡಬೇಕು. ಈ ವಿಚಾರ ಶ್ರೀಮಾನ್ ಹುಚ್ಚಮಾಸ್ತಿಗೌಡರಿಗೂ ಕೂಡ ಗೊತ್ತಿದೆ. ಅವರೂ ಸಹ ಸರ್ಕಾರಕ್ಕೆ ಈ ವಿಷಯವನ್ನು ತಿಳಿಸಬಹುದು; ಮತ್ತು ಹಸುರೆಲೆ ಗೊಬ್ಬರವನ್ನು ಬೆಳೆಯುವುದಕ್ಕೆ ರೈತರಿಗೆ ಸರ್ಕಾರದವರು ಸಹಾಯವನ್ನು ಮಾಡಬೇಕು.

ಇನ್ನು ವಿದ್ಯಾಭ್ಯಾಸದ ವಿಷಯದಲ್ಲಿ ಹೇಳುವುದಾದರೆ ವಿದ್ಯಾರ್ಥಿಗಳು ಮಿಡಲ್ ಸ್ಕೂಲ್ ವ್ಯಾಸಂಗವನ್ನು ಮುಗಿಸಿದಮೇಲೆ ಹೈಸ್ಕೂಲಿಗೆ ಸೇರುವುದಕ್ಕೆ ಪರದಾಡುವುದನ್ನು ನೋಡಿದರೆ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ಮಿಡಲ್ ಸ್ಕೂಲ್ ವ್ಯಾಸಂಗ ಮುಗಿದ ಮೇಲೆ ಹೈಸ್ಕೂಲಿಗೆ ಬರತಕ್ಕ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಎನ್ನತಕ್ಕ ಅಂಕಿ ಅಂಶಗಳನ್ನು ತೆಗೆದುಕೊಂಡು ಮುಂದೆ ಹೈಸ್ಕೂಲಿನಲ್ಲಿ ಅವರಿಗೆ ಎಷ್ಟು ಸೀಟುಗಳು ಬೇಕು ಎನ್ನುವುದನ್ನು ಡಿಪಾರ್ಟ್

ಮೆಂಟಿನವರು ನೋಡಿಕೊಂಡು ಹೈಸ್ಕೂಲಿಗೆ ಸೇರತಕ್ಕ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಈಗ ಯಾವ ಊರಿಗೆ ಆಗಲೀ ಸರ್ಕಾರದವರು ಹೈಸ್ಕೂಲನ್ನು ಕೊಡಬೇಕಾದರೆ ರೈತರೇ ಮುಂದೆ ಬಂದು ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದರೆ ಅದು ಕಷ್ಟ. ಶ್ರೀವರ್ಮಾ ವಿಶ್ವೇಶ್ವರಯ್ಯನವರ ನಾಲೆ ಇರುವ ಕಡೆ ಮತ್ತು ಕೈಗಾರಿಕೆಗಳು ಇರುವ ಕಡೆ ಜನಗಳು ಸ್ವಲ್ಪ ಅನುಕೂಲವಾಗಿರುತ್ತಾರೆ. ಅವರು ಹೈಸ್ಕೂಲು ಕೊಡುವುದಕ್ಕೆ ಕಟ್ಟಡವನ್ನು ಕಟ್ಟಿಸಿ ಕೊಡುತ್ತೇವೆಂದು ಮುಂದೆ ಬರುತ್ತಾರೆ. ಬೆಂಗಳೂರು ಸಿಟಿಯಲ್ಲಿರತಕ್ಕಂಥ ದೊಡ್ಡ ಐಶ್ವರ್ಯವಂತರು ಮುಂದೆ ಬರುತ್ತಾರೆ. ಅದರೆ ದುಡ್ಡಿನ ಉತ್ಪತ್ತಿ ಇಲ್ಲದೆ ಇರುವ ಹಳ್ಳಿಗಳ ಕಡೆ ರೈತರೇ ಮುಂದೆ ಬಂದು ಹೈಸ್ಕೂಲು ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಹೇಳಿದರೆ ಅದು ಅವರಿಗೆ ಬಹಳ ಕಷ್ಟವಾಗುತ್ತದೆ. ಮಂಡ್ಯಜಿಲ್ಲೆಯಲ್ಲಿರುವ ಬಸರಾಳು ಗ್ರಾಮಕ್ಕೆ ಒಂದು ಸರ್ಕಾರಿ ಹೈಸ್ಕೂಲನ್ನು ಕೊಡಬೇಕು. ಬಸರಾಳಿನಲ್ಲಿರತಕ್ಕ ರೈತರು ತುಂಬಾ ಬಡವರು. ಅವರು ಹೈಸ್ಕೂಲು ಕಟ್ಟಡಕ್ಕೆ ಯಾವ ವಿಧವಾದ ಹಣ ಸಹಾಯವನ್ನೂ ಮಾಡುವುದಕ್ಕೆ ಅವರಿಗೆ ಶಕ್ತಿಯಿಲ್ಲ. ಆದ್ದರಿಂದ ಸರ್ಕಾರದವರೇ ಬಸರಾಳಿನಲ್ಲಿ ಒಂದು ಹೈಸ್ಕೂಲು ಕಟ್ಟಡವನ್ನು ಕಟ್ಟಿಸಿ ಅಲ್ಲಿಗೆ ಒಂದು ಹೈಸ್ಕೂಲನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆಮೇಲೆ ಮಂಡ್ಯಕ್ಕೆ ಒಂದು ಇಂಜಿನಿಯರಿಂಗ್ ಕಾಲೇಜನ್ನು ಕೊಡಬೇಕು. ಅಲ್ಲಿ ಇಂಜಿನಿಯರಿಂಗ್ ಕಾಲೇಜಿಗೋಸ್ಕರವಾಗಿ ಬಹಳ ದುಡ್ಡನ್ನು ವಸೂಲು ಮಾಡಿದರು. ಅದನ್ನು ಏನು ಮಾಡಿದರೋ ಅದು ನನಗೆ ಗೊತ್ತಿಲ್ಲ.

ಪ್ರೈಮರಿ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಬೇಕೆಂದು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆಂದು ಕಾಣುತ್ತದೆ. ಒಂದು ವೇಳೆ ಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಿದ್ದೇ ಆದರೆ ಅವರು ಆಯಾ ಸ್ಥಳದ ಪ್ರಾಥಮಿಕ ಶಾಲೆಯ ಉಪಾಧ್ಯಾಯರ ದಾಕ್ಷಿಣ್ಯಕ್ಕೆ ಒಳಗಾಗಿ ಹತ್ತಾರು ಓಟಿಗೋಸ್ಕರ ತಲೆಬಾಗಬೇಕಾಗುತ್ತದೆ. ತಾಲ್ಲೂಕು ಬೋರ್ಡುಗಳು ಪ್ರಾಥಮಿಕ ಶಾಲೆಯ ಆಡಳಿತವನ್ನು ಸರಿಯಾಗಿ ನಡೆಸುವುದಿಲ್ಲ. ಆದ್ದರಿಂದ ಅವುಗಳನ್ನು ತಾಲ್ಲೂಕು ಬೋರ್ಡಿಗೆ ವಹಿಸುವುದು ಅಷ್ಟು ಸೂಕ್ತವಲ್ಲ.

ಇತ್ತೀಚೆಗೆ ಈಗ ಎರಡು ತಿಂಗಳ ಈಚೆಗೆ ಜಿಲ್ಲಾಮಳೆ, ತಾಲ್ಲೂಕಾಮಳೆ ಒಳ್ಳೊಳ್ಳೆಯ ಅಧಿಕಾರಿಗಳನ್ನು ಸರ್ಕಾರದವರು ಬದಲಾಯಿಸಿದ್ದಾರೆ ಇದನ್ನು. ಮುಖಂಡರು ಪರ್ಯಾಲೋಚನೆ ಮಾಡಬೇಕು. ಅನೇಕ ಅನ್ಯಾಯಗಳು ನಡೆಯುತ್ತಿವೆ. ನಮ್ಮ ಕಡೆ ಶ್ರೀ ಹುಚ್ಚಮಾಸ್ತಿಗೌಡರು ಮುಂತಾದ ಅನೇಕ ಜನ ಕಾಂಗ್ರೆಸ್ ಮುಖಂಡರು ಸಂಚಾರ ಮಾಡುತ್ತಾರೆ. ಅವರಿಗೂ ಈ ವಿಷಯ ಗೊತ್ತಿದೆ. ಅಧಿಕಾರಿಗಳನ್ನು ಏತಕ್ಕೆ ಬದಲಾವಣೆ ಮಾಡಬೇಕು ? ನಾವೇನು ಅವರಿಂದ ಓಟು ತೆಗೆದುಕೊಳ್ಳಬೇಕಾಗಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ನನ್ನ ಒಬ್ಬ ಮಗ ತಾಲ್ಲೂಕು ಬೋರ್ಡಿಗೆ ಮೆಂಬರುಗಳಾಗಿ ಆರಿಸಿ ಬಂದಿದ್ದಾರೆ. ಅವರೇನು ಅಧಿಕಾರಿಗಳಿಂದ ವೋಟು ತೆಗೆದುಕೊಂಡುಬಂದರೆ ? ಜನಗಳ ಪ್ರೀತಿ ಮತ್ತು ವಿಶ್ವಾಸವನ್ನು ಗಳಿಸಿದ್ದರು. ಅದಕ್ಕೋಸ್ಕರ ಅವರು ಚುನಾಯಿತರಾಗಿ ಬಂದರು. ಆ ಎಲೆಕ್ಷನ್ ನಡೆಯುವಾಗ ನಾನು ಸಹ ಯಾವ ಸಹಾಯವನ್ನೂ ಮಾಡಲಿಲ್ಲ. ನಾನು ಆಸ್ಪತ್ರೆಯಲ್ಲಿ ಇದ್ದೆ. ಈ ರೀತಿ ಮಾಡತಕ್ಕದ್ದು ಸರಿಯಿಲ್ಲ. ನಾನೂ ಸಹ ಕಾಂಗ್ರೆಸ್ಸಿನಲ್ಲಿದ್ದುಕೊಂಡು ಅನೇಕ ವರ್ಷಗಳು ದುಡಿದಿದ್ದೇನೆ. ಅಲ್ಲಿ ನಡೆಯತಕ್ಕಂಥ ಅನೇಕ ವಿಚಾರಗಳು ಗೊತ್ತಿವೆ. ಮಹಾತ್ಮ ಗಾಂಧೀಜಿಯವರ ಹೆಸರಿನ ಮೇಲೆ ಕಾಂಗ್ರೆಸ್ಸಿನವರು ಅನ್ಯಾಯ ಮಾಡಿದ್ದಾರೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಯಾವ ಡಿಸ್ಟ್ರಿಕ್ಟಿನಲ್ಲೇ ಆಗಲಿ, ಸತ್ಯದಿಂದ, ದಕ್ಷತೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳನ್ನು ಇಟ್ಟುಕೊಂಡು ಸರಿಯಾದ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಪ್ರಾರ್ಥನೆಮಾಡಿ, ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ೧೯೬೨-೬೩ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ಪುಷ್ಟೀಕರಿಸುತ್ತಾ ನಾನು ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಆಯವ್ಯಯ ಅಂದಾಜನ್ನು ನೋಡಿದರೆ ಸುಮಾರು 322 ಲಕ್ಷ ರೂಪಾಯಿಗಳ ಕೊರತೆ ಎದ್ದು ಕಾಣುತ್ತದೆ. ಈಗಾಗಲೇ ಮಾತನಾಡಿದ ಅನೇಕ ಮಾನ್ಯ ಸದಸ್ಯರು ಈ ಒಂದು ಕೊರತೆಯನ್ನು ಹೇಗೆ ತುಂಬುವುದು, ಎಲ್ಲಿಂದ ಹಣವನ್ನು ಒದಗಿಸುವುದು ಎಂಬ ಎಚ್ಚರಿಕೆಯನ್ನು ಕೂಡ ವ್ಯಕ್ತಪಡಿಸಿದರು. ಈ ರೀತಿ ಕೊರತೆಯನ್ನು ತೋರಿಸಿರುವುದು ಸರಿಯಾದ್ದಲ್ಲ ಎಂದು ಕೂಡ ಹೇಳಿದರು. ನನಗೆ ಜ್ಞಾಪಕವಿರುವ ಹಾಗೆ ಒಬ್ಬ ಎಕಾನಮಿಸ್ಟ್ ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ. "Deficit budgeting is a sign of progress." ಎಂದು ಹೇಳಿದ್ದಾರೆ. ಯಾವ ಒಂದು ಸಂಸ್ಥಾನದಲ್ಲೇ ಆಗಲಿ 322 ಲಕ್ಷ ರೂಪಾಯಿಗಳು ಕೊರತೆ ಉಂಟಾಗಿದ್ದರೆ ಅದನ್ನು ಒಂದೇ ಏಟಿನಲ್ಲಿ ಕಡಮೆಮಾಡಬಹುದು. ಈಗ ನಮ್ಮ ದೇಶದಲ್ಲಿ ಖೋತಾಬಿದ್ದಿರತಕ್ಕ 322 ಲಕ್ಷ ರೂಪಾಯಿಗಳನ್ನು ಒಂದೇ ಏಟಿನಲ್ಲಿ ಕಡಮೆ ಮಾಡಬಹುದು. ಹೇಗೆಂದರೆ ಈಗ ನಮ್ಮ ದೇಶದಲ್ಲಿ ಯಾವ ಒಂದು ಯೋಜನೆಗಳನ್ನು ಕೈಗೊಂಡಿದ್ದಾರೆಯೋ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ನಮ್ಮಲ್ಲಿ ಹಣವಿಲ್ಲ ಎಂದು ಹೇಳಿದರೆ ಒಂದೇ ನಿಮಿಷದಲ್ಲಿ ಸರ್‌ಪ್ಲಸ್ ಬಡ್ಜೆಟ್ ಆಗುತ್ತದೆ. ಅದು ದೊಡ್ಡ ವಿಷಯವಲ್ಲ. ನಾವು ಇವೊತ್ತಿನ ದಿವಸ ದೇಶವನ್ನು ಕಟ್ಟಬೇಕು, ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ವ್ಯಯ ಮಾಡಿರತಕ್ಕ ಹಣಕಾಸಿನ ವಿವರವನ್ನು ನೋಡುವುದಾದರೆ, ನಮ್ಮ ಸಂಸ್ಥಾನದಲ್ಲಿ Irrigation and Power ಗೋಸ್ಕರವಾಗಿ ೫೪.೯೮ ಕೋಟಿ ರೂಪಾಯಿಗಳನ್ನೂ ಸೋಷಿಯಲ್ ಸರ್ವಿಸ್‌ಗೋಸ್ಕರವಾಗಿ, ೨೯.೬೩ ಕೋಟಿ ರೂಪಾಯಿಗಳನ್ನೂ ವ್ಯವಸಾಯಕ್ಕೋಸ್ಕರವಾಗಿ ೧೯.೨೫ ಕೋಟಿ ರೂಪಾಯಿಗಳನ್ನೂ ರಸ್ತೆಗಳಿಗೋಸ್ಕರವಾಗಿ ೧೩.೭೫ ಕೋಟಿ ರೂಪಾಯಿಗಳನ್ನೂ, ಕಮ್ಯುನಿಕೇಷನ್ ಮತ್ತು ಡೆವಲಪ್‌ಮೆಂಟಿಗೋಸ್ಕರವಾಗಿ ೧೦.೧೮ ಕೋಟಿ ರೂಪಾಯಿಗಳನ್ನೂ ಖರ್ಚು ಮಾಡಿದ್ದಾರೆ. ಈಗಾಗಲೇ ಮೂರನೇ ಪಂಚವಾರ್ಷಿಕಯೋಜನೆಗಾಗಿ 250 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರದವರು ಖರ್ಚು ಮಾಡುವವರಾಗಿದ್ದಾರೆ.

(ಶ್ರೀ ಎಂ. ಸಿ. ಬಸಪ್ಪ)

ಮೂರನೇ ಪಂಚವಾರ್ಷಿಕ ಯೋಜನೆಗೆ ಸುಮಾರು 42 ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚುಮಾಡಬೇಕೆಂದು ನಿಗದಿ ಮಾಡಿಕೊಂಡಿದ್ದಾರೆ. ಹಣ ಎಲ್ಲಿದೆ? ಏನು ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡಬೇಕಾದ್ದು ಬಹಳ ಗುರುತರವಾದ ಜವಾಬ್ದಾರಿ. ಅದಕ್ಕೋಸ್ಕರವೇ ಅದನ್ನು ಹಣಕಾಸಿನ ಮಂತ್ರಿಗಳು ಮೊದಲನೆಯ ಪುಟದಲ್ಲೇ "ಮಾನ್ಯ ಸಭಾ ಸದಸ್ಯರು ನಮ್ಮ ತೊಂದರೆಗಳನ್ನು ಸಹಾನುಭೂತಿಯಿಂದ ತಿಳಿದುಕೊಳ್ಳುವರೆಂದೂ ನಮ್ಮ ಹಣಕಾಸಿನ ಸ್ಥಿತಿಯನ್ನು ಸಮತೋಲನ ಗೊಳಿಸಲು ಅವಶ್ಯವಾದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ತಮ್ಮ ಅಮೂಲ್ಯ ಸಲಹೆಗಳನ್ನು ನೀಡುವರೆಂದೂ ನಾನು ಖಚಿತವಾಗಿ ನಂಬಿದ್ದೇನೆ" ಎಂದು ಹೇಳಿ ಬಹಳ ಕಳಕಳಿಯಿಂದ ನಿವೇದನೆ ಮಾಡಿಕೊಂಡಿದ್ದಾರೆ. ನಮ್ಮ ಜವಾಬ್ದಾರಿ ಏನು? ಸರ್ಕಾರದವರಿಗೆ ಈ ವಿಷಯದಲ್ಲಿ ಏನು ಅಭಿಪ್ರಾಯವಿದೆ ಎಂಬುದನ್ನು ಕೂಡ ನಾವು ಆಲೋಚನೆ ಮಾಡಬೇಕು. ನಮ್ಮ ದೇಶದಲ್ಲಿ ಹಣ ಖರ್ಚಾಗುವಾಗ, ಹಣ ಎಲ್ಲಿಂದ ಬರುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ತೆರಿಗೆ ರೂಪದಲ್ಲಿ ಮಾತ್ರ ಬರುತ್ತದೆ. ಅಥವಾ ಸಂಪನ್ಮೂಲ ಹೆಚ್ಚಿಸತಕ್ಕ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ ಕೈಕೊಳ್ಳಬೇಕು. ಈ ರೀತಿ ಹಣದ ಉತ್ಪನ್ನವನ್ನು ನಾವು ಮಾಡಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ನ್ಯಾಯವಾದ ರೀತಿಯಲ್ಲಿ ಹಣ ಉಪಯೋಗವಾಗದೇ, ದುರುಪಯೋಗವಾಗುತ್ತದೆ. ಈ ದಿವಸ ನಮ್ಮ ಮುಂದೆ ಇರತಕ್ಕ ಆಡಿಟ್ ರಿಪೋರ್ಟ್‌ನಲ್ಲಿ ಸ್ಪಷ್ಟವಾಗಿ ಅವರು ಹೇಳಿದ್ದಾರೆ. ಈ ರಿಪೋರ್ಟಿನ ಬಗ್ಗೆ ಈ ಸಭೆಯಲ್ಲಿ ಜವಾಬು ಕೊಡಬೇಕಾದರೆ ಸರ್ಕಾರದವರಿಗೂ ಕಷ್ಟವಾಗುತ್ತದೆ ಎಂದು ನನಗೆ ಅನಿಸುತ್ತದೆ. ತಪ್ಪಿಸಬಹುದಾಗಿದ್ದಂಥ ವೆಚ್ಚ ಯಾವುದು ಎಂಬುದನ್ನೂ ದುರ್ವ್ಯಯವಾಗಿರುವ ಹಣ ಯಾವುದು ಎಂಬುನ್ನೂ ಅವರು ತೋರಿಸಿದ್ದಾರೆ. ಅದಕ್ಕೆ ಸರ್ಕಾರದವರು ಜವಾಬು ಕೊಡಬೇಕಾಗುತ್ತದೆ. ಈ ಆಡಿಟ್ ರಿಪೋರ್ಟನ್ನು ಪರಿಶೀಲನೆ ಮಾಡುವುದಾದರೆ ಕೋಟಿ ಗಟ್ಟಲೆ ರೂಪಾಯಿ ಖರ್ಚುಮಾಡತಕ್ಕ ಸಂದರ್ಭದಲ್ಲಿ ಎಷ್ಟೋ ವೇಳೆ ಸ್ವಲ್ಪ ಭಾಗ ಪೋಲಾಗುತ್ತದೆ. ಆದರೂ ಸರ್ಕಾರದ ಜವಾಬ್ದಾರಿ ಎಷ್ಟಿದೆ ಎಂದರೆ ಒಂದು ಕಾಸೂ ಕೂಡ ಪೋಲಾಗದ ರೀತಿಯಲ್ಲಿ ಮಾಡಬೇಕಾದ್ದು ಅವರ ಕರ್ತವ್ಯ. ಸಮಜಾಯಿಷಿ ಕೊಡುವಾಗ ಸರಿಯಾದ ಸಮಜಾಯಿಷಿ ಕೊಡುತ್ತದೆ ಎಂದು ನಾನು ನಂಬಿದ್ದೇನೆ. ಎರಡನೆಯದಾಗಿ ಆಡಳಿತದಲ್ಲೂ ಕೂಡ ಸರಿಯಾದ ಬಿಗಿ ಇಲ್ಲ ಎಂಬ ಅಭಿಪ್ರಾಯವನ್ನು ಅನೇಕ ಜನ ಸದಸ್ಯರು ವ್ಯಕ್ತ ಮಾಡಿದ್ದಾರೆ. ಇದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ಎಂದು ಆಲೋಚನೆ ಮಾಡುವುದಾದರೆ ಶ್ರೀವಾರ್ ಎ. ಡಿ. ಗೋರ್ವಾಲಾರವರು ಒಂದು ವರದಿಯನ್ನು ಕೊಟ್ಟಿದ್ದಾರೆ. ನಾಲ್ಕೈದು ವರ್ಷಗಳ ಹಿಂದೆ ಆಡಳಿತದ ವಿಷಯದಲ್ಲಿ ಅಭಿಪ್ರಾಯವೇನು ಎಂದು ಅವರ ಅಭಿಪ್ರಾಯವನ್ನು ಕೇಳಿದ್ದರು. ಅವರು ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಅದನ್ನು ಕೂಡ ಸರ್ಕಾರ ಜಾರಿಗೆ ತರಬೇಕೆಂಬ ಒಂದು ಅಭಿಪ್ರಾಯವನ್ನು ಬಹುಶಃ ಯೋಚನೆ ಮಾಡಬೇಕಾಗಿತ್ತು ಎಂದು ನಾನು ಅಂದುಕೊಂಡಿದ್ದೇನೆ. ಅದೂ ಅಲ್ಲದೆ ನಮ್ಮ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗಿ ನಡೆಯಬೇಕಾದರೆ ಹಣಕಾಸಿನ ಉತ್ಪನ್ನ ಮಾಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮ ಸರ್ಕಾರದ ಮೇಲಿದೆ. ಆದ್ದರಿಂದ ಅದಕ್ಕೂ ಕೂಡ ಸಲಹೆಗಳನ್ನು ಕೇಳತಕ್ಕದ್ದು ಬಹಳ ಅಗತ್ಯ ಎಂದು ಶ್ರೀವಾರ್ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿದ್ದರು. ಅವರು 412 ಸಲಹೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಹಣಕಾಸಿನ ಮಂತ್ರಿಗಳು ಅದು ಇನ್ನು ಪ್ರಿಂಟ್ ಆಗಿಲ್ಲ, ಆದ್ದರಿಂದ ಮಾನ್ಯ ಸದಸ್ಯರ ಕೈಸೇರಿಲ್ಲ ಎಂದು ಹೇಳಿದರು. ಹಿಂದೆ ಹಣಕಾಸಿನ ಮಂತ್ರಿಗಳಾಗಿದ್ದವರು ಅವರ ಭಾಷಣದಲ್ಲಿ ಸಂಪನ್ಮೂಲಗಳು ಹಾಗೂ ಮಿತವ್ಯಯವನ್ನು ಕಂಡು ಹಿಡಿಯುವ ಸಲುವಾಗಿ ಸಮಿತಿಯವರು ಮಾಡಿರುವ ಶಿಫಾರಸುಗಳನ್ನು ಜಾರಿಗೆ ತರುವುದರ ಜೊತೆಗೆ ಇನ್ನೂ ಎಲ್ಲೆಲ್ಲಿ ಲೋಪದೋಷಗಳಿವೆಯೋ ಅವನ್ನು ಸರಿಪಡಿಸಲು ಸಭೆಯ ಸದಸ್ಯರೂ ಸಹಕರಿಸಬೇಕೆಂದು ಹೇಳಿದ್ದಾರೆ. ಯಾವುದರಲ್ಲಿ ಮಿತವ್ಯಯ ಮಾಡಬೇಕು ಯಾವ ಕಡೆ ಹೆಚ್ಚು ಹಣ ಹಾಕಬೇಕು ಎನ್ನುವ ವಿಚಾರವನ್ನು ಕೂಲಂಕಷವಾಗಿ ವಿಚಾರಮಾಡಬೇಕಾಗಿದೆ. ಬಹುಶಃ ಈಗಿರತಕ್ಕ 322 ಲಕ್ಷ ರೂಪಾಯಿಗಳ ಖೋತಾ ಬಡ್ಜೆಟ್ಟನ್ನೂ ಯಾವ ತೆರಿಗೆಯನ್ನೂ ವಿಧಿಸದೆ ಸರಿತೂಗಿಸುವುದಕ್ಕೆ ಪ್ರಯತ್ನ ಪಡುತ್ತಾರೆ ಎಂದು ನಂಬಿದ್ದೇನೆ.

Sri S. M. KRISHNA (Maddur).—Point of information, Sir ಶ್ರೀವಾರ್ ಎ. ಡಿ. ಗೋರ್ವಾಲಾ ಅವರು ಶಿಫಾರಸ್ಸು ಕೊಟ್ಟಿದ್ದು ಯಾವಾಗ?

ಶ್ರೀ ಎಂ. ಸಿ. ಬಸಪ್ಪ.—1958ರಲ್ಲಿ ಎಂದು ಕಾಣುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಅಲ್ಲಿಂದ ಈಚೆಗೆ ಅವರ ಶಿಫಾರಸಿನಲ್ಲಿ ಎಷ್ಟನ್ನು ಸರ್ಕಾರ ಕಾರ್ಯಗತ ಮಾಡಿದೆ?

Sri B. D. JATTI.—Most of the recommendations made by Sri Gorwalla which would have served our purposes have been implemented.

Sri S. M. KRISHNA.—Which served your purpose?

Sri B. D. JATTI.—That is, the purpose of a Government, not of an individual like me or yourself.

ಶ್ರೀ ಎಂ. ಸಿ. ಬಸಪ್ಪ.—ಈ ಸಂಪನ್ಮೂಲ ಸಮಿತಿಯವರು ಕೊಟ್ಟಿರತಕ್ಕ ಒಂದು ಸಲಹೆಯನ್ನು ನಾನು ತಮ್ಮ ಮುಂದೆ ಇಡುತ್ತೇನೆ. ಈಗ ನಾವು ದೇಶದಲ್ಲಿ ದೇಶದ ಸಂಪತ್ತನ್ನು ಹೆಚ್ಚಿಸಬೇಕೆಂದು ಅನೇಕ ಭಾರಿ ಯೋಜನೆಗಳನ್ನು ಕೈಕೊಂಡಿದ್ದೇವೆ. ಶರಾವತಿ ವ್ಯಾಲಿ, ತುಂಗಭದ್ರಾ ಪ್ರಾಜೆಕ್ಟು ಈ ಯೋಜನೆಗಳಲ್ಲಿ ಒಂದು ಲೋಪ ಕಾಣುತ್ತಿದೆ. ಬಹುಶಃ ಅದ ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸುತ್ತದೆ ಅನ್ನತಕ್ಕದ್ದು ಅಷ್ಟೇ ಅಲ್ಲ ಆದರೆ ನಾವು ನಿರೀಕ್ಷಣೆ ಮಾಡಿದ ವೇಳೆಯಲ್ಲಿ ಸಂಪತ್ತನ್ನು ಹೆಚ್ಚು ಮಾಡುವುದಕ್ಕೆ ಆಗುತ್ತದೆಯೋ ಎಂಬ ಪ್ರಶ್ನೆ ನಮ್ಮ ಮುಂದೆ ಇದೆ. ದೇಶದ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ಮುಗ್ಗಟ್ಟನ್ನು ತಪ್ಪಿಸಿ, ನಮ್ಮ ಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕೆ ಆಗುತ್ತದೆಯೇ ಎಂಬ ಪ್ರಶ್ನೆ ಕೇಳುವುದಾದರೆ, ನನ್ನ ಅನುಭವದಲ್ಲಿರುವುದನ್ನು ಹೇಳಬೇಕೆಂದರೆ ನಿರೀಕ್ಷಿಸಿದ ವೇಳೆಯಲ್ಲಿ ಬಹುಶಃ ಈ ಪ್ರಾಜೆಕ್ಟುಗಳನ್ನು ಮುಗಿಸುವುದಕ್ಕೆ ನಮ್ಮಿಂದ ಆಗುವಂತೆ ಇಲ್ಲ. ಇದಕ್ಕೆ ಅನೇಕ ಕಾರಣಗಳು ಇವೆ. ನಮ್ಮ ನಿರೀಕ್ಷಣೆಯಲ್ಲಿ ಸ್ವಲ್ಪ ವೇಳೆ ಜಾಸ್ತಿ ಆಗಬಹುದೇ ಹೊರತು ಇಂದಲ್ಲ ನಾಳೆ ಕಾರ್ಯಗತ

ವಾಗಿಯೇ ಆಗುತ್ತದೆ. ದೇಶದ ಸಂಪತ್ತು ಜಾಸ್ತಿಯಾಗುತ್ತದೆ ಎಂದು ಹೇಳಬಹುದು. ಈ ಮಧ್ಯೆ ಸರ್ಕಾರದವರು ಈ ಒಂದು ಕೊರತೆಯನ್ನು ನೀಗಿಸಲು ಮತ್ತು ದೇಶದ ಸಂಪತನ್ನು ಜಾಸ್ತಿ ಮಾಡಬೇಕೆಂಬ ತಕ್ಕ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸಣ್ಣ ನೀರಾವರೀ ಯೋಜನೆಗಳು ಯಾವುವು ಇವೆ ಅವನ್ನು ಕಾರ್ಯಗತಮಾಡಬೇಕು. ಈಗಾಗಲೇ ಕೆಲವನ್ನು ತೆಗೆದುಕೊಂಡು ಮುಗಿಸಿದ್ದಾರೆ. ನನಗೆ ಗೊತ್ತಿರುವ ಹಾಗೆ ಅನೇಕ ಕಡೆ ನೀರು ಸರಬರಾಯಿ ಕೂಡ ಮಾಡಿದ್ದಾರೆ. ಅದರಿಂದ ರೈತರು ಫಸಲು ಕೂಡ ಇವತ್ತು ಬೆಳೆಯುತ್ತಾ ಇದ್ದಾರೆ. ಅದರಿಂದ ಅನುಕೂಲವಾಗಿದೆ ಎಂದು ಅಭಿಪ್ರಾಯ ಪಡುತ್ತೇನೆ. ಈ ವರ್ಷದ ಬಜೆಟ್‌ನಲ್ಲಿ ಸಣ್ಣನೀರಾವರಿ ಯೋಜನೆಗೆ ನನಗೆ ತಿಳಿದ ಮಟ್ಟಿಗೆ ಕಳೆದ ಸಾಲಿಗಿಂತಲೂ ಕಡಮೆ ಹಣವನ್ನು ಕೊಟ್ಟಿದ್ದಾರೆ. ಪಬ್ಲಿಕ್‌ವರ್ಕ್ಸ್ ಡಿಮ್ಯಾಂಡ್ ಮೇಲೆ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಅವಕಾಶ ಸಿಕ್ಕಿದರೆ ಆ ಅಂಕಿ ಅಂಶಗಳನ್ನು ಅವರ ಗಮನಕ್ಕೆ ತರಬೇಕೆಂದು ಅಭಿಪ್ರಾಯ ಪಡುತ್ತೇನೆ. ಇಷ್ಟು ಹೇಳಬಹುದು. ಈ ಸಾಲಿನಲ್ಲಿ ಈ ಬಾಬಿಗೆ ಒದಗಿಸಿರುವ ಹಣ ಕಡಮೆಯಾಗಿದೆ. ಈಗಾಗಲೇ ತಿಳಿದಿರುವಂತೆ ಇಲಾಖೆ ಅಧಿಕಾರಿಗಳೂ ಕೂಡ ತಾವು ಬಜೆಟ್‌ನಲ್ಲಿ ಸೇರಿಸದೇ ಇರತಕ್ಕ ಕೆಲಸಗಳನ್ನು ತೆಗೆದುಕೊಳ್ಳಬಾರದು. ಕಳೆದ ಸಾಲಿನ ಆಡಿಟ್ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಸುಮಾರು ಎರಡು ಕೋಟಿ ರೂಪಾಯಿಗಳ ಕೆಲಸವನ್ನು ಬಜೆಟ್‌ನಲ್ಲಿ ಸೇರದೇ ಇರುವುದನ್ನು-ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಮಾಡಿದ್ದಾರೆ, ಇದರಿಂದ ಕೂಡ ಸ್ವಲ್ಪ ತೊಂದರೆ ಆಗಿದೆ ಎಂದು ರಿಪೋರ್ಟ್‌ನಲ್ಲಿ ತಿಳಿಸಿದ್ದಾರೆ. ಈ ವರ್ಷ ಸಣ್ಣ ನೀರಾವರಿ ಯೋಜನೆಗೆ ಪ್ರೋತ್ಸಾಹ ಕಡಮೆ ಆದ ಹಾಗೆ ಕಾಣುತ್ತದೆ. ಸುಂಕಹಾಕಬೇಡಿ, ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಸೌಕರ್ಯ ಕೊಡದೇ, ನಮ್ಮ ಉತ್ಪನ್ನವನ್ನು ಜಾಸ್ತಿ ಮಾಡದೇ ನಮ್ಮ ಸುಂಕ ಹೊರಿಸಬೇಡಿ ಎಂದು ಹೇಳುವುದಕ್ಕೆ ಹಕ್ಕು ಇದೆ. ಈ ದಿವಸ ಸರ್ಕಾರ ನಡೆಯಬೇಕಾದರೆ ಸುಂಕ ಹಾಕದೆ, ತೆರಿಗೆ ಹಾಕದೆ, ದುಡ್ಡು ವಸೂಲು ಮಾಡದೇ ವಿಧಿ ಇಲ್ಲ. ವರಮಾನವಿಲ್ಲದೆ ತೆರಿಗೆ ಜಾಸ್ತಿ ಕೊಡಿ ಎಂದರೆ ಯಾರಿಗೇ ಆದರೂ ಸ್ವಲ್ಪ ಕಷ್ಟವಾಗುತ್ತದೆ. ಅದು ಸ್ವಾಭಾವಿಕ ; ನಾವಾದರೂ ಕೂಡ ವಿರೋಧ ಮಾಡುತ್ತೇವೆ. ಎಂದ ಮೇಲೆ ಉತ್ಪನ್ನವನ್ನು ಜಾಸ್ತಿ ಮಾಡಲು ಸೌಕರ್ಯ ಮಾಡಿಕೊಡಬೇಕು, ತೆರಿಗೆಯನ್ನು ಕೂಡ ಜಾಸ್ತಿ ಕೊಡಿ ಎಂದು ಹೇಳಬೇಕು. ಬೆಟರ್‌ಮೆಂಟ್ ಲೆವಿ ಆಕ್ಟ್ ಅಂತ ಹೇಳಿ ಒಂದು ಆಕ್ಟ್ ಪಾಸ್ ಮಾಡಿದ್ದೇವೆ. ಈ ದಿವಸ ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಅನುಸರಿಸುವ ಧೋರಣೆಗೂ ಈ ಬೆಟರ್‌ಮೆಂಟ್‌ಲೆವಿ ಆಕ್ಟ್‌ಗೂ ಹೋಲಿಸುವುದಾದರೆ ಒಂದಕ್ಕೊಂದಕ್ಕೆ ಹೊಂದಾಣಿಕೆಯಾಗಿಲ್ಲ. ಆಕ್ಟ್‌ನಲ್ಲಿ ಇರುವ ಪ್ರಕಾರ ಯಾವುದಾದರೂ ಕಾಂಗಾರಿ ಅವಶ್ಯಕವಾಗಿದ್ದ ಪಕ್ಷದಲ್ಲಿ ಅದನ್ನು ಸರ್ಕಾರದವರು ಮಾಡಿ ಅದಕ್ಕೆ ತಗಲತಕ್ಕ ಖರ್ಚನ್ನು ಅಚ್ಚುಕಟ್ಟುದಾರರಿಂದ ವಸೂಲು ಮಾಡಬಹುದು ಎಂದು ಹೇಳಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ 20-25 ಮೇಜರ್ ಕೆರೆಗಳು ಇವೆ. 8 ವರ್ಷಗಳ ಕೆಳಗೆ ಗಂಗವಾಡಿ ಕೆರೆ ಬ್ರೀಚ್ ಆಗಿತ್ತು. ಮೊನ್ನೆ ಚೀಫ್‌ಇಂಜಿನಿಯರು ಬಂದಿದ್ದಾಗ ಬ್ರೀಚ್ ಆಗಿರತಕ್ಕ ಕೆರೆಗಳನ್ನು ರಿಪೇರಿ ಮಾಡಲು ಫಸ್ಟ್ ಪ್ರಿಫರೆನ್ಸ್ ಕೊಡಬೇಕೆಂದು ಅಲ್ಲಿನ ಅಧಿಕಾರಿಗಳಿಗೆ ಹೇಳಿದರು. ಇತ್ತೀಚೆಗೆ ನೋಡಿದ್ದರಲ್ಲಿ ಅದು ಬಜೆಟ್‌ನಲ್ಲಿ ಸೇರಿಲ್ಲ. ಆದ್ದರಿಂದ ತೆಗೆದುಕೊಳ್ಳಲೇಬಾರದು ಎಂದು ಇನ್ಸ್ಟ್ರಕ್ಷನ್ ಕೊಟ್ಟಿದ್ದಾರೆ ಎಂದು ತಿಳಿದು ಬಂತು. ಇದು ಒಂದಕ್ಕೊಂದಕ್ಕೆ ವ್ಯತ್ಯಾಸವಾಗುತ್ತಿದೆ. ಇದು ಒಂದಕ್ಕೊಂದು ವಿರೋಧವಾಗಿದೆ. ನಮ್ಮ ಕೆರೆಕಾಲುವೆಗಳನ್ನು maintain ಮಾಡಲು ನೀವೇ ತೆಗೆದುಕೊಳ್ಳಿ ಎಂದು ನಾವು ಕೇಳುತ್ತಿದ್ದೇವೆ. ರೆವಿನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯವರ ಗಮನಕ್ಕೂ ತಂದಿದ್ದೇನೆ. ಈ ಶಿಫಾರಸು ಬಹುಶಃ ರೆವಿನ್ಯೂ ಇಲಾಖೆಯಿಂದ ಬರಬೇಕೆಂಬ ಅಭಿಪ್ರಾಯವಿದೆಯೋ ಏನೋ ಸರ್ಕಾರ ಆ ರೀತಿ ಆಜ್ಞೆ ಮಾಡಿದೆಯೋ ಏನೋ ಗೊತ್ತಿಲ್ಲ. ಜನರಿಂದ maintenance cess ತೆಗೆದುಕೊಂಡು ಆ ಕೆರೆಗಳನ್ನು ಸರ್ಕಾರದವರೇ ಸರಿಮಾಡಿಕೊಡಬೇಕು. ಹೀಗೆ ಮಾಡುವುದರಿಂದ ಹೆಚ್ಚು ಬೆಳೆ ಬೆಳೆಯಲು ಅನುಕೂಲವಾಗುವುದಲ್ಲದೆ ದೇಶದ ಸಂಪತ್ತು ಹೆಚ್ಚಾಗುತ್ತದೆಂದು ಹೇಳುತ್ತೇನೆ.

5-30 P.M.

ರಾಷ್ಟ್ರೀಯ ವಿಸ್ತರಣಾ ಯೋಜನೆಯ ವಿಚಾರದಲ್ಲಿ ದೊಡ್ಡ ವಾದವಿವಾದವೆದ್ದಿತು, ಇದರಲ್ಲಿ ಒಂದು ಕೊರತೆ ಕಾಣುತ್ತದೆ. ಈ ಯೋಜನೆಯನ್ನು ಪ್ರಾರಂಭ ಮಾಡಿದ ಕಾಲದಲ್ಲಿ ಐದು-ಹತ್ತು ಹಳ್ಳಿಗಳಿಗೆ ಗ್ರಾಮಸೇವಕರನ್ನು ನೇಮಕ ಮಾಡಲಾಯಿತು. ಅವರ ಕೆಲಸದ ಮೇಲ್ವಿಚಾರಣೆಗೆ ಈಗ ಬಿ.ಡಿ.ಓ.ಗಳನ್ನು ನೇಮಕ ಮಾಡಿದೆ. ಈ ಹೊತ್ತು ಈ ಬಿ.ಡಿ.ಓ.ಗಳನ್ನು ತಾಲ್ಲೂಕು ಬೋರ್ಡಿನ ಎಕ್ಸಿಕ್ಯೂಟಿವ್ ಆಫೀಸರನ್ನಾಗಿ ಮಾಡಲಾಗಿದೆ. ಗ್ರಾಮಸೇವಕರು ವೇಳೆಯಲ್ಲಿ ಸುಮಾರು ಶೇಕಡ 80 ರಷ್ಟು ವ್ಯವಸಾಯದ ಕೆಲಸಕ್ಕೆ ವಿನಿಯೋಗ ಮಾಡಬೇಕೆಂದಿದೆ. ಎಕ್ಸಿಕ್ಯೂಟಿವ್ ಆಫೀಸರುಗಳಿಗೆ ಹಳ್ಳಿಗಳಲ್ಲಿ ನಡೆಯತಕ್ಕ ಶಾಲಾಕಟ್ಟಡಗಳು, ರಸ್ತೆಕೆಲಸಗಳು ಇವುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಇದರಿಂದ ಅವರು ಗ್ರಾಮಸೇವಕರುಗಳು ವ್ಯವಸಾಯ ಕಾರ್ಯದಲ್ಲಿ ಏನು ಪ್ರಗತಿಯನ್ನು ತೋರಿಸಬೇಕೋ ಅದನ್ನು ತೋರಿಸಿದ್ದಾರೆಯೋ ಇಲ್ಲವೋ ಎಂಬುದನ್ನು ನೋಡಲಾಗುವುದಿಲ್ಲ. ವರದಿಯನ್ನೇನೋ ಕಳುಹಿಸುತ್ತಾರೆ. ಜಿಲ್ಲಾ ವ್ಯವಸಾಯಾಧಿಕಾರಿಗಳು ಈ ಗ್ರಾಮಸೇವಕರ ಕೆಲಸದ ಮೇಲ್ವಿಚಾರಣೆಯನ್ನು ನಡೆಸಿದರೆ ಶೇಕಡ 40ರಷ್ಟು ವ್ಯವಸಾಯಕ್ಕೆ ಗಮನ ಕೊಡಬೇಕೆಂದೇನು ಗೊತ್ತಾಗಿದೆಯೋ ಅದು ಸರಿಯಾಗಿ ನಡೆಯುತ್ತದೆ. ಈಗ ಗ್ರಾಮಸೇವಕರು ನಮ್ಮ subordinates ಅಲ್ಲ ಎಕ್ಸಿಕ್ಯೂಟಿವ್ ಆಫೀಸರಿಗೆ subordinates ಎಂದು ಜಿಲ್ಲಾ ವ್ಯವಸಾಯಾಧಿಕಾರಿಗಳು ಹೇಳುತ್ತಾರೆ. ಇದರಿಂದ ವ್ಯವಸಾಯದ ಕೆಲಸವೂ ಇಲ್ಲ, ಹಿಂದೆ ಮಾಡುತ್ತಿದ್ದ ಕೆಲಸವೂ ಇಲ್ಲ ಹೀಗಾಗಿದೆ. ಶೇಕಡ 40ರಷ್ಟು ವ್ಯವಸಾಯದ ಕೆಲಸ ಮಾಡಬೇಕೆಂದೂ, ಗ್ರಾಮಸ್ಥರಿಗೆ ವ್ಯವಸಾಯದ ಕೆಲಸದ ಬಗ್ಗೆ ತಿಳುವಳಿಕೆ ಕೊಡಬೇಕೆಂದೂ ಇದ್ದ ಮೂಲೋದ್ದೇಶ ಬಹುಶಃ ಸಾಧನೆಯಾಗುವುದಿಲ್ಲವೋ ಏನೋ ಎನಿಸುತ್ತದೆ. ಆದುದರಿಂದ ಜಿಲ್ಲಾ ವ್ಯವಸಾಯಾಧಿಕಾರಿಗಳಿಗೂ ಗ್ರಾಮಸೇವಕರ ಮೇಲೆ ಉಸ್ತುವಾರಿ ಇಡುವ ಅಧಿಕಾರವನ್ನು ಕೊಟ್ಟು ಆಜ್ಞೆ ಮಾಡಿದರೆ ಈ ಗ್ರಾಮಸೇವಕರು ಸರಿಯಾಗಿ ಕೆಲಸ ಮಾಡಿ ವ್ಯವಸಾಯದ ಕಡೆ ಹೆಚ್ಚಿನ ಗಮನ ಕೊಡಲವಕಾಶವಾಗುತ್ತದೆಂದು ನನ್ನ ಸಲಹೆ.

(ಶ್ರೀ ಎಂ. ಸಿ. ಬಸಪ್ಪ)

ಇನ್ನು ನೀರಾವರಿ ಬಾವಿಗಳ ಕೊರತೆಯಿದೆ. ಎಲ್ಲಿ ನೀರಿನ ಸೌಕರ್ಯವಿಲ್ಲವೋ ಅಲ್ಲಿ ನೀರಾವರಿ ಬಾವಿಗಳಿಗೆ ಹೆಚ್ಚು ಉತ್ತೇಜನ ಕೊಡಬೇಕೆಂಬ ಉದ್ದೇಶದಿಂದ ಕಳೆದ ಎರಡು ವರ್ಷಗಳಿಂದ ಇಂಡಿಯಾ ಸರ್ಕಾರದವರೂ ಪ್ರಾಂತೀಯ ಸರ್ಕಾರದವರೂ ಹೆಚ್ಚು ಹಣವನ್ನೊದಗಿಸುತ್ತಿದ್ದಾರೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ 3,40,000 ರೂಪಾಯಿ ನೀರಾವರಿ ಯೋಜನೆಗಾಗಿ ಖರ್ಚು ಮಾಡುವುದರಲ್ಲಿ 3 ಲಕ್ಷ ರೂಪಾಯಿ ಸಾಲ 40 ಸಾವಿರ ರೂಪಾಯಿ ಗ್ರಾಂಟು ರೂಪದಲ್ಲಿ ಕೊಡಬೇಕೆಂದು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರಬೇಕೆಂದರೆ, ಬಹುಶಃ ಅಧಿಕಾರಿಗಳು ಕರ್ತವ್ಯಲೋಪ ಮಾಡಿದ್ದಾರೋ ಎನಿಸುತ್ತದೆ, 200-300 ಬಾವಿಗಳನ್ನು ತೆಗೆಯಲು ಉತ್ತೇಜನ ಕೊಟ್ಟರು. ಈ ದಿವಸ ಒಂದು ಬಾವಿ ಕೂಡ ಪೂರ್ತಿಯಾಗಿಲ್ಲ. ಒಂದನೆಯ ಕಂತನ್ನು ಕೊಟ್ಟಿದ್ದಾರೆ, ಎರಡನೆಯ ಕಂತನ್ನು ಕೇಳಿದರೆ, ಹಣವಿಲ್ಲ, ಮುಗಿದುಹೋಗಿದೆ, ಎಂದು ಹೇಳುತ್ತಾರೆ. ಸಬ್ಸಿಡಿಯನ್ನು ಲೋನ್ ಆಗಿ ಪರಿವರ್ತನೆ ಮಾಡಿ ಕೊಡಿ ಎಂದು ಕೇಳುತ್ತೇವೆ, ಅದಕ್ಕೆ ಸರ್ಕಾರಿ ಆಜ್ಞೆ ಬಂದ ಮೇಲೆ ಕೊಡುತ್ತೇವೆಂದು ಹೇಳುತ್ತಾರೆ. ಈ ಪರಿಸ್ಥಿತಿಗೆ ಯಾರು ಕಾರಣರು ಎಂಬುದನ್ನು ಆಲೋಚನೆ ಮಾಡಬೇಕು. ಯಾರೇ ಆಗಲಿ ಅವರು ಹೀಗೆ ಮಾಡಿರುವುದು ಸರಿಯಲ್ಲ. ಎಷ್ಟು ಕೊಡಬೇಕಾಗಿತ್ತೊ, ಎಷ್ಟು ಬಾವಿಗಳನ್ನು ಸಕಾಲದಲ್ಲಿ ಮುಗಿಸಬೇಕಾಗಿತ್ತೋ ಅಷ್ಟನ್ನು ಕೊಟ್ಟು ಮಾಡಿಸಬೇಕಾಗಿತ್ತು. ಸಕಾಲದಲ್ಲಿ ಹಣವನ್ನು ಕೊಟ್ಟಿದ್ದರೆ ಎಷ್ಟೋ ಬಾವಿಗಳು ಪೂರ್ಣವಾಗಿ ರೈತರಿಗೆ ಅನುಕೂಲವಾಗುತ್ತಿತ್ತು ಎಂಬುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಮಂತ್ರಿಗಳು ಈ ವಿಚಾರವನ್ನು ಆಲೋಚನೆ ಮಾಡಿ ಈಗಲೂ ಎಷ್ಟು ಬಾವಿಗಳ ಕೆಲಸ ನಿಂತಿದೆ ಅದನ್ನು ಪೂರ್ತಿ ಮಾಡಲು ಏನು ಸಹಾಯ ಬೇಕೋ ಅದನ್ನು ನೀಡಬೇಕು. ಏನು ತೊಂದರೆಯಿದೆ ಎನ್ನುವುದನ್ನು ಸರಿಯಾಗಿ ನೋಡಿ ಸೂಕ್ತ ಆಜ್ಞೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ 322 ಲಕ್ಷ ರೂಪಾಯಿಗಳ ಕೊರತೆ ನಮ್ಮ ಬಡ್ಜೆಟ್‌ನಲ್ಲಿದೆ ಎಂದು ಯೋಚನೆ ಮಾಡಬೇಕಾಗಿಲ್ಲ. ಈ ಸಭೆಯ ಸದಸ್ಯರ ಸಹಕಾರದಿಂದ ಯೋಜನೆಗಳನ್ನು ಯಶಸ್ವಿಗೊಳಿಸುತ್ತಾರೆಂದು ನಂಬಿದ್ದೇನೆ. ಈ ಬಡ್ಜೆಟ್ಟು ಸಂಸ್ಥಾನದ ಅಭಿವೃದ್ಧಿಯ ದೃಷ್ಟಿಯಿಂದ ಆಶಾದಾಯಕವಾಗಿದೆ, ಇದನ್ನೊಪ್ಪಿಕೊಳ್ಳಬಹುದೆಂದು ಸಭೆಗೆ ಅರಿಕೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಅಂದಾನಯ್ಯ (ಕುಣಿಗಲ್).—ಮಾನ್ಯ ಸಭಾಪತಿಗಳೆ ಈಗಾಗಲೇ ಈ ಬಡ್ಜೆಟ್ಟನ್ನು ಕೆಲವರು ಮಾನ್ಯ ಸದಸ್ಯರು ಅನುಮೋದಿಸಿಯೂ ಮತ್ತೆ ಕೆಲವರು ವಿರೋಧಿಸಿಯೂ ಮಾತನಾಡಿದ್ದಾರೆ.

ಮೊದಲನೆಯದಾಗಿ ಮಂತ್ರಿಮಂಡಲದ ವಿಷಯವಾಗಿ ಹೇಳಬೇಕಾಗಿದೆ........

ಶ್ರೀ ಬಿ. ಡಿ. ಜತ್ತಿ.—ಅದನ್ನು ಎಲ್ಲರೂ ಹೇಳಿದ್ದಾರೆ, ಹೊಸದೇನಾದರೂ ಇದ್ದರೆ ಹೇಳಿದರೆ ಒಳ್ಳೆಯದು.

ಶ್ರೀ ಅಂದಾನಯ್ಯ.—ದೇಶದಲ್ಲಿ ಹಣದ ಮುಗ್ಗಟ್ಟು ಒಂದು ಕಡೆ, ಆಹಾರ ಸಮಸ್ಯೆ, ಇನ್ನೊಂದು ಕಡೆ ನಿರುದ್ಯೋಗ ಸಮಸ್ಯೆ ಇದೆ. ಹೀಗೆ ಜನಜೀವನದ ಏರುಪೇರುಗಳಿದ್ದಿರುವಾಗ ಮಂತ್ರಿಮಂಡಲವನ್ನು ಇಷ್ಟು ವಿಸ್ತರಣೆ ಮಾಡಿರುವುದು ವಿಷಾದಕರವಾದುದು. ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಮಂತ್ರಿಮಂಡಲದ 'ಫೋಟೋ' ನೋಡಿದರೆ ಜನರಿಗೆ ಹೊಟ್ಟೆಯುರಿಯುತ್ತದೆಯೋ ಏನೋ! ಇಷ್ಟು ಜನ ಮಂತ್ರಿ ಉಪಮಂತ್ರಿಗಳಿಗೆ ಮನೆಗಳನ್ನೆಲ್ಲ ಮಾಡುವುದು, ಎಷ್ಟು ಸಿಬ್ಬಂದಿಯನ್ನೊದಗಿಸುವುದು, ಎಷ್ಟು ವಾಹನ ಸೌಕರ್ಯವನ್ನೊದಗಿಸುವುದು? ತಾವು ಕೊಡುವ ಹಣವೆಲ್ಲ ಇವರ ಸಿಬ್ಬಂದಿ, ವಾಹನ ಮತ್ತು ಇತರ ಅನುಕೂಲಗಳಿಗೇ ಖರ್ಚಾಗುತ್ತದೆಯಲ್ಲ ಎಂಬ ವ್ಯಥೆ ಅವರಿಗಾಗುತ್ತದೆ. ಮಾನ್ಯ ನಿಜಲಿಂಗಪ್ಪನವರು ಅಧಿಕಾರಕ್ಕೆ ಬಂದಮೇಲೆ ಎಲ್ಲವೂ ಸರಿಹೋಗುತ್ತದೆ, ಅವರು ಸರಿಮಾಡುತ್ತಾರೆ ಎಂದು ತಿಳಿದುಕೊಂಡಿದ್ದೆವು; ಆದರೆ ಅವರೂ ತಪ್ಪುಹೆಜ್ಜೆಯನ್ನಿಟ್ಟಿದ್ದಾರೆ. ಇನ್ನು ಮೇಲಾದರೂ ಅವರು ಕೆಟ್ಟ ದಾರಿಗೆ ಹೋಗದೇಯಿರಲೆಂದು ನಾನು ಭಗವಂತನನ್ನು ಪ್ರಾರ್ಥನೆ ಮಾಡುತ್ತೇನೆ.

ಎರಡನೆಯದಾಗಿ, ಆಡಳಿತಪಕ್ಷದಲ್ಲಿ ಅಧಿಕಾರ ದಾಹ ಹೆಚ್ಚಿದೆ. ಯಾರನ್ನು ನೋಡಿದರೂ ಅವರಿಗೆ ಅಧಿಕಾರ ಬೇಕು. ಮಂತ್ರಿಗಳು ಉಪಮಂತ್ರಿಗಳಾಗಬೇಕೆಂದು ಬಯಸುತ್ತಾರೆ. ಹೀಗೆ ಅಧಿಕಾರ ದಾಹ ಹೆಚ್ಚಿದೆಯೇ ಹೊರತು, ದೇಶದ ಸೇವೆ ಮಾಡಬೇಕು, ಬಡವರಿಗೆ ಸಹಾಯ ಮಾಡಬೇಕು, ನಾವೂ ಬಡವರ ಹಾಗೆಯೇ ಒಂದು ಮಟ್ಟದಲ್ಲಿ ಜೀವನ ಸಾಗಿಸಬೇಕು, ಅಧಿಕಾರವರ್ಗಕ್ಕೆ ಮಾದರಿಯಾಗಿರಬೇಕು ಎಂಬ ಬಯಕೆಯಿಲ್ಲ. ಆಡಳಿತ ದಾಹ ಹೆಚ್ಚಾಗಿದೆ ಎನ್ನುವುದಕ್ಕೆ ನಿದರ್ಶನವನ್ನು ಹೇಳುತ್ತೇನೆ. ಆದರೆ ಹೇಳುವುದಕ್ಕೆ ಮನಸ್ಸು ಬರುವುದಿಲ್ಲ.

ಎರಡನೆಯದಾಗಿ, ವಿದ್ಯಾಭ್ಯಾಸದ ವಿಚಾರವನ್ನು ಹೇಳಬೇಕಾಗಿದೆ. ಸರ್ಕಾರ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕು, ಪ್ರತಿಯೊಬ್ಬರನ್ನೂ ವಿದ್ಯಾವಂತರನ್ನಾಗಿ ಮಾಡಬೇಕೆಂದು ಹೊರಟಿದೆ. ಆದರೆ ಸ್ಕೂಲುಗಳಿಗಾಗಿ ಒಂದು ಸಾವಿರ ನಾವು ಕೊಡುತ್ತೇವೆ. ಒಂದು ಸಾವಿರದ ಎಂಟುನೂರು ರೂಪಾಯಿ ನೀವು ಕೊಡಬೇಕು ಎಂದು ಜನರಿಗೆ ಹೇಳುತ್ತಿದ್ದಾರೆ. ಹೀಗಾದರೆ ಕಡ್ಡಾಯ ಶಿಕ್ಷಣವನ್ನು ಹೇಗೆ ಜಾರಿಗೆ ತರುವುದು?

ಮೂರನೆಯದಾಗಿ ಆಡಳಿತಪಕ್ಷದಲ್ಲಿ ದಕ್ಷತೆ ಕಡಮೆಯಾಗಿದೆ, ಇದಕ್ಕೆ ಒಂದೆರಡು ನಿದರ್ಶನಗಳನ್ನು ಹೇಳುತ್ತೇನೆ. ಮೊನ್ನೆತಾನೆ ತುಮಕೂರಿನಲ್ಲಿದ್ದ ಒಬ್ಬ ಕಮರ್ಷಿಯಲ್ ಟಾಕ್ಸ್ ಇನ್‌ಸ್ಪೆಕ್ಟರನ್ನು ಬೇರೆ ಕಡೆಗೆ ವರ್ಗ ಮಾಡಿದರು. ಅವನು ವರ್ಗವಾಗಿರುವ ಜಾಗಕ್ಕೆ ಹೋಗಿ ಛಾರ್ಜ್ ತೆಗೆದುಕೊಂಡು ಬಾಡಿಗೆ ಮನೆ ತೆಗೆದುಕೊಂಡು ಎಂಟು ದಿವಸಗಳು ಅಲ್ಲಿ ವಾಸ ಮಾಡಿದನಂತರ ಯಾರೋ ಬೇಕಾದವರನ್ನು ಅಲ್ಲಿಗೆ ತಂದು ಹಾಕಿ ಮತ್ತೆ ಅಲ್ಲಿಗೆ ಹೊಸದಾಗಿ ಹೋಗಿದ್ದವನನ್ನು ಬೇರೆ ಕಡೆಗೆ ವರ್ಗ ಮಾಡಿದರು. ಇದನ್ನು ನೋಡಿದರೆ ದಕ್ಷತೆ ಹೇಗಿದೆಯೆಂಬುದು ವ್ಯಕ್ತವಾಗುತ್ತದೆ. ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಬದಲಾಯಿಸುವುದು ಅದರಿಂದ ಎದ್ದು ಕಾಣುತ್ತದೆ. ಅದಕ್ಕಿಂತ ಬೇರೆ ನಿದರ್ಶನ ಬೇಕೆ?

ನಾಲ್ಕನೆಯದಾಗಿ ಪಂಚಾಯಿತಿ ರಾಜ್ಯದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ರೂರಲ್ ಕಮ್ಯೂನಿಕೇಷನ್ ರಸ್ತೆಗಳನ್ನು ಎಲ್ಲಾ ಕಡೆಯೂ ಮಾಡಿದ್ದಾರೆ. ಈ ರಸ್ತೆಗಳನ್ನು ಮಾಡಿದಮೇಲೆ ಅಲ್ಲಿ ಬೇಕಾದ ಕಲ್ವರ್ಟ್, ಕಾಸ್‌ವೇ ಮುಂತಾದುವನ್ನು ತಕ್ಷಣ ಮಾಡಿಸಿದರೆ ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ. ಹಾಗೆ ಮಾಡದಿರುವುದರಿಂದ ಈ ದಿವಸ

8-10 ವರ್ಷಗಳ ಹಿಂದೆ ಮಾಡಿದ ರಸ್ತೆಗಳಿಂದ ಉಪಯೋಗವಾಗುತ್ತಿಲ್ಲ. ಇಲ್ಲಿಯವರೆಗೆ ಕೆಲವು ರಸ್ತೆಗಳಲ್ಲಿ ಒಂದು ಗಾಡಿ ಕೂಡ ತಿರುಗಾಡಿಲ್ಲ. ಸರ್ಕಾರ ಹಣವೇನೋ ಖರ್ಚು ಮಾಡಿದೆ. ಆದರೆ ಸರಿಯಾದ ರೀತಿಯಲ್ಲಿ ಖರ್ಚು ಮಾಡಿಲ್ಲ. ರೂರಲ್ ಕಮ್ಯೂನಿಕೇಷನ್ ರಸ್ತೆ ಮಾಡುವಾಗ ಆವಶ್ಯಕವಾದ ಕಾಸ್‌ವೇ, ಹೈಲೆವಲ್ ಕಾಸ್‌ವೇ, ಸೇತುವೆ ವಗೈರೆ ಮಾಡಿದರೆ ಮಾತ್ರ ಹಳ್ಳಿಯವರಿಗೆ ಬೇಕಾದ ಅನುಕೂಲ ಸಿಕ್ಕುತ್ತದೆಯೇ ಹೊರತು ಇಲ್ಲದಿದ್ದರೆ ಇಲ್ಲ. ಈಗ ಮಾಡಿರುವ ರಸ್ತೆಗಳು ಕಣ್ಣಿಗೇ ಕಾಣುತ್ತಿಲ್ಲ. ಇನ್ನು ಮುಂದಾದರೂ ಸರ್ಕಾರ ಈ ಕಡೆ ಗಮನಕೊಟ್ಟು ಸರಿಯಾದ ರೀತಿಯಲ್ಲಿ ಸಂಚಾರಮಾರ್ಗವನು ಮಾಡಬೇಕು.

ಐದನೆಯದಾಗಿ ಕುಡಿಯುವ ನೀರಿನ ವಿಚಾರ. ಅಧಿಕಾರಕ್ಕೆ ಬಂದು 15 ವರ್ಷಗಳಾದುವು. ಯಾವ ಹಳ್ಳಿಗೆ ಹೋದರೂ ಬಾವಿಯಿಲ್ಲ, ಸ್ಕೂಲು ಕಟ್ಟಡವಿಲ್ಲ, ಸಂಚಾರಮಾರ್ಗವಿಲ್ಲ, ಕುಡಿಯುವ ನೀರಿನ ಬಾವಿಗಳ ಅಭಾವದಿಂದ ಅನನುಕೂಲ ಬಹಳವಾಗಿದೆ. ಇದನ್ನೇ ಒದಗಿಸದಿರುವಾಗ ಸರ್ಕಾರ ಆಡಳಿತವನ್ನು ಎಷ್ಟರಮಟ್ಟಿಗೆ ನಡೆಸಬಹುದೆಂದು ಜನರಲ್ಲಿ ಅನುಮಾನವುಂಟಾಗಿದೆ. ಸರ್ಕಾರ ಸಾಧ್ಯವಾದಮಟ್ಟಿಗೆ ಹಳ್ಳಿಗಳಿಗೆ ಬೇಕಾದ ಕುಡಿಯುವ ನೀರಿನ ಬಾವಿ, ಶಾಲಾ ಕಟ್ಟಡ ಮತ್ತು ಸಂಚಾರ ಮಾರ್ಗ—ಈ ಮೂರಕ್ಕೂ ಹೆಚ್ಚು ಗಮನ ಕೊಟ್ಟು ಆದಷ್ಟು ಅನುಕೂಲತೆಯನ್ನು ಹಳ್ಳಿಗಾಡಿನವರಿಗೆ ಒದಗಿಸಿಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಆರನೆಯದಾಗಿ ತಾಲ್ಲೂಕ್ ಬೋರ್ಡ್ ವಿಚಾರ. ಈ ಸಂಬಂಧವಾಗಿ ಬಹಳ ಅವ್ಯವಸ್ಥೆಯುಂಟಾಗಿದೆ. ಅಲ್ಲಿ ಗುಂಪು ರಾಜಕೀಯ ತಲೆದೋರಿ ಎಲ್ಲಾ ಹೋಬಳಿಗಳ ಜನರಿಗೂ ಸರಿಯಾದ ಅನುಕೂಲ ದೊರೆಯುತ್ತಿಲ್ಲ. ತಾಲ್ಲೂಕ್ ಬೋರ್ಡಿನ ಹಣದಿಂದ ಕೇವಲ ಒಂದು ಗುಂಪಿನ ಜನರಿಗೆ ಮಾತ್ರ ಅನುಕೂಲವಾಗುತ್ತಿದೆಯೇ ವಿನಾ ತಾಲ್ಲೂಕಿನವರಿಗೆಲ್ಲಾ ಅನುಕೂಲವಾಗುತ್ತಿಲ್ಲ. ಸರ್ಕಾರ ಈ ಕಡೆ ಗಮನ ಕೊಡಬೇಕು. ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗೆ ತಿಳಿಸಿದರೂ ಇಲ್ಲಿಯವರೆಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈಗಲಾದರೂ ಎಚ್ಚೆತ್ತು ತಾಲ್ಲೂಕ್‌ಬೋರ್ಡಿನ ಅವ್ಯವಸ್ಥೆಯನ್ನು ಸರಿಪಡಿಸಬೇಕು. ಈಗ ತಾಲ್ಲೂಕ್‌ಬೋರ್ಡಿಗೆ ಹೆಚ್ಚು ಹೆಚ್ಚು ಕೆಲಸಗಳನ್ನು ವಹಿಸುತ್ತಿದ್ದಾರೆ; ಈಗಾಗಲೆ ಶಾಲೆಗಳ ಆಡಳಿತವನ್ನು ಮತ್ತು ರೂರಲ್ ಕಮ್ಯೂನಿಕೇಷನ್ ರಸ್ತೆಗಳನ್ನು ವಹಿಸಬೇಕೆಂದು ತೀರ್ಮಾನವಾಗಿದೆ. ಈ ರೀತಿ ಇವನ್ನು ಅದಕ್ಕೆ ವಹಿಸುವಾಗ ಹಣದ ಸೌಲಭ್ಯವನ್ನು ಸಹ ಒದಗಿಸಬೇಕು. ಈಗ ಕೊಡುವುದು ಬಹಳ ಕಡಮೆ. ಸಾಕಷ್ಟು ಹಣ ಸಹಾಯ ನೀಡದೆ ಹೆಚ್ಚು ಕೆಲಸ ಒದಗಿಸಿದರೆ ತಾಲ್ಲೂಕ್ ಬೋರ್ಡಿನಿಂದ ನಿಜವಾಗಿಯೂ ಅನುಕೂಲವಾಗುವುದಿಲ್ಲ.

ಇನ್ನು ಲಂಚ ನಿರೋಧಶಾಖೆ. ಈಗ ಎಲ್ಲಿ ನೋಡಿದರೂ ಲಂಚ. ಮಾಸ್ಟರ್ ಹಿರಣ್ಣಯ್ಯನವರು ಬೆಂಗಳೂರು ಸಿಟಿಯಲ್ಲಿ ಅಭಿನಯಿಸಿದ ಲಂಚಾವತಾರ ನಾಟಕವನ್ನು ಅನೇಕರು ನೋಡಿರಬಹುದು. ಸರ್ಕಾರಿ ಕಾರ್ಯಾಂಗದಲ್ಲಿ ಯಾವ ರೀತಿ ಲಂಚಗುಳಿತನ ಹೆಚ್ಚುತ್ತಿದೆ, ಅದನ್ನು ಕಡಮೆ ಮಾಡಲು ಏನು ಮಾಡಬೇಕು ಎಂಬುದನ್ನು ಆ ನಾಟಕ ನೋಡಿ ಸರ್ಕಾರ ತಿಳಿದುಕೊಳ್ಳಬಹುದು. ಲಂಚಗುಳಿತನವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲವೆಂದು ಕಾಣುತ್ತದೆ. ಈಗ ಇದಕ್ಕಾಗಿ ಲಂಚನಿರೋಧಶಾಖೆ ಬೇರೆ ಇದೆ. ಇದು ಕಳ್ಳನನ್ನು ಹಿಡಿಯಲು ಕಳ್ಳತನ ಮಾಡುವವನನ್ನೇ ನೇಮಕ ಮಾಡಿದಂತಿದೆ. ಈ ಶಾಖೆಯನ್ನು ತೆಗೆಯುವುದೇ ಒಳ್ಳೆಯದೆಂದು ಮಾನ್ಯ ಸದಸ್ಯರು ಹೇಳಿದರು. ಜನರು ಎಲ್ಲಿಯವರೆಗೆ ಸರಿಯಾದ ನೀತಿಯಿಂದ ನಡೆಯುವುದಿಲ್ಲವೋ ಅಲ್ಲಿಯವರೆಗೆ ಲಂಚವನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ. ದಯವಿಟ್ಟು ಲಂಚನಿರೋಧ ಶಾಖೆಯನ್ನು ತೆಗೆಯಬೇಕೆಂದು ಸೂಚಿಸಿರುವುದು ಬಹಳ ಒಳ್ಳೆಯ ಸಲಹೆ.

ಕೊನೆಯದಾಗಿ, ಸಹಕಾರ ಸಂಘ. ಈ ಸಂಘಗಳಲ್ಲಿ ಅನೇಕ ಕಡೆ ವರ್ಷೇ ವರ್ಷೇ ಲೆಕ್ಕಗಳೇ ಆಡಿಟ್ ಆಗುತ್ತಿಲ್ಲ. ಮತ್ತು ಕೆಲವು ಸಂಘಗಳಲ್ಲಿ 20 ರಿಂದ 50 ಸಾವಿರ ರೂಪಾಯಿಗಳವರೆಗೂ ಬಾಕಿಯಿದೆ. ಸರಿಯಾಗಿ ವಸೂಲು ಮಾಡುತ್ತಿಲ್ಲ. ಈಗಲಾದರೂ ಇದನ್ನು ಗಮನಿಸಿ ಬಾಕಿಯಿರುವ ಹಣವನ್ನು ಕಾಲಕ್ಕೆ ಸರಿಯಾಗಿ ವಸೂಲು ಮಾಡಲು ತಕ್ಕ ಸಿಬ್ಬಂದಿ ನೇಮಿಸಬೇಕೆಂದು ಮನವಿಮಾಡುತ್ತೇನೆ.

ಇಷ್ಟು ಹೇಳಿ ಈಗಲಾದರೂ ಅಧಿಕಾರಸ್ಥಾನಕ್ಕೇರಿರುವ ನಿಜಲಿಂಗಪ್ಪನವರು ಸರಿಯಾದ ರೀತಿಯಲ್ಲಿ ಸರ್ಕಾರದ ಆಡಳಿತ ನಡೆಸಿ ಪ್ರತಿಊರಿಗೂ ಒಂದು ಕುಡಿಯುವ ನೀರಿನ ಬಾವಿ, ಒಂದು ಶಾಲಾಕಟ್ಟಡ ಮತ್ತು ಸಂಚಾರಮಾರ್ಗ—ಈ ಮೂರನ್ನಾದರೂ ಮೊದಲು ಒದಗಿಸಲು ಪ್ರಯತ್ನಮಾಡಬೇಕೆಂದು ಹೇಳಿ, ಇಷ್ಟು ಮಾಡಿದರೆ ಇನ್ನೂ ಹತ್ತು ವರ್ಷ ರಾಜ್ಯಭಾರ ಮಾಡಬಹುದು ಎಂದು ಸೂಚಿಸಿ ಅವಕಾಶಕೊಟ್ಟ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ಬಜೆಟ್ ಕಳೆದ ನಾಲ್ಕು ತಿಂಗಳ ಹಿಂದೆಯೇ ಮಂಡಿಸಲ್ಪಟ್ಟಿತ್ತು. ಅಲ್ಲಿಂದೀಚೆಗೆ ಅಂದಾಜು ತಿದ್ದುಪಾಟಾಗಿ ಖರ್ಚಾಗಿರುವುದಕ್ಕೆ ಲೆಕ್ಕವಿರಬಹುದು. ಅದನ್ನು ಈ ಸಭೆಯ ಮುಂದೆ ನಮ್ಮ ಅರ್ಥಿಕ ಸಚಿವರು ಇಡಬೇಕಾಗಿತ್ತು. ಈಚೆಗೆ ಧೋರಣೆ ಬದಲಾಗಿರುವಂತೆ ಕಾಣುತ್ತದೆ. ಬಹುಶಃ ಕೊನೆಯಲ್ಲಿ ವಿವರ ಹೇಳಬಹುದು. ಮುಖ್ಯವಾಗಿ ಈ ಬಜೆಟ್ಟಿನಲ್ಲಿರುವ ಲೋಪದೋಷಗಳನ್ನು ನಾವು ಹೇಳುವುದು ವಾಡಿಕೆ. ಆದರೆ ಅದರಿಂದ ಫಲತಾಂಶವೇನೂ ಇಲ್ಲ ಎಂಬುದನ್ನು ನಾವು ಚೆನ್ನಾಗಿ ತಿಳಿದುಕೊಂಡಿದ್ದೇವೆ. ಏಕೆಂದರೆ ಈವರೆಗೆ ಮಾತನಾಡಿದ ಎದುರು ಪಕ್ಷದವರಲ್ಲದೆ ಸರ್ಕಾರಿ ಪಕ್ಷದವರೂ ಕೂಡ ತೀವ್ರವಾಗಿ ಟೀಕಿಸಿದ್ದಾರೆ. ಶ್ರೀ ಬಂದೀಗೌಡರು ಹೇಳಿದ ಎಲ್ಲಾ ಅಭಿಪ್ರಾಯಗಳನ್ನೂ ನಾನು ಪೂರ್ಣವಾಗಿ ಒಪ್ಪುತ್ತೇನೆ. ಶ್ರೀ ಸೂರ್ಯನಾರಾಯಣರಾಯರೂ ಕೂಡ ಅನೇಕ ವಿಚಾರಗಳನ್ನು ಹೇಳಿದರು. ನಾನೂ ಸಹ ಒಂದೆರಡು ವಿಚಾರಗಳನ್ನು ಸಭೆಯ ಮುಂದೆ ಹೇಳಲು ಪ್ರಯತ್ನ ಪಡುತ್ತೇನೆ.

ಒಟ್ಟಿನಲ್ಲಿ ಈಗ ಖೋತಾ ಬಜೆಟ್ ಆಗಿದೆ. ಇದರ ಫಲಿತಾಂಶ ತೆರಿಗೆ ಹೊರೆ, ಆಮೇಲೆ ಸಾಲ; ಜೊತೆಗೆ ಅಲ್ಪ ಉಳಿತಾಯದ ಮೂಲಕ ಕೊಂಚ ವರಮಾನ. ಇದು ಎಲ್ಲಿಯವರೆಗೆ ನಡೆಯುತ್ತದೆ, ಇದರಿಂದ ಎಷ್ಟು ಕಾಲ ಆಡಳಿತ ನಡೆಸಲು ಸಾಧ್ಯ ಎಂಬುದನ್ನು ಮೊದಲು ಯೋಚಿಸಬೇಕು. ಮುಖ್ಯವಾಗಿ ತೆರಿಗೆ ಹೊರೆ ಹೊರಿಸಬೇಕಾದರೆ ಹೊರೆ ಹೊರುವವರು ಯಾರು, ಅವರಿಗೆ ಹೊರಲು ಶಕ್ತಿಯಿದೆಯೆ, ಯಾವ ತೆರಿಗೆ ಹಾಕಬೇಕು ಎಂಬುದನ್ನು ಕೂಡ ಯೋಚನೆ ಮಾಡಬೇಕು. ಈಗ ಹಾಗೆ ಮಾಡುತ್ತಿಲ್ಲ ತೆರಿಗೆ

(ಶ್ರೀ ಬಿ. ಹುಚ್ಚೇಗೌಡ)

ಹೊರುವವನ ಶಕ್ತಿ ನೋಡುವುದಿಲ್ಲ ಮತ್ತು ಯಾವ ವಿಧವಾದ ತೆರಿಗೆ ಹಾಕಬೇಕು ಎಂದು ನೋಡುತ್ತಿಲ್ಲ. ಒಟ್ಟಿನಲ್ಲಿ ಹಣ ಬಂದರೆ ಸರಿ; ಯಾವುದು ಸುಲಭವಾಗಿ ಹಣ ಬರುತ್ತದೆಂದು ನೋಡುತ್ತಾರೆ, ಅಷ್ಟೆ. ಅದಕ್ಕೆ ಬದಲು, ಮೊದಲು, ಆಡಳಿತದಲ್ಲಿ ಸೋರಿ ಹೋಗುತ್ತಿರುವುದನ್ನು ಭದ್ರಮಾಡಿ. ಪ್ರತಿದಿನವೂ ಅನೇಕ ವಿಧವಾದ Wastageನ್ನು ನಾವು ನೋಡುತ್ತಿದ್ದೇವೆ. ನಿನ್ನೆಯ ದಿನ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ನಮ್ಮ ಮುಖ್ಯಮಂತ್ರಿಗಳು ಹೇಳಿದರು: "ಏನೇ ಆದರೂ ಒಂದು ಲಕ್ಷ, ಎರಡು ಲಕ್ಷ ಆದರಿಂದ ಉಳಿಯಬಹುದು, ಅಷ್ಟೆ" ಎಂದು. ಇದರ ಅರ್ಥ ವೇನು? ಅಲ್ಲದೆ ವಾಸ್ತವಾಂಶವೇ ಬೇರೆ. ಎಷ್ಟೋ ದುಡ್ಡು Waste ಆಗುತ್ತಿದೆಯೆಂದು ಸರ್ಕಾರಿ ಆಡಿಟ್ ರಿಪೋರ್ಟುಗಳೇ ಘಂಟಾಘೋಷವಾಗಿ ಸಾರುತ್ತಿವೆ! 'ನಾವು ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತೇವೆ, ದೇಶವನ್ನು ಉದ್ಧಾರ ಮಾಡುತ್ತೇವೆ' ಎಂದು ಹೇಳುತ್ತಾರೆ, ಅಷ್ಟೆ. ಯಾವ ರೀತಿ ಉದ್ಧಾರವಾಗುತ್ತಾರೋ ಗೊತ್ತಿಲ್ಲ. ಒಂದು ರೂಪಾಯಿ ಖರ್ಚು ಮಾಡುವಲ್ಲಿ ಎರಡು ರೂಪಾಯಿ ಖರ್ಚು ಮಾಡಿದರೆ ಯಾವ ರೀತಿ ಉದ್ಧಾರವಾಗುತ್ತಾರೆ? ಒಂದು ರೂಪಾಯಿ ಬರಬೇಕಾದರೆ ಎಷ್ಟು ದುಡಿಯಬೇಕು ಗೊತ್ತೆ? ಪಂಚವಾರ್ಷಿಕ ಯೋಜನೆಗಳಿಗಾಗಿ ಎಲ್ಲ ಜನರೂ ಹೊಟ್ಟೆ ಕಟ್ಟಬೇಕೆನ್ನುತ್ತೀರಿ. ಎಷ್ಟು ದಿನ ಹೊಟ್ಟೆ ಕಟ್ಟುವುದು? ಕೊನೆಗೆ ಏಳುವುದಕ್ಕೆ ತ್ರಾಣವಿರುತ್ತದೆಯೇ? ತಾನೇ ಸತ್ತ ಮೇಲೆ ಮುಂದಿನ ಜನಾಂಗವೆಲ್ಲಿಂದ ಬಂತು? ದೇಶಕ್ಕಾಗಿ ತ್ಯಾಗ ಮಾಡುವುದು ನಮ್ಮ ಕರ್ತವ್ಯ ನಿಜ. ಆದರೆ ಆ ತ್ಯಾಗಕ್ಕೂ ಒಂದು ಮಿತಿಯಿರಬೇಕಲ್ಲವೇ? ಒಂದು ವರ್ಷಕ್ಕೆ ಸರಾಸರಿ ಒಂಬತ್ತುಕೋಟಿ ರೂಪಾಯಿಗಳಂತೆ ಅವರು ತೆರಿಗೆ ಹೆಚ್ಚು ಮಾಡಿಕೊಂಡು ಹೋಗುತ್ತಿದ್ದಾರೆ; ಈಗ ನಾಲ್ಕು ವರ್ಷಗಳಿಂದ ಒಟ್ಟು ಎಷ್ಟು ಹೆಚ್ಚಾಗಿದೆ ನೋಡಿ. ಇದೆಲ್ಲಾ ಯಾವುದರಿಂದ ಬರುತ್ತದೆ? ಈಗ ಸರ್ಕಾರಕ್ಕೆ ಬಂದಿರುವ Audit objections ಎಷ್ಟಿವೆ ನೋಡಿ. ಸುಮಾರು 46,000 ಇವೆ. The total number of objections raised up to the end of March 1959 is 86,355 ಎಂದು ಹೇಳಿದ್ದಾರೆ. 25 ಕೋಟಿ (ಚಿಲ್ಲರೆ) ರೂಪಾಯಿಗಳಿಗೆ ಸಂಬಂಧಿಸಿದೆ ಇದು. ಇದಕ್ಕೆ ಜವಾಬು ಕೊಡದಿರುವ ಸರ್ಕಾರ ಎಲ್ಲಿಯವರೆಗೆ ಉಳಿದೀತು? ಇಷ್ಟೊಂದು ಹಣವನ್ನು ಅನಧಿಕೃತವಾಗಿ ಖರ್ಚುಮಾಡಿ ಸಮಜಾಯಿಷಿ ಕೊಡದ ಸರ್ಕಾರ ಆಡಳಿತದಲ್ಲಿರುತ್ತದೆಯೇ? ಆಡಿಟ್ ಸಮಿತಿಯವರೂ ಕೂಡ ಪದೇ ಪದೇ ತೀಕ್ಷ್ಣವಾಗಿ ಟೀಕಿಸುತ್ತಿದ್ದಾರೆ. ಅಷ್ಟಾದರೂ ಅದಕ್ಕೆ ಜವಾಬು ಕೊಟ್ಟಿಲ್ಲ.

"This is apparents due to lack of adequate timely attention and concerted efforts at departmental level. The Committee was surprised when some of the departmental officers attributed the slow progress in clearing audit objections to transfer of officers which is shockingly absurd and befitting any administration. The Committee wish to impress that Government administration being a continuous process cannot come to a standstill merely on account of change of incumbents."

ಈ ಸರ್ಕಾರ ಇಂಥ ಟೀಕೆಗಳನ್ನು ಹೊತ್ತುಕೊಂಡು ಹೇಗೆತಾನೆ ಆಡಳಿತ ನಡೆಸುವುದಕ್ಕೆ ಅರ್ಹತೆ ಪಡೆದೀತು? ಮೊದಲು ಈ ವರದಿಗಳಿಗೆ ಸರಿಯಾದ ಜವಾಬು ಕೊಟ್ಟು ಲೆಕ್ಕಪತ್ರಗಳ ವ್ಯವಸ್ಥೆಯನ್ನು ಕ್ರಮಪಡಿಸದೆ ಹೋದರೆ, ಆ ಲೆಕ್ಕಪತ್ರಗಳ ತನಿಖೆ ಯಾದರೂ ಏಕಿರಬೇಕು, ಅಕೌಂಟೆಂಟ್ ಜನರಲ್ ತಾನೆ ಏಕೆ? ಇದಕ್ಕೆ ಜವಾಬು ಹೇಳುವ ಎದೆಗಾರಿಕೆ ಇದೆಯೇ ಈ ಸರ್ಕಾರಕ್ಕೆ? ಕಮಿಟಿಯವರು ಇನ್ನು ಬೇರೆ ಹೇಳುತ್ತಾರೆ!

"The Committee were, however, distressed to learn that generally they were not taken seriously by the department and on a few occasions the proposed meetings had even to be called off as the departmental officers did not turn up."

ಇದಕ್ಕಿಂತಲೂ ಹೆಚ್ಚು ಹೇಳಬೇಕೇ? ಇಲಾಖಾಧಿಕಾರಿಗಳು ಬಂದು ಏನಾದರೊಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುವಂತಾಗಲೆಂದು ಕರೆಸಿದರೆ, ಇಲಾಖಾಧಿಕಾರಿಗಳು ಬರಲೇ ಇಲ್ಲವೆಂದರೆ ಇದಕ್ಕಿಂತಲೂ ಹೆಚ್ಚಿನ ಅದಕ್ಷತೆ ಬೇರೆ ಇದೆಯೇ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಭಯವಿರಲಿಲ್ಲವೆಂದು ಕಾಣುತ್ತದೆ.

ಶ್ರೀ ಬಿ. ಡಿ. ಜತ್ತಿ.—ಭಯ ಎಲ್ಲರಿಗೂ ಇದೆ.

ಶ್ರೀ ಬಿ. ಹುಚ್ಚೇಗೌಡ.—ಅಲ್ಲದೆ ಕಮಿಟಿಯವರು ಈ ಆರೋಪಣೆಗಳನ್ನು ಪರಿಹರಿಸಿಕೊಳ್ಳಲೆಂದು ಒಂದು ಕಾಲಾವಕಾಶವನ್ನು ಕೊಡಬೇಕೆಂದು ಹೇಳಿದ್ದಾರೆ.

"The committee were however inforrmed that in compliance with theiearlier recommendations suitable instructions have been issued during April 1961 to all officers by Government fixing a time limit of three months for the clearance of objections outstanding for over a year."

ಹೀಗೆ ಮೂರು ತಿಂಗಳು ಕಾಲಾವಕಾಶ ಕೊಟ್ಟ ಮೇಲೆಯೂ ಪರಿಣಾಮವೇನಾಯಿತು?

"The total number of objections raised up to end of March 1959 and outstanding in the books of the Audit Office on 31st August 1959 was 46,355 of the money value of Rs. 26 crores. Objections pertaining to this period still remaining to be cleared on 30 June 1961 number 24,437 of the money value of Rs. 13 crores."

ಎರಡೂವರೆ ವರ್ಷಗಳ ನಂತರ ಬರುವುದು ಈ ಉತ್ತರ!! ಅಷ್ಟು ಹೊತ್ತಿಗೆ ಇನ್ನಷ್ಟು objectionಗಳು ಸೇರಿಕೊಂಡವು. Of these objections the Public Works Department alone is responsible for objections of the value of over Rs. 11 crores. ಈ ರೀತಿಯಾಗಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಬಹಳ ಕಷ್ಟಪಟ್ಟು ಸರ್ಕಾರದ ದೋಷಗಳನ್ನು ಎತ್ತಿ ತೋರಿಸಿದ್ದಾರೆ. ಅವರಿಗೆ ನ್ಯಾಯವಾಗಿ ಈ ಸಭೆ ಕೃತಜ್ಞರಾಗಿರಬೇಕೆಂದು

ಹೇಳುತ್ತೇನೆ. ಸರ್ಕಾರಕ್ಕೆ ಬೇಸರವಾಗುವಷ್ಟುಮಟ್ಟಿಗೂ ಅವರು ಒತ್ತಾಯಪಡಿಸುತ್ತಾ ಬಂದಿದ್ದಾರೆ. ಇಷ್ಟು ಅವ್ಯವಸ್ಥೆಗಳನ್ನಿಟ್ಟುಕೊಂಡಿರುವ ಸರ್ಕಾರ ಇನ್ನು ಹೊಸ ತೆರಿಗೆಗಳನ್ನು ಯಾವ ಎದೆಗಾರಿಕೆಯಿಂದ ಕೇಳುತ್ತಾರೋ ನನಗೆ ಗೊತ್ತಿಲ್ಲ. ಈಗ ಹೊಸದಾಗಿ ಮಂತ್ರಿಮಂಡಳವನ್ನು ಬೇರೆ ವಿಸ್ತಾರಮಾಡಿಕೊಂಡಿದ್ದಾರೆ, ಮಾಡಿಕೊಳ್ಳಲಿ, ಪರವಾಯಿಲ್ಲ. ಆದರೂ ಎಷ್ಟರಮಟ್ಟಿಗೆ ಮಾಡುವುದು ಶ್ರೀಮಾನ್ ಬಸಪ್ಪನವರು ಮಾತನಾಡುತ್ತಾ ಹೇಳಿದರು. ನಮ್ಮ ಆರ್ಥಿಕ ಮಂತ್ರಿಗಳು ಎಷ್ಟು ಕಳಕಳಿಯಿಂದ ಹೆಚ್ಚಿಗೆ ತೆರಿಗೆ ಕೊಡಿ ಎಂದು ಕೇಳುತ್ತಿದ್ದಾರೆ; ಕೊಟ್ಟು ಬಿಡೋಣ ಎಂದು ನಾವೂ ಅದಕ್ಕೇ ಕೇಳುವುದು—ವರ್ಷಗಟ್ಟಲೆ ಬಾಕಿ ಬಿದ್ದಿರುವುದನ್ನು ವಸೂಲು ಮಾಡುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ, ಅದನ್ನು ಮೊದಲು ಸರಿಮಾಡಿ ಎಂದು. ಗೋರವಾಲ ಅವರ ಕಮಿಟಿ ಬಂತಲ್ಲಾ, ಅದರಮೇಲೆ ಏನು ಮಾಡಿದಿರಿ? ಟ್ರೆಜರಿ ಬೆಂಚಿನಲ್ಲೇ ಅದರ ಮೇಲೆ ಭಿನ್ನಾಭಿಪ್ರಾಯ ಬಂತು. ಅದರ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಆಮೇಲೆ ಎ. ಜಿ. ರಾಮಚಂದ್ರರಾಯರ ಕಮಿಟಿ ರಿಪೋರ್ಟ್ ಬಂದಿದೆ. ಅದನ್ನು ಜಾರಿಗೆ ತರಲು ಯೋಚನೆ ಮಾಡುತ್ತಿದ್ದೇವೆಂದು ಹೇಳುತ್ತಲಿದ್ದಾರೆ, ಅಷ್ಟೆ. ನಮ್ಮ ನಾಯಕರು ಎಂಟು ಜನ ಮಂತ್ರಿಗಳಿರಲಿ ಸಾಕು ಎಂದರು. ಅದೂ ಬೇಡ 16 ಇಟ್ಟುಕೊಳ್ಳಲಿ. ಈಗ ಅದನ್ನೂ ಬಿಟ್ಟು 24 ಮಾಡಿಕೊಂಡು ಜೊತೆಗೆ ಇನ್ನೂ ಮೂರು ಬೇರೆ ಸೇರಿಸಿಕೊಂಡು, ಈಗ ಹೆಚ್ಚಿಗೆ ತೆರಿಗೆ ಕೊಡಿ ಎಂದು ಯಾವ ಬಾಯಲ್ಲಿ ಕೇಳುತ್ತಿದ್ದೀರಿ! ಈ ರಿಪೋರ್ಟ್‌ಗಳೆಲ್ಲಾ ಕೇವಲ ಪ್ರಚಾರ ಸಾಧನವಾಯಿತು, ಅಷ್ಟೆ. ನಮಗೆ ಈ ದೇಶದ ಸಂಪತ್ತು ಹೆಚ್ಚಬೇಕು. ಮುಂದಿನ ಜನಾಂಗದವರು ದೇಶದ ಅಭಿವೃದ್ಧಿಗೆ ಬೇಕಾದಂತಹ ಯೋಜನೆಗಳನ್ನು ಕೈಗೊಳ್ಳುವಂತೆ ಈಗಲೇ ಸರ್ಕಾರದವರು ಒಂದು ಮೇಲ್ಪಂಕ್ತಿಯಾಗಿರಬೇಕೆಂಬುದೇ ನಮ್ಮ ಆಶೆ. ಆದರೆ ಈಗ ಅಪವ್ಯಯವಾಗುತ್ತಿರುವ ಹಣದಿಂದ ಸುಮ್ಮಸುಮ್ಮನೆ ಪಾರ್ಟಿ ವೈಷಮ್ಯಗಳಾಗುತ್ತಿರುವುದು ಖಂಡಿತವಾಗಿ ನಮಗೆ ಇಷ್ಟವಿಲ್ಲ.

6-00 P.M.

ಇನ್ನು ದೇಶದ ಆರ್ಥಿಕ ಅಭಿವೃದ್ಧಿ ಯಾವುದರಿಂದ ಆಗುತ್ತದೆಂದರೆ ಸುಮ್ಮನೆ ತೆರಿಗೆಗಳನ್ನು ವಿಧಿಸುವುದರಿಂದ ಮಾತ್ರವಲ್ಲ. ಕೇವಲ ಅಲ್ಪ ಉಳಿತಾಯದಿಂದ ಮಾತ್ರವಲ್ಲವೆಂದು ನಾನು ಹೇಳುತ್ತೇನೆ. ನನ್ನ ಮಾನ್ಯ ಸ್ನೇಹಿತರು ಅನೇಕರು ಈ ವಿಚಾರದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಯಾವ ರೀತಿ ಇಂಡಿಯಾ ಸರ್ಕಾರದವರಿಂದ ನಮ್ಮ ಸರ್ಕಾರದವರು ಸಾಲ ಪಡೆದಿದ್ದಾರೆಂಬುದನ್ನು ನಮ್ಮ ಬಡ್ಜೆಟ್ಟಿನ ಅಂಕಿಅಂಶಗಳನ್ನು ನೋಡಿ ಒಂದು ಅಭಿಪ್ರಾಯ ಕೊಟ್ಟಿದ್ದಾರೆ. ದೇಶಾಭಿವೃದ್ಧಿ ಬರೀ ಅಲ್ಪ ಉಳಿತಾಯದಿಂದಲೇ ಆಗಲೀ ಅಥವಾ ತೆರಿಗೆಗಳನ್ನು ವಿಧಿಸುವುದರಿಂದಲೇ ಆಗಲೀ, ಸರ್ಕಾರದವರು ಕೆಲವು ವಿಚಾರಗಳನ್ನು ಪೂರ್ಣವಾಗಿ ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ಕೈಗೊಳ್ಳಬೇಕು. ಯಾವುದಾದರೂ ಈಗ ಒಂದು ಕಾರ್ಖಾನೆಯನ್ನು ಸ್ಥಾಪನೆಮಾಡಿದರೆ ಸಾಮಾನ್ಯವಾಗಿ ಆ ಫ್ಯಾಕ್ಟರಿ ಬಂಡವಾಳದ ಹತ್ತರಷ್ಟು ಉತ್ಪತ್ತಿ ಮಾಡಬಹುದು. ಆ ಉತ್ಪತ್ತಿಯಿಂದ ಮತ್ತೊಂದು ಫ್ಯಾಕ್ಟರಿಯನ್ನು ಬೇಕಾದರೆ ಸ್ಥಾಪನೆ ಮಾಡಬಹುದು. ಹೀಗೆಯೇ ಎಚ್. ಎಂ. ಟಿ. ಫ್ಯಾಕ್ಟರಿಯವರು ತಮಗೆ ಬರತಕ್ಕ ಉತ್ಪತ್ತಿಯಿಂದ ಮತ್ತೊಂದು ಫ್ಯಾಕ್ಟರಿಯನ್ನು ಸ್ಥಾಪಿಸುತ್ತಿದ್ದಾರೆ. ಅಂದಮೇಲೆ ಒಂದು ಹಂತ ಮುಗಿದ ಕೂಡಲೆ ಅದನ್ನು ಹತ್ತರಷ್ಟು ಮಾಡುತ್ತಾರೆ. ನಮ್ಮ ದೇಶದಲ್ಲಿ ಸಾಮಾನ್ಯವಾಗಿ 79 ಕೈಗಾರಿಕೆಗಳಿದ್ದು 690 ಲಕ್ಷ ರೂಪಾಯಿಗಳ ಬಂಡವಾಳವಿದೆ. ಕೇವಲ 14-15 ಕೈಗಾರಿಕೆಗಳಿಂದ ಮಾತ್ರ ಈ ರೀತಿ ಉತ್ಪತ್ತಿ ಬಂದು, ಉಳಿದ ಸಂಸ್ಥೆಗಳಿಂದ ಇಲ್ಲವೇ ಇಲ್ಲ. ಅವು ವಿಪರೀತ ನಷ್ಟಕ್ಕೀಡಾಗಿರುತ್ತವೆ. ಹೀಗೆ 690 ಲಕ್ಷಕ್ಕೆ ಎಷ್ಟು ವರ್ಷ ಬಡ್ಡಿ ಕೊಡುವುದಕ್ಕಾಗುತ್ತದೆ? ಸರ್ಕಾರದವರು ಇತ್ತೀಚೆಗೆ ಇಂತಹ ಸಂಸ್ಥೆಗಳನ್ನು ನಷ್ಟದಲ್ಲಿ ನಡೆಸುತ್ತಿದ್ದಾರೆಂದು ಹೇಳಿದರೆ ಏನೂ ತಪ್ಪಾಗಲಾರದು. ನಾವು ವಿಪರೀತವಾಗಿ ವರ್ಷದಿಂದ ವರ್ಷಕ್ಕೆ ಬಡ್ಡಿಯನ್ನು ತೆರುತ್ತಿರುವುದೇ ಆಗಿದೆ. ಉದಾಹರಣೆಗೆ ರೇಷ್ಮೆ ಕೈಗಾರಿಕೆಯನ್ನು ತೆಗೆದುಕೊಳ್ಳೋಣ. ಅದರಲ್ಲಿ ವರ್ಷೇ ವರ್ಷೇ ನಷ್ಟವನ್ನು ಪಡೆದುಕೊಂಡೇ ಆ ಕೈಗಾರಿಕೆಯನ್ನು ನಡೆಸುತ್ತಿದ್ದೇವೆ. ಕೇವಲ ವರ್ಷೇ ವರ್ಷೇ ಸುಮಾರು ಒಂದೂವರೆ ಅಥವಾ ಮೂರು ಲಕ್ಷ ರೂಪಾಯಿಗಳವರೆಗೂ ನಷ್ಟಪಟ್ಟುಕೊಂಡು ಹೋಗುತ್ತಿದ್ದರೆ ಸಾಮಾನ್ಯ ಮನುಷ್ಯರು ಯಾವ ರೀತಿ ಜೀವನ ಮಾಡಬೇಕು? ಬಡರೈತರು ಯಾವ ರೀತಿ ಜೀವನಮಾಡಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಡವೇ? ಜನಗಳಿಗೆ ರೇಷ್ಮೆ ಮಗ್ಗಗಳನ್ನು ಹಾಕಿಕೊಳ್ಳುವುದಕ್ಕೂ ಸರ್ಕಾರದ ಪ್ರೋತ್ಸಾಹವಿಲ್ಲ. ಒಂದು ಮಗ್ಗಕ್ಕೆ Power ಕೊಡಬೇಕಾದರೆ ತೊಂದರೆ. ಅದಕ್ಕಾಗಿ ಇಲಾಖೆಗೆ ಎಷ್ಟೋ ವರ್ಷಗಳ ತನಕ ತಿರುಗಾಡಬೇಕಾಗುತ್ತದೆ. ಇಂತಹ ಕಿರುಕುಳವನ್ನು ಕೊಡುತ್ತಾರೆ. ಸರ್ಕಾರದಿಂದ ಹಣ ಕೊಟ್ಟು ಬಡ್ಡಿ ಇಲ್ಲದೆಯೇ ಅದಕ್ಕೆ ಲಾಸ್ ತೋರಿಸುತ್ತಿದ್ದಾರೆ. ಅಂತಹ ಕೈಗಾರಿಕೆಗಳನ್ನು ಇವರು ಏತಕ್ಕೆ ಇಟ್ಟುಕೊಳ್ಳಬೇಕು. ಖಾಸಗೀ ಜನಗಳಿಗೆ ಇಂತಹ ಕೈಗಾರಿಕೆಗಳನ್ನು ಕೊಡಲಿ. ಅವರು ಚೆನ್ನಾಗಿ ನಡೆಸಿಕೊಂಡು ಬರುತ್ತಾರೆ. ಯಾವುದಾದರೂ ರಿಸರ್ಚ್ ಇನ್‌ಸ್ಟಿಟ್ಯೂಷನ್‌ಗಳನ್ನು ಬೇಕಾದರೆ ಸ್ಥಾಪಿಸುತ್ತಾರೆಂದು ನಾನು ಹೇಳುತ್ತೇನೆ. ಇನ್ನು ಸರ್ಕಾರದವರು ಕೊಟ್ಟಿರತಕ್ಕ ವರದಿಯನ್ನು ನೋಡಿದರೆ ಸ್ಟೋರ್ಸಿನಲ್ಲಿ ಕೋಟಿಗಟ್ಟಲೆ ನಷ್ಟವಾಗುತ್ತಿದೆ. ಉದಾಹರಣೆಗೆ ವಿದ್ಯುಚ್ಛಕ್ತಿ ಇಲಾಖೆಯ ವಿಷಯವನ್ನು ಹೇಳಬೇಕಾದರೆ ಹೆಚ್ಚು ಕಡಮೆ ಕೋಟಿಗಟ್ಟಲೆ ರೂಪಾಯಿಗಳಷ್ಟು ಸ್ಟೋರ್ಸ್ ಇಲಾಖೆಯಲ್ಲಿ ಲೆಕ್ಕ ಸಿಕ್ಕುತ್ತಿಲ್ಲ. ಏನು ಬೇಕೋ ಅದನ್ನು ತರಿಸಿಲ್ಲ, ಯಾವುದು ಬೇಡವೋ ಅದನ್ನು ತರಿಸಿಕೊಂಡಿದ್ದಾರೆ. ಇದರಿಂದ ಎಷ್ಟು ಬಡ್ಡಿಯಾಗುತ್ತದೆಂಬುದನ್ನು ಸರ್ಕಾರ ಯೋಚನೆ ಮಾಡಬೇಕು. ಒಂದು ಕೋಟಿ ರೂಪಾಯಿಗಳಷ್ಟು ಮಾಲು ನಷ್ಟವಾಗಿರುತ್ತದೆ. ಇನ್ನೊಬ್ಬರಿಗೆ ಕೊಡುವುದೂ ಇಲ್ಲ. ಇವರೂ ಸರಿಯಾಗಿ ಆಡಳಿತವನ್ನು ನಡೆಸಲಾರರು. ಇದು ಆರ್ಥಿಕ ತಜ್ಞರು ನಡೆಸತಕ್ಕ ರೀತಿ ನೀತಿಯೇ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಬಿಸಿಲು ಮಳೆ ಗಾಳಿಗಳಿಂದ ಸುಮಾರು ಎಷ್ಟೋ ಕೋಟಿ ರೂಪಾಯಿಗಳಷ್ಟು ಸಾಮಾನುಗಳು ಹೋಗಿವೆ ಎಂದು ಹೇಳಿದರೂ ಅದೇನೂ ತಪ್ಪಾಗಲಾರದು. ಇಂತಹ ಅನ್ಯಾಯಗಳು ಆ ಇಲಾಖೆಯಲ್ಲಿ ನಡೆಯುತ್ತಿವೆ. ಈಗ ಶರಾವತಿ ಯೋಜನೆಗೆ 20 ಕೋಟಿ ಇದ್ದುದು 28 ಕೋಟಿಯಾಗಿದೆ. ಒಂದು ವರ್ಷ ಮುಂಚೆಯೇ ಪೂರ್ಣವಾಗಿ ಬೇಕಾದಷ್ಟು ಇದರಿಂದ ವರಮಾನ ಬರುತ್ತದೆಂದು ಹೇಳಿದರು. ಷೆಡ್ಯೂಲ್ಡ್ ಪ್ರಕಾರ ಅದನ್ನು ಮುಗಿಸುತ್ತೇವೆಂದು ಏತಕ್ಕೋಸ್ಕರ ಈ ವಿಧಾನಸಭೆಯಲ್ಲಿ ಹೇಳಿದರು? ಅದರಲ್ಲೂ 1962ನೇ ಡಿಸೆಂಬರ್ ಹೊತ್ತಿಗೆ ಮುಗಿಸು

(ಶ್ರೀ ಬಿ. ಹುಚ್ಚೇಗೌಡ)

ತ್ತೇವೆಂದು ಹೇಳಿದರು. ಇವೊತ್ತಿನ ದಿವಸ ಏನಾಗಿದೆಯೆಂದರೆ 1963ನೇ ಡಿಸೆಂಬರ್ ಹೊತ್ತಿಗೆ ಎಂದು ಹೇಳಿದ್ದಾರೆ. ರಾಜ್ಯಪಾಲರ ಭಾಷಣದಲ್ಲೂ ಹಾಗೆಯೇ ಹೇಳಿದ್ದಾರೆ. ಹೋದ ವರ್ಷದ ಅವರ ಭಾಷಣದಲ್ಲಿ 1962ನೇ ಡಿಸೆಂಬರ್ ಹೊತ್ತಿಗೆ ಆ ಯೋಜನೆ ಪೂರ್ಣವಾಗುತ್ತದೆಂದು ಹೇಳಿದ್ದರು. ಈಗ 1963ನೇ ಡಿಸೆಂಬರ್ ಹೊತ್ತಿಗೆ ಆದಾಗುತ್ತದೆಂದು ಹೇಳಿದ್ದಾರೆ.

ಈಗ ಈ ಯೋಜನೆ ೬೩ನೇ ಇಸವಿ ಮುಗಿಯುವುದರೊಳಗೇ ಆಗುತ್ತದೋ ಅಥವಾ ೬೩ನೇ ಇಸವಿ ಯಾದ ಮೇಲೆ ೬೪ನೇ ಇಸವಿ ಡಿಸೆಂಬರ್ ಹೊತ್ತಿಗಾದರೂ ಈ ಯೋಜನೆ ಮುಗಿಯುತ್ತದೋ ಇಲ್ಲವೋ ಎಂಬ ಸಂಶಯ ಬಂದಿದೆ ಎಂಬುದಾಗಿ ನಾನು ಘಂಟಾಘೋಷವಾಗಿ ಹೇಳುತ್ತೇನೆ. ಈ ವರದಿಯಲ್ಲಿ ಇನ್ನೊಂದು ವಿಷಯವನ್ನು ಹೇಳಿದ್ದಾರೆ. ತುಂಗಭದ್ರಾ ಪ್ರಾಜೆಕ್ಟ್ ಮೇ ತಿಂಗಳಲ್ಲಿ ಆಗುತ್ತದೆ, ಭದ್ರಾ ಜೂನ್‌ಗೆ ಆಗುತ್ತದೆ ಎಂಬುದಾಗಿ ಹೇಳಿದರು. ಅದೆಲ್ಲವೂ ಬರೀ ಮಾತಿನ ಮೇಲೆ ವಾಗ್ದಾನದ ಮೇಲೆ ಇವರು ಹೇಳುತ್ತಿದ್ದಾರೆಯೇ ಹೊರತು ಕಾರ್ಯತಃ ಯಾವುದನ್ನೂ ಇವರು ಮಾಡಿ ಮುಗಿಸಿಲ್ಲ. ಸುಮ್ಮನೆ ಈ ಕಾರ್ಯಗಳನ್ನು ಮುಂದಕ್ಕೆ ಹಾಕುತ್ತಿದ್ದಾರೆ. ಇದರಿಂದ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮವಾಗಲಾರದು, ಅದಕ್ಕೆ ಧಕ್ಕೆತರುವ ಪರಿಸ್ಥಿತಿಯನ್ನು ಈ ಸರ್ಕಾರ ಮಾಡುತ್ತಿದೆಯೆಂದು ನಾನು ಹೇಳುತ್ತೇನೆ. ಇಂಥಾ ಸಂದರ್ಭದಲ್ಲಿ ಮಂತ್ರಿಮಂಡಲದ ಸಂಖ್ಯೆಯನ್ನು ಬೇರೆ ಈಗ ಹೆಚ್ಚಿಸಿದ್ದಾರೆ. ವಿಧಾನಸೌಧದಲ್ಲಿ 27 ಕೊಠಡಿಗಳನ್ನು ಬಿಡುಗಡೆ ಮಾಡಿಸುವುದು ಹೇಗೆ ಎಂದು ನಾನು ಕೇಳುತ್ತೇನೆ. ಇದ್ದ ಮಂತ್ರಿಗಳು ಅವರವರ ಕೊಠಡಿಗಳಿಂದ ಈಗಾಗಲೇ ಬಿಡುಗಡೆಯಾಗಿದ್ದಾರೋ ಇಲ್ಲವೋ ಗೊತ್ತಿಲ್ಲ. ಎಷ್ಟೋ ಜನ ಡೆಪ್ಯುಟಿ ಮಂತ್ರಿಗಳು ತಮ್ಮ ಕಾರು ಬಾಕಿ ಕೊಡಬೇಕಾದರೆ ಇವೊತ್ತಿನರೆಗೂ ತಕರಾರು ಇದೆ.

ಇನ್ನು ಕೈಗಾರಿಕೆಗಳ ವಿಷಯದಲ್ಲಿ ಹೇಳಬೇಕಾದರೆ ಈ ಸರ್ಕಾರದವರು ಏನೂ ಮಾಡುತ್ತಿಲ್ಲ. ನಮ್ಮ ಸಂಸ್ಥಾನದಲ್ಲಿ ಸಿಮೆಂಟ್ ಫ್ಯಾಕ್ಟರಿ ತೆಗೆದಿದ್ದಾರೆ. ಇದಕ್ಕೆ ಎರಡು ಸಾವಿರ ಕಿಲೊವಾಟ್ ಪವರ್ ಕೊಡುತ್ತೇವೆಂಬ ಭರವಸೆ ಕೊಟ್ಟರು. ಈ ಭರವಸೆ ಕೊಟ್ಟು ಈಗಾಗಲೇ ಎರಡು ವರ್ಷಗಳಾಗಿವೆ. ಈಗ ಫ್ಯಾಕ್ಟರಿ ಮುಗಿದಿರುವ ಹೊತ್ತಿಗೆ ಪವರ್ ಸಾಕಷ್ಟು ಇಲ್ಲವೆಂದು ಹೇಳಿದ್ದಾರೆ. ಈ ರೀತಿ ಹೇಳುವುದು ಖಂಡಿತವಾಗಿ ನ್ಯಾಯವಲ್ಲವೆಂದು ನಾನು ಹೇಳುತ್ತೇನೆ,

ಶ್ರೀ ಬಿ. ಡಿ. ಜತ್ತಿ.—ಥರ್ಮಲ್ ಸ್ಟೇಷನ್ ಒಂದನ್ನು ಇತ್ತೀಚೆಗೆ ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಈಗ 6 ತಿಂಗಳುಗಳಿಂದ ಆ ಕೈಗಾರಿಕೆಯಲ್ಲಿ ಅಷ್ಟು ನಷ್ಟವಾಗಿರುವುದಕ್ಕೆ ಯಾರು ಜವಾಬ್ದಾರರು ? ಇವೊತ್ತು ಮಂಡ್ಯದಲ್ಲಿ ಪೇಪರ್ ಫ್ಯಾಕ್ಟರಿಗೆ ಸುಮಾರು 2 ಸಾವಿರ ಕಿಲೋ ವ್ಯಾಟ್ಸ್‌ಗಳನ್ನು ಕೊಟ್ಟಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಅದರಿಂದ ಪ್ರಯೋಜನ ವಾಯಿತು, ಉತ್ಪತ್ತಿಯಾದುದನ್ನು ಇನ್ನೂ ಅವರು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಫ್ಯಾಕ್ಟರಿ ರಿಕಾರ್ಡ್ಸ್‌ನ್ನು ಅವರು ಕೂಡಲೇಯಾರಿಗೂ ಒದಗಿಸುವಂತಿಲ್ಲ. ಅಷ್ಟು ಜಾಗ್ರತೆ ಕೊಡುವಹಾಗಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಎಲ್ಲಿ ಬೇಕೋ ಅಲ್ಲಿಗೆ ಸಹಾಯ ಕೊಟ್ಟಿದ್ದೀರಿ. ಇನ್ನುಳಿದ ಕಡೆ ಹಾಗೆಯೇ ಬಿಟ್ಟಿರಿ.

ಇನ್ನು ವಿದ್ಯಾಭ್ಯಾಸದ ವಿಷಯದಲ್ಲಿ ಹೇಳುವುದಾದರೆ ಇತ್ತೀಚೆಗೆ ಮಕ್ಕಳ ಮೇಲೆ ನಿಮ್ಮ ಪ್ರಯೋಗ ನಡೆಸುತ್ತಿದ್ದೀರಿ. ಪ್ರೈಮರಿ, ಮಿಡಲ್, ಹೈಸ್ಕೂಲು, ಯೂನಿವರ್ಸಿಟಿ. ಹೀಗೆ ಯಾವ ಸೆಕ್ಷನ್ನಿನಲ್ಲಿ ನೋಡಿದರೂ ಕರಿಕ್ಯುಲಮ್ ಸರಿಯಾಗಿ ಮಾಡಲೇ ಇಲ್ಲ. ಈಗ ನಡೆಯುತ್ತಿರುವುದು ಯೂನಿವರ್ಸಿಟಿಯಲ್ಲಿ ವೈಸ್ ಚಾನ್ಸಲರ್ ಆಡಳಿತ. ಅದು ಸರಿಯೇ ತಪ್ಪೇ ಎಂದು ನಾನು ಹೇಳುವುದಿಲ್ಲ. ಆದರೆ ಈಗ ಅದನ್ನು ಬದಲಾಯಿಸಬೇಕೆಂದು ಪ್ರಯೋಗಮಾಡುತ್ತಿದ್ದೀರಿ. ಆಕಡೆಗೆ ಸರ್ಕಾರದ ಹೆಚ್ಚು ಗಮನ ಕೊಡಬೇಕಾಗಿದೆ. ನಮ್ಮ ದೇಶದಲ್ಲಿ ಮೊದಲಿನಿಂದಲೂ ಮಿಡಲ್ ಸೆಕ್ಷನ್ನಿಗೆ ಫೀಸ್ ಇಲ್ಲ. ಈ ವರ್ಷದಿಂದ ಅದನ್ನು ಬೇರೆ ತಂದಿದ್ದೀರಿ. ತಮ್ಮ ಒಂದು ಉದ್ಧಾರಕ್ಕೋಸ್ಕರ ಅದನ್ನು ತಂದಿದ್ದೀರೋ ಏನೋ ಗೊತ್ತಿಲ್ಲ. ಹಿಂದೆ ಬ್ಯೂರೋಕ್ರಟಿಕ್ ಸರ್ಕಾರ ಏನಿತ್ತೋ ಅದು ಒಂದು ಪ್ರತಿಗಾಮಿ ಸರ್ಕಾರವಾಗಿದ್ದರೂ ಕಂಪಲ್ಸರಿ ಎಜುಕೇಷನ್ ಇರಬೇಕೆಂದು ತಂದಿತ್ತು. ಈ ರೀತಿ ಫೀಸ್ ಅವರು ಹಾಕಿರಲಿಲ್ಲ. ಮಿಡಲ್ ಸೆಕ್ಷನ್ನಲ್ಲಿ ಆಗ 8 ವರ್ಷಗಳಿಗೆ ಫೀಇಲ್ಲವೆಂದು ಮಾಡಿತ್ತು. ಈ ವರ್ಷದಿಂದ ಅದನ್ನು ತಳ್ಳಿದ್ದೂ ಆಯಿತು.

ಎಲ್ಲಿ ನೋಡಿದರೂ ಕೂಡ ರಾಜಕೀಯ ಇದ್ದೇ ಇದೆ. ಒಂದು ಸ್ಕಾಲರ್‌ಷಿಪ್ ಸ್ಯಾಂಕ್ಷನ್ ಮಾಡಿದ್ದನ್ನು ಮತ್ತೊಬ್ಬರಿಗೆ ಕೊಟ್ಟುಬಿಟ್ಟರು. ಸಿವಿಲ್ ಅಡ್ಮಿನಿಸ್ಟ್ರೇಷನ್ನಿಗೆ ೧೯೫೭-೫೮ ರಿಂದ ೧೯೬೦-೬೧ರ ವರೆಗೆ ೧೨ ಕೋಟಿ ರೂಪಾಯಿಗಳು ಖರ್ಚು ಜಾಸ್ತಿಯಾಗಿವೆ. ಈ ವರ್ಷ ಇನ್ನೂ ಜಾಸ್ತಿಯಾಗಿದೆ. ಪ್ರತಿ ವರ್ಷ ನಾಲ್ಕು ಕೋಟಿ ರೂಪಾಯಿಗಳು ಜಾಸ್ತಿಯಾಗುತ್ತಿವೆ. ಇದರ ಜೊತೆಗೆ ದೇಶದ ಆರ್ಥಿಕ ಸ್ಥಿತಿ ಉತ್ತಮವಾಗಿದೆಯೇ? ಸಾಮಾನ್ಯ ಮನುಷ್ಯನ ಆದಾಯ ವೆಚ್ಚ ಇದೇರೀತಿ ನಡೆಯುತ್ತಿದೆಯೇ ಎಂಬುದನ್ನು ನೋಡಬೇಕು.

ಈಗ ಹಳ್ಳಿಗಾಡಿನಲ್ಲಿ ಫಿಷರೀಸ್ ಇಂಟ್ರಡ್ಯೂಸ್ ಮಾಡಿದ್ದಾರೆ. ಅದರಿಂದ ಅಷ್ಟು ಪ್ರಯೋಜನವಿಲ್ಲ. ಸೀಕೋರ್ಸ್‌ಗಳಲ್ಲಿ ಅದನ್ನು ಇಂಟ್ರಡೂಸ್ ಮಾಡಿದರೆ ಪರವಾಯಿಲ್ಲ. ಹಳ್ಳಿಗಳಲ್ಲಿರತಕ್ಕ ಕೆರೆ ಕಟ್ಟೆಗಳಲ್ಲಿ ಮೀನು ಹಿಡಿಯಲು ಲೈಸನ್ಸ್ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಅಲ್ಲಿ ಲೈಸನ್ಸ್ ತೆಗೆದುಕೊಳ್ಳುವವರು ಯಾರು ? ಮೀನು ಹಿಡಿಯುವವರು ಯಾರು ? ಇದನ್ನೆಲ್ಲಾ ಜನಗಳಿಗೆ ಕಿರುಕುಳಕೊಡುವುದಕ್ಕೆ ಮಾಡುತ್ತಿದ್ದಾರೆಯೇ ಹೊರತು ಮತ್ತೇನೂ ಇಲ್ಲ. ಇದರಿಂದ ಸರ್ಕಾರಕ್ಕೆ ಯಾವ ಉತ್ಪತ್ತಿಯೂ ಬರುವುದಿಲ್ಲ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ಅಲ್ಲಿ ಮೀನುಗಳು ಹೆಚ್ಚು ಹೆಚ್ಚಾಗಿ ಸಿಕ್ಕುತ್ತಿವೆ. ಅವುಗಳನ್ನು ಉಪಯೋಗ ಮಾಡಿಕೊಳ್ಳುವುದು ಬೇಡವೇ ?

ಬಿ. ಹುಚ್ಚೇಗೌಡ.—ಎಲ್ಲಾ ಕೆರೆಯಲ್ಲಿ ಇರುವ ಮೀನುಗಳನ್ನು ಉಪಯೋಗಮಾಡಿಕೊಳ್ಳಿ. ಆದರೆ ಖರ್ಚಿಗೆ ಸರಿಯಾದ ಉತ್ಪತ್ತಿಯನ್ನು ತೋರಿಸಿ. ಆಗ ನಾನು ಒಪ್ಪಿಕೊಳ್ಳುತ್ತೇನೆ. ೧೯೫೮ನೇ ಇಸವಿಯ ಪೋಲೀಸ್ ಅಡ್ಮಿನಿಸ್ಟ್ರೇಷನ್ ರಿಪೋರ್ಟಿನ ವಿಷಯದಲ್ಲಿ ಸರ್ಕಾರದ ಆರ್ಡರು ೩-೧-೧೯೬೨ರಲ್ಲಿ ಆಗಿದೆ. ಆದು ೩-೭-೧೯೬೨ರಲ್ಲಿ ಪ್ರಿಂಟ್ ಆಗಿದೆ. ಲೇಬರ್ ಡಿಪಾರ್ಟ್‌ಮೆಂಟಿನ ರಿಪೋರ್ಟಿನ ವಿಷಯದಲ್ಲಿ ೩-೧-೧೯೬೧ರಲ್ಲಿ ಸರ್ಕಾರದ ಆರ್ಡರು ಆಗಿದೆ. ಆದು ೧೦-೧-೧೯೬೨ರಲ್ಲಿ ಪ್ರಿಂಟ್ ಆಗಿದೆ. ಎರಡು ವರ್ಷ ಆಗಿದೆ. ಈಗ ೧೯೬೨ನೇ ಜುಲೈ ತಿಂಗಳಿನಲ್ಲಿ ಅದು ನಮ್ಮ ಕೈಗೆ ಬಂದಿದೆ. ಈರೀತಿ ಡಿಲೇ ಆಗುವುದಕ್ಕೆ ಸಾಕಾದಷ್ಟು ನ್ಯಾಯವಾದ ಕಾರಣಗಳು ಇದ್ದರೆ ಪರವಾಯಿಲ್ಲ. ಇಲ್ಲದೆ ಹೋದರೆ ಸುಮ್ಮನೆ ಇಷ್ಟೊಂದು ಡಿಲೇ ಮಾಡಿ ಅವುಗಳನ್ನು ಕೊಡುವುದು ಸರಿಯಲ್ಲ. ಈಗ

ಸರ್ಕಾರದವರು ಬೇರೆ ಬೇರೆ ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದಾರೆ. ಆ ಪ್ರಾಜೆಕ್ಟುಗಳ ಪೈಕಿ ಕೆಲವು ಪ್ರಾಜೆಕ್ಟುಗಳ ಕೆಲಸ ಮುಗಿಯುತ್ತಾ ಬಂದಿದೆ. ಸಿಬ್ಬಂದಿ ಉಳಿಯುತ್ತವೆ. ಅದನ್ನು ಬೇರೆ ಕಡೆ ಕೆಲಸ ಮಾಡುವುದಕ್ಕೆ ಹಾಕಬೇಕು. ಹಾರಂಗಿ, ಮಲಪ್ರಭಾ, ಹೇಮಾವತಿ, ಕಂಬದಕಡ, ಅಪ್ಪರ್ ಕೃಷ್ಣಾ-ಹೀಗೆ ಈ ಎಲ್ಲಾ ಪ್ರಾಜೆಕ್ಟುಗಳ ಕೆಲಸಗಳೂ ಆಗಬೇಕಾಗಿವೆ. ಯಾವುದೂ ಮುಗಿದಿಲ್ಲ. ಎಲ್ಲಾ ಕಡೆಯು ತಕರಾರುಗಳು ಫೈಸಲಾಗಿಲ್ಲ. ಯಾವುದನ್ನು ಕಟ್ಟಿ ಮುಗಿಸುವಂತಿಲ್ಲ. ಸರ್ಕಾರ ಯಾವುದರಲ್ಲೂ ಪ್ರಗತಿ ಮಾರ್ಗದಲ್ಲಿ ನಡೆಯುವ ಹಾಗಿಲ್ಲ. ಕಾಂಗ್ರೆಸ್ಸಿನಲ್ಲಿರತಕ್ಕ ಹೊಲಸಿನಿಂದ ಕೇಂದ್ರದಲ್ಲಿ ಮಂತ್ರಿಗಳು ಪ್ರಭಾವ ಬೀರುವ ಹಾಗಿಲ್ಲ. ಸದ್ಯ ಅವರು ಅಧಿಕಾರದಲ್ಲಿ ಉಳಿದುಕೊಂಡರೆ ಸಾಕು. ರಸ್ತೆ ಸಾರಿಗೆ ವಿಷಯವನ್ನು ತೆಗೆದುಕೊಂಡರೆ ಉತ್ಪತ್ತಿ 6 ಕೋಟಿ ರೂಪಾಯಿ ಚಿಲ್ಲರೇ ಬಂದರೆ ಖರ್ಚು 6 ಕೋಟಿ ರೂಪಾಯಿ ಚಿಲ್ಲರೆ ಬರುತ್ತದೆ. ಐದು ಲಕ್ಷ ರೂಪಾಯಿ ಮಾತ್ರ ಲಾಭ. ಬಡ್ಡಿ ಹೇಗೆ ಬರಬೇಕು? ಏತಕ್ಕೋಸ್ಕರ ಹೀಗೆ ಆಗುತ್ತದೆ? ಇವರು ಓಡಾಡಬೇಕಾದರೆ ಎಲ್ಲಾ ಟಾರ್ ರೋಡುಗಳು, ಸಿಮೆಂಟ್ ರೋಡುಗಳು. ಮನಪಾಲಿ ರೂಟುಗಳಲ್ಲೆಲ್ಲಾ ಹೊಸ ಬಸ್ಸುಗಳನ್ನು ಓಡಾಡಿಸುತ್ತಿದ್ದಾರೆ. ಇವುಗಳ ಮೇಲೆ ಬೇಕಾದಷ್ಟು ದುಡ್ಡನ್ನು ಹಾಕಿದ್ದಾರೆ. ಈಗ ರೋಡ್ ಟ್ರಾನ್ಸ್‌ಪೋರ್ಟಿನಲ್ಲಿ ಹೊಸ ಬಸ್ಸು ಹೆಚ್ಚು ಇರುವುದರಿಂದ ಖರ್ಚು ಕಡಿಮೆ ಆಗಬೇಕು. ಇಷ್ಟೆಲ್ಲಾ ಇದ್ದರೂ ಕೂಡ ಇದರಿಂದ ಲುಕ್ಸಾನು ಆಗುತ್ತಿದೆ. ಸರ್ಕಾರದವರು ಬಸ್ಸುಗಳನ್ನು ಓಡಿಸುತ್ತಿರುವ ರೂಟುಗಳಲ್ಲಿ ಯಾರಾದರೂ ಪ್ರೈವೇಟ್ ಪಾರ್ಟಿ ಬಸ್ಸುಗಳನ್ನು ಓಡಿಸುತ್ತಿದ್ದರೆ ಅವನಿಗೆ ವರ್ಷಕ್ಕೆ 6 ಸಾವಿರ ರೂಪಾಯಿ ಆದಾಯಬಂದಿದೆ. ಇಕ್‌ಕಂಟಾಕ್ಸ್ ಎಂದು ಹಾಕುತ್ತೀರಿ. ಇವರು ಏನು ಕೆಲಸ ಮಾಡಿದ್ದಾರೆ ಎಂದು ನಾನು ಕೇಳುತ್ತೇನೆ. ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿರತಕ್ಕ ಸಿಬ್ಬಂದಿಯನ್ನು ನೋಡಿದರೆ ಪಂಜಾಬ್ ಮತ್ತು ಇತರ ದೇಶಗಳಲ್ಲಿ ಒಂದು ಬಸ್ಸಿಗೆ ಐದಾರು ಜನ ಇದ್ದರೆ ಇಲ್ಲಿ ಒಂಬತ್ತು ಜನ ವರ್ಕ್‌ಔಟ್ ಆಗುತ್ತದೆ. ಹೀಗಾದರೆ ಉತ್ಪತ್ತಿ ಬರುವುದು ಹೇಗೆ? ಸರ್ಕಾರಿ ಬಸ್ಸುಗಳಲ್ಲಿ ಇತ್ತೀಚೆಗೆ ಆಕ್ಸಿಡೆಂಟಂತೂ ಲೆಕ್ಕವೇ ಇಲ್ಲ. ಹಾಗಾಗುತ್ತಿದೆ. ಹಿಂದಿದ್ದ ಟ್ರಾನ್ಸ್‌ಪೋರ್ಟ್ ಮಂತ್ರಿಗಳು ಹೇಳುತ್ತಿದ್ದರೂ ಒಬ್ಬೊಬ್ಬ ಕಂಡಕ್ಟರು 3 ಸಾವಿರ ರೂಪಾಯಿಗಳವರೆಗೆ ಬಾಕಿ ಕೊಡಬೇಕೆಂದು. ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಗೆ ಸಂಬಂಧಪಟ್ಟ ಆಡಿಟ್ ರಿಪೋರ್ಟಿನಲ್ಲಿ ಲಕ್ಷಾಂತರ ರೂಪಾಯಿಗಳ ಬಾಕಿ ಇದೆ. ಕಂಡಕ್ಟರು ಬೆಳಗ್ಗೆ ಬಸ್ಸಿನಲ್ಲಿ ಹೋದವನು ಆ ದಿನ ಸಾಯಂಕಾಲ ಅವನು ಬಸ್ ಚಾರ್ಜಿನಿಂದ ಬಂದ ಹಣವನ್ನು ಆಫೀಸಿನಲ್ಲಿ ಕೊಡುವುದು ಬೇಡವೇ? ಒಬ್ಬ ಕಂಡಕ್ಟರು ಮೂರು ಸಾವಿರ ರೂಪಾಯಿಗಳ ಬಾಕಿಯನ್ನು ಉಳಿಸಿಕೊಂಡಿದ್ದಾನೆ ಎಂದು ಹೇಳಿದರೆ ಇದು ನಾಚಿಗೆಗೇಡು. ಅವರು ಅಷ್ಟೊಂದು ದುಡ್ಡು ಉಳಿಸಿಕೊಳ್ಳುವ ವರೆವಿಗೂ ಇವರು ಏನು ಮಾಡುತ್ತಿದ್ದರು? ಇಂಥಾ ಮಂತ್ರಿಗಳು ಅಧಿಕಾರದಲ್ಲಿರುವುದಕ್ಕಿಂತ ಮೊದಲು ರಾಜೀನಾಮೆ ಕೊಡಿ ಎಂದು ಹೇಳಬೇಕಾಗಿತ್ತು. ಯಾವ ವಿಚಾರವನ್ನೇ ಆಗಲಿ ಹೇಳುವುದಕ್ಕೂ ಒಂದುಮಿತಿ ಇರಬೇಕು. ಇದನ್ನೆಲ್ಲಾ ನೋಡಿದರೆ ಆಡಳಿತದಲ್ಲಿ ದಕ್ಷತೆ ಎಷ್ಟರಮಟ್ಟಿಗೆ ಇದೆ ಎಂಬುದು ಗೊತ್ತಾಗುತ್ತದೆ. ಒಬ್ಬ ಖಾಸಗೀ ಮನುಷ್ಯ ಬಸ್ಸನ್ನು ನಡೆಸುತ್ತಾ ಇದ್ದು ಈ ರೀತಿ ಮಾಡಿದ್ದರೆ ಅವನು ಉಳಿಯುತ್ತಾ ಇದ್ದನೇ ಎಂದು ನಾನು ಕೇಳುತ್ತೇನೆ. ಅವನು ಏನು ಮಾಡುತ್ತಿದ್ದ ಎಂದರೆ ಆವೊತ್ತು ಬೆಳಿಗ್ಗೆ ಬಸ್ಸಿನಲ್ಲಿ ಹೋದ ಕಂಡಕ್ಟರು ಆವೊತ್ತು ಸಾಯಂಕಾಲ ಬಸ್ ಚಾರ್ಜಿನಿಂದ ಕಲೆಕ್ಷನ್ ಆದ ಹಣವನ್ನು ಆಫೀಸಿನಲ್ಲಿ ಕೊಡದೆ ಇದ್ದ ಪಕ್ಷದಲ್ಲಿ ಆ ಕಂಡಕ್ಟರು ನಾಳೆ ಕೆಲಸಕ್ಕೆ ಬರುವ ಹಾಗಿಲ್ಲ. ಹಾಗೆ ಮಾಡುತ್ತಿದ್ದ. ಸರ್ಕಾರದವರು ಈಗಲಾದರೂ ಇಂಥಾ ಲೋಪದೋಷಗಳನ್ನು ಸರಿಪಡಿಸಬೇಕು. ಆದಷ್ಟು ಜಾಗ್ರತೆ ನಮ್ಮ ದೇಶದಲ್ಲಿ ಪ್ರಾಜೆಕ್ಟುಗಳ ಕೆಲಸ ಆಗಬೇಕು. ಅವುಗಳ ಪ್ರಯೋಜನ ನಮಗೆ ಬೇಗ ದೊರೆಯಬೇಕು. ಪ್ರಿಲಿಮಿನರಿ ವರ್ಕ್ ಮಾಡುತ್ತಾ ಇರಬೇಕು. ಇಲ್ಲದಿದ್ದರೆ ಖಂಡಿತಾ ನಮ್ಮ ದೇಶದಲ್ಲಿ ತಕ್ಷಣ ಪ್ರಯೋಜನವಾಗುವುದಿಲ್ಲ. ಒಂದು ಮಂತ್ರಿಮಂಡಲ ಬಂದಾಗ ಹಾರಂಗಿ ಪ್ರಾಜೆಕ್ಟ್ ಮಾಡಬೇಕು ಎಂದು ಹೇಳುತ್ತಾರೆ. ಇನ್ನೊಂದು ಮಂತ್ರಿ ಮಂಡಲ ಬಂದಾಗ ಕಂಬದಕಡ ಪ್ರಾಜೆಕ್ಟ್ ಮಾಡಬೇಕು ಎಂದು ಹೇಳುತ್ತಾರೆ. ಈರೀತಿ ಮಾಡಬಾರದು. ಯಾರೇ ಬರಲಿ ಒಂದು ಪಾಲಿಸಿ ಹಾಕಿಕೊಳ್ಳಬೇಕು. ತಮ್ಮ ತಮ್ಮ ಪ್ರಭಾವ, ತಮ್ಮ ತಮ್ಮ ಸ್ವಪ್ರತಿಷ್ಠೆಗೋಸ್ಕರ ತಮಗೆ ಬೇಕಾದ್ದನ್ನು ಮಾಡುತ್ತಾ ಇದ್ದಾರೆ. ಹಿಂದಿನ ಲೋಕೋಪಯೋಗಿ ಶಾಖೆಯ ಮಂತ್ರಿಗಳು ಯಾವರೀತಿ ನಡೆಸುತ್ತಿದ್ದರು ಎನ್ನತಕ್ಕ ವಿಚಾರವನ್ನು ಶ್ರೀಮತಿ ನಾಗರತ್ನಮ್ಮನವರು ಹೇಳಿದರು.

ಶ್ರೀ ಬಿ. ಡಿ. ಜತ್ತಿ.—ಅದು ಲೋಕಲ್ ವಿಷಯ. ಅದನ್ನು ಬಿಟ್ಟು ಬಿಡಿ.

ಶ್ರೀ ಬಿ ಹ ಚ್ಚೇಗೌಡ.—ಇನ್ನು ಅರಣ್ಯ ಇಲಾಖೆಯ ವಿಷಯವನ್ನು ಹೇಳುವುದಾದರೆ ಕಬ್ಬಿಣದ ಕಾರ್ಖಾನೆಗೆ ಈಗ 10-12 ವರ್ಷಗಳಿಂದ ಕಾಡಿನಲ್ಲಿ ಸೌದೆಯನ್ನು ಕೊಡುತ್ತಿದ್ದಾರೆ. ಮತ್ತು ದಾಂಡೇಲಿ ಪೇಪರ್ ಕಾರ್ಖಾನೆಗೆ ಸೌದೆಯನ್ನು ಕೊಡುತ್ತಿದ್ದಾರೆ. ಅವರಿಗೆ ಕೆಲವು ಫಾರೆಸ್ಟ್ ಏರಿಯಾವನ್ನು ಕೊಟ್ಟು ಅವರು ಕಾಡನ್ನು ಕಡಿದು ಹಾಕಿ ಅದನ್ನು ಬೆಳೆಸಿಕೊಂಡು ಹೋಗಲಿ. ಸರ್ಕಾರದ ಮ್ಯಾನೇಜ್‌ಮೆಂಟಿನಲ್ಲಿ ಸೌದೆಯನ್ನು ಕತ್ತರಿಸಿ ಅವರಿಗೆ ಕೊಡಬೇಕಾದರೆ ಸರ್ಕಾರದವರಿಗೆ ಖರ್ಚು ವೆಚ್ಚ ಹೆಚ್ಚಾಗುತ್ತದೆ. ಇದರ ಜೊತೆಗೆ ಅದನ್ನು ಕಡಮೆ ಬೆಲೆಗೆ ಬೇರೆ ಕೊಡಬೇಕು. ಅವರು ಒಂದು ಸಾವಿರ ಎಕರೆ ಫಾರೆಸ್ಟ್ ತೆಗೆದುಕೊಂಡು ಫಾರೆಸ್ಟ್ ಬೆಳೆಸಿಕೊಳ್ಳಲಿ.

ಅದನ್ನು ಬಿಟ್ಟು ನಿಮ್ಮ ಖರ್ಚು ವೆಚ್ಚವನ್ನು ಅವರಿಗಾಗಿ ಕೊಡುವುದು ನ್ಯಾಯವಲ್ಲ, ಅದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಹಳ್ಳಿಯ ರಸ್ತೆಗಳು ಸುಮಾರು ೩,೦೦೦ ಮೈಲಿ ಮಾತ್ರ ಕೊಟ್ಟಿದ್ದೀರಿ. ಅದು ಸರಿಯಲ್ಲ. ಹಿಂದಿನ ವರ್ಷದಲ್ಲಿ ಹತ್ತು ಸಾವಿರ ಮೈಲಿಯವರೆಗಿತ್ತು. ಅದರಂತೆ ಹತ್ತು ಸಾವಿರ ಮೈಲಿಗಳವರೆಗೂ ಏರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet again to-morrow at one P.M.

The House adjourned at Twenty-One Minutes past Six of the Clock to meet again at One of the Clock on Friday, the 6th July 1962.

WD 8218—GPB—900—5-1-1963